
ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ
ಸಂಪುಟ 3 ಸಂಚಿಕೆ 29
5/-
ಜುಲೈ 19, 2009
ಕನ್ನಡ ವಾರಪತ್ರಿಕೆ





ಮೈಸೂರು : ಯೋಜಿತ ಕೋಮುಗಲಭೆಗೆ ಅಮಾಯಕರ ಬಲಿ



ಆರ್ಥಿಕ ಬಿಕ್ಕಟ್ಟನ್ನು ಎದುರಿಸಲು ಸೋತ ಕೇಂದ್ರ ಬಜೆಟ್






ಬೃಹತ್ ಬೆಂಗಳೂರು ಸಮಸ್ಯೆಗಳು

ವಿಚಾರಸಂಕಿರಣ

ಬಸ್ ದರ ಏರಿಕೆ : ಪ್ರಯಾಣಿಕರ ಮೇಲೆ ಅನಗತ್ಯ ಹೊರೆ



ಗೋ ಹತ್ಯೆ ನಿಷೇಧ : ಆಹಾರದ ಹಕ್ಕಿನ ಮೇಲೆ ದಾಳಿ

ದಲಿತ ಮತ್ತು ಅಲ್ಪಸಂಖ್ಯಾತ ವಿರೋಧಿ ಬಿ.ಜೆ.ಪಿ. ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದ ಮೇಲೆ ದಲಿತರ ಮೇಲೆ ದೌರ್ಜನ್ಯಗಳು ಹೆಚ್ಚಾಗತೊಡಗಿವೆ. ಹಲ್ಲೆಗೊಳಗಾದ ದಲಿತರ ಮೇಲ್ಲೇ ಕೇಸು ದಾಖಲಾಗುತ್ತಿವೆ. ಕೆಲವು ಕಡೆ ಸೀಮೆ ಎಣ್ಣೆ ಸುರಿದು ಬೆಂಕಿ ಹಚ್ಚುವ ಬೆದರಿಕೆ ಕೇಳುಬರುತ್ತಿವೆ. ಬಹಿಷ್ಕಾರದ ಅಸ್ತ್ರವನ್ನು ದಲಿತರ ಮೇಲೆ ಬಳಸಲಾಗುತ್ತಿದೆ. ರಾಯಚೂರು ಜಿಲ್ಲೆಯಲ್ಲಿ ನಡೆದಿರುವ ಎರಡು ದೌರ್ಜನ್ಯ ಪ್ರಕರಣಗಳ ವರದಿ ಇಲ್ಲಿದೆ. ಒಂದು ಇತ್ತೀಚಿನದು, ಮತ್ತೊಂದು ಹಳೆಯ ಘಟನೆಯ ಮುಂದುವರಿಕೆ.

ದಲಿತರ ಮೇಲೆ ನಡೆಯುವ ದೌರ್ಜನ್ಯಕ್ಕೆ ಕೊನೆ ಎಂದು?

'ಮೇಲು ಜಾತೇರಕಾಲ ಕಸ ಆಗಿ...'

08.03.2009 ರಂದು ಮುಂಜಾನೆ ಪತ್ರಿಕೆ ಕೈಗೆ ತಗೊಂಡಾಗ ನನ್ನ ಕಣ್ಣು ಕುಕ್ಕಿದ್ದು, ಮಾನ್ವಿ ತಾಲೂಕಿನ ತಡಕಲ್ ಗ್ರಾಮದಲ್ಲಿ ದಲಿತರ ಮತ್ತು ಸವರ್ಣೀಯರ ನಡುವೆ ಮಾತಿನ ಚಕಮಕಿ ನಡೆದ ಘಟನೆಯ ತುಣುಕು ವರದಿ. ದಿನಗಳು ಕಳೆದಂತೆ ಅದರ ತೀವ್ರತೆ ಹೆಚ್ಚಿ ದಲಿತ ಸಂಘಗಳು ಹೋರಾಟಕ್ಕೆ ಇಳಿದವು. 14.03.2009 ರಂದು ಕಾಂ.ಯಂಕಪ್ಪ ನಾನು ಸೇರಿ ಇಬ್ಬರು ತಡಕಲ್‌ಗೆ ಭೇಟಿ ಕೊಡಲು ಹೊರಟೆವು. ಸುಮಾರು 12 ಗಂಟೆಗೆ ತಡಕಲ್ ತಲುಪಿದೆವು. ನಮ್ಮ ಬರುವಿಕೆಯನ್ನೇ ಕಾದು ಕುಳಿತ ಕನಿಷ್ಟ 30 ಜನ ದಲಿತರು ನಮ್ಮನ್ನು ನೋಡಿ ಮುಖ ಅರಳಿಸಿದರು. ಅವರು ನಮ್ಮಿಂದ ಏನೋ ನಿರೀಕ್ಷಿಸಿದಂತೆ ಕಂಡುಬಂತು. ಒಂದು ಪುಟ್ಟ ಮನೆಗೆ ಕರೆದುಕೊಂಡು ಹೋದರು. ಆ ಕೋಣೆ ಒಳಗೆ ನಾವೆಲ್ಲಾ ಕುಳಿತುಕೊಂಡೆವು. ಬಾಗಿಲ ಮುಂದೆ ಮಹಿಳೆಯರು ಬಂದು ಸೇರಿದರು. ತಮ್ಮ ಮೇಲೆ ನಡೆದ ದಾಳಿಯ ಕಥೆ ಬಿಚ್ಚಿಡಲು ಶುರು ಮಾಡಿದರು -

"ನಮ್ಮ ತಾತ ಮುತ್ತಾತನ ಕಾಲದಿಂದ ಗೌಡ್ರ ಮನಿಯಾಗ ಮನೆ ಮಕ್ಳಾಗಿ ದುಡ್ದು, ಮುಪ್ಪಾಗಿ ಹೋದ್ವಿ. ಮೇಲು ಜಾತೇರ ಕಾಲ ಕಸ ಆಗಿ ಅವ್ರು ಹಾಕಿದ ಗೆರಿ ದಾಟದಂಗ ನಡಕೊಂಡುಬಂದ್ವಿ. ಆದ್ರ ಅವರಿಂದ ನಮಗೆ ಇಷ್ಟು ಅನ್ಯಾಯ ಆಗಬಾರದಿತ್ತಪ್ಪ" ಎಂದು ಮಾತು ಶುರು ಮಾಡಿದ ಅಂತೋನಿ ತನ್ನ ಎದೆಯಲ್ಲಿ ಮಡುಗಟ್ಟಿದ ನೋವನ್ನು ಒಂದೊಂದೇ ಬಿಡಿಸುತ್ತಾ ಹೋದ. "ಇದೆಲ್ಲ ನಮಗಾಗಿ ಕೊಟ್ಟ ಜಾಗ, ಇದ್ರಾಗ ಮನಿ ಆಗ್ಯಾವ, ರೋಡು ಸೈಡಿಗೆ ನಾಲ್ಕು ಪ್ಲಾಟು ಉಳ್ಕಾಂಡಿದ್ದು. ಅಲ್ಲಿ ಸಮುದಾಯ ಭವನ ಕಟ್ಟಸ್ಬೇಕು ಅಂಬೋ ವಿಚಾರ ನಮಗಿತ್ತು. ನಮ್ಮೂರಿಗೆ ಸರಕಾರಿ ದವಾಖಾನೆ ಮಂಜೂರಿ ಆಯ್ತು. ಅದನ ಕಟಸಾಕ,ಊರ ಮಂದಿ ಸೇರಿ ಊರ ಮೇಕ ಜಾಗ ಗೊತ್ತುಮಾಡಿ ಬಂದಿದ್ರ. ಆ ಜಾಗ ಬಿಟ್ಟು 'ಏಳ್ದೆ ಕೇಳ್ದೆ ಖಾಲಿ ಇದ್ದ ನಮ್ಮ ಜಾಗಾದಾಗ ಊರಿನ ಮುಖಂಡ್ರು ಬುನಾದಿ ತೋಡ್ಲಾಕ ಶುರು ಮಾಡಿದ್ರು. ಇದು ನಮ್ಮ ಜಾಗಾರಿ, ಇದ್ರಾಗ ಕಟ್ಟಸಬ್ಯಾಡ್ರಿ ಅಂತಾ ನಾವು ಕೇಳಿದ್ದೇ ತಪ್ಪಾಯ್ತು ನೋಡ್ರಿ. ಎಷ್ಟು ಕೇಳಿಕೊಂಡ್ರು ಅವ್ರು ಕೇಳಲಿಲ್ಲಾ. ನಾವು ಆಫೀಸ್ ಗೀಫಿಸು ಅಂತಾ ತಿರುಗಾಡಿದ್ವಿ. ಯಾರೂ ನಮ್ಮ ಮಾತು ಕಿವ್ಯಾಕ ಆಕ್ಯಂಡ್ಲಿಲ್ಲ. ಜನೇವರಿ 21 ರಂದು ದಾರಿಗೆ ನೀರು ಚೆಲ್ಲೋ ಸಮ್ಮಂದ ನಮ್ಮೂಡ ಜಗಳ ತಗದ್ರ, ನಾವು ಅವ್ರ ನಾಕುಮಂದಿಮ್ಯಾಲೆ ಕೇಸು ಕೊಟ್ಟೇವಿ. ಆದ್ರ ಪೊಲೀಸ್ರು ಅವರ್ನ ಮಾತಾಡ್ಸಲಿಲ್ಲ. ನಮ್ಮೋರು ಮೂರು ಜನರ ಹಿಡ್ಕಂಡೋಗಿ ಒಳಗ ಹಾಕಿದ್ರು.

ಬಾಗ್ಲಿ ಗುದ್ದಿ ಬಂದು, ಒಳಗಿದ್ದೋರ್ನ ಹೊರಗೆಳ್ದು...

ಆವತ್ತಿನಿಂದ ಗುರುಮುಸು ಇತ್ತಾ ಇತ್ರಿ. ಇದಾದ ಸ್ವಲ್ಪ ದಿನದಾಗ 7.3.09 ರಂದು ನಮ್ಮ ನಮ್ಮೊಳಗ ಜಗಳ ಹಚ್ಚಿದ್ರ, ನಮ್ಮೂಡ ಗುದ್ಯಾಡಿಸಿ ಅವ್ರ ಪರ ನಿಂತ್ರು. ಅದೇ ನೆಪ ಮಾಡ್ಕೊಂಡು ಊರ ಜನ ನಮ್ಮ ಕೇರಿಗೆ ನುಗ್ಗಿದ್ರು. ಅವ್ರ ಕೇಕೇ ಹೊಡ್ಕೊಂಡ್ ಬರೋದು ನೋಡಿ ನಾವು ಮನೆ ಹೊಕ್ಕೊಂಡು ಬಾಗಿಲು ಹಾಕಿಕೊಂಡಿವಿ. ಆದ್ರೂ ಬಿಡಲ್ಲಿಲ್ಲಾ. ಬಾಗ್ಲಿ ಗುದ್ದಿ ಬಂದು ಒಳಗಿದ್ದೋರ್ನ ಹೊರಗೆಳ್ದು ದನಕ ಬಡಿದಂಗ ಬಡದರ್ರೀ. ವಳ್ಗ ಹಾಕಿ ಬಾಗ್ಲಿ ಮುಚ್ಚಿ, ಸೀಮೆ ಎಣ್ಣೆ ಉಗ್ಗಿ ಬೆಂಕಿ ಹಚ್ಚಿ ಅಂತಾ ವರಗಿ ಜನ ಕೂಗಾಡೋದು ಕೇಳಿ ನಮ್ಮ ಕತಿ ಮುಗೀತು ಅಂತಾ ತಿಳಿದಿದ್ದೀವ್ರಿ. ಆ ಮೇಲೆ ಅವ್ರೆಲ್ಲ ಸಭೆ ಸೇರಿ ನಮಗ್ ಬಹಿಷ್ಕಾರ ಹಾಕೋ ನಿರ್ಣಯ ತಗೊಂಡಾರ್ರಿ. ನಮ್ಮನ್ನು ಮಾತಾಡ್ಸಿ ದೋರಿಗೆ 500 ರೂ. ದಂಡ ಹಾಕ್ಬೇಕು. ಯಾರೂ ಕೆಲ್ಸಕ್ಕ ಕರಿಬಾರ್ದು, ಆಟೋದಾಗ ಕುಂದ್ರಿಸ್ಗಾಬಾರ್ದು. ಅವ್ರೇನಾರ ಕೇಳಿದ್ರ ಕೊಡಬಾರ್ದು ಅಂತಾ ಕಂಡಿಶನ್ ಹಾಕ್ಯಾರ್ರಿ. ಏನಾದ್ರ ಬೇಕಾದ್ರ 6 ಕಿ.ಮೀ ದೂರದ ಪೋತ್ನಾಳಿಗೆ ಹೋಗಬೇಕು. ನಡಕಂತ ಹೋಗಿ ಬರಾದ್ರಾಗ ಅರ್ಧ ದಿನ ಕಳೀತೈತ್ರೀ. ಟೈಮ್ ಸರಿಯಾಗಿ ಬಸ್ಸು ಇಲ್ಲ." ಇಷ್ಟೆಲ್ಲಾ ಹೇಳುವುದರೊಳಗೆ ಚಹಾ ತರಿಸಿದರು. ಚಹಾ ಹೀರುತ್ತಾ ಚಹ ಎಲ್ಲಿಂದ ತಂದಿರಿ ಎಂದು ಪ್ರಶ್ನಿಸಿದೆ. ಹೋಟಲಿಂದ ತರ್ಸೀವಿ ಎಂದರು. ಬಹಿಷ್ಕಾರ ಹಾಕಿದ ಮೇಲೆ ಚಹಾ ಎಂಗೆ ಕೊಟ್ಟರು ಎಂದು ಕೇಳಿದೆ. ಹೋಟೆಲ್ ಮತ್ತು ಕಿರಾಣಿ ಅಂಗಡಿ ಈ ಯರಡಕ್ಕ ಬಹಿಷ್ಕಾರ ಇಲ್ಲ ಎಂದರು.



ದೌರ್ಜನ್ಯಕ್ಕೆ ಒಳಗಾದ ದಲಿತರೊಂದಿಗೆ ಮಾತನಾಡುತ್ತಿರುವ ಸಿಪಿಐ(ಎಂ) ಮುಖಂಡ ಮಾರುತಿ ಮಾನ್ಪಡೆ

ಚಹ ಕುಡಿಯುವುದು ಮುಗಿಯಿತು. ಮತ್ತೆ ತಮ್ಮ ಕಥೆ ಹೇಳಲು ಶುರು ಮಾಡಿದರು. ನಾವು ಅವರ 66 ಜನರ ಮೇಲೆ ಕೇಸು ಬರೆಸಿ ಬಂದಿವ್ರಿ. ಅದ್ರ ಗೌಡ್ರ ಏನೇಳಿ ಬಂದ್ರೋ ಪೊಲಿಸ್ರ ಅವ್ರ ತಂಟ್ಯಾಕ ಹೋಗ್ಲಿಲ್ಲ. 8 ಜನ ನಮ್ಮೋರ್ನ ಹಿಡಕಂಡೋಗಿ 5 ದಿನ ಜೈಲಾಗ ಇಟ್ಟರ್ರಿ. ಕಂಡೋರ ಕಾಲು ಹಿಡ್ಕಂಡು ಹೊರಗ ಬಂದಿವ್ರಿ. ಆ ಮೇಲೆ ನೋಡ್ರಿ ಮತ್ತೆ ಅವ್ರ ಸಭೆ ಸೇರಿ ನಮ್ಮ ಮೈಮೇಲೆ ದಾಳಿ ಮಾಡಾಕ ಖರ್ಚಿಗಂತ 4 ಲಕ್ಷ ರೂಪಾಯಿ ಪಟ್ಟಿ ಮಾಡಿ ಇಟ್ಟಾರ್ರಿ. ಈ ಸುದ್ದಿ ತಿಳಿದಾಗಿನಿಂದ ನಮಗ್ ಜೀವ್ದಾಗ ಜೀವ ಇಲ್ಲಾರಿ" ಎಂದರು. "ಇದ್ರ ಹಿಂದೆ ಯಾರಾದ್ರು ಇರ್ಬೇಕಲ್ಲ" ಎಂದು ಕೇಳಿದೆವು. ಅದಾರ್ರಿ ಶ್ರೀಶೈಲಗೌಡ, ಅಯ್ಯನಗೌಡ, ಇವ್ರಿಂದ ನಾಕು ಜನ ಸಾಹುಕಾರರು ಆದಾರ ಎಂದರು. ಇವರ ಹೆಸರು ಕೇಳಿದೊಡನೆ ಇವರ ತಂದೆ ಯಂಕನಗೌಡನ ನೆನಪಾಯಿತು. ಇವರ ಮನೆತನ ಭೂ ಮಾಲಕ ಮನೆತನ. ಹಿಂದಿನ ತಲೆಮಾರಿನಿಂದ ದರ್ಪ ನಡೆಸಿದವರು. ಇವರ ರೌಡಿಜಂಗೆ ಕೊನೆಯೇ ಇರಲಿಲ್ಲಾ. ಇವರು ಹೇಳಿದ್ದೇ ಮಾರ್ಗ. ಇವರು ನುಡಿದದ್ದೇ ದಾರಿ. ಹಿಂದಿನ ತಲೆಮಾರಿನ ದಲಿತರು ಇವರ ಅಂಗರಕ್ಷಕರಾಗಿ ತಮ್ಮ ಪ್ರಾಣವನ್ನೇ ಪಣವಾಗಿಟ್ಟು ದುಡಿದಿರುವರು.

ವಾರ್ಡಿನ ಮಂಚಗಳೆಲ್ಲಾ ದಲಿತರ ಪಾಲು

ಇನ್ನೂ ಹಸಿ ಹಸಿಯಾಗಿ ತಡಕಲ್ ಘಟನೆ ಜೀವಂತ ಇರುವಾಗಲೇ ಮತ್ತೊಂದು ದಾಳಿ ಶುರುವಾದದ್ದು ಸಿಂಧನೂರು ತಾಲೂಕಿನ ಸಿಂಗಾಪೂರದಲ್ಲಿ. 3.6.2009 ರಂದು ರಾತ್ರಿ ಹಟ್ಟಿಯಲ್ಲಿ ಉಳಿದುಕೊಂಡು ಮುಂಜಾನೆ 4.6.2009 ರಂದು ವಿಜಯ ಕರ್ನಾಟಕ ಓದುವಾಗ ಎರಡನೇ ಪುಟದ ಒಂದು ಮೂಲೆಯಲ್ಲಿ ಸಿಂಗಾಪುರದ ಘಟನೆ ಪ್ರಕಟಗೊಂಡಿತ್ತು. ಸಿಂಗಾಪೂರಕ್ಕೆ ಫೋನಾಯಿಸಿ ನನ್ನಪ್ಪನ ವಿಚಾರಿಸಿದೆ. ಹೌದು ಜಗಳ ನಡೀತು. ಎಲ್ಲರೂ ಸಿಂಧನೂರು ಸರಕಾರಿ ಆಸ್ಪತ್ರೆಯಲ್ಲಿ ಇರುವರು. ಊರಲ್ಲಿ ಯಾರೂ ಇಲ್ಲ ಎಂದ. ಆ ದಿನ ಮುದಗಲ್ಲಿಗೆ ಹೋಗುವ ಕಾರ್ಯಕ್ರಮ ಬಿಟ್ಟು ಸಿಂಧನೂರು ಬಸ್ಸು ಹತ್ತಿದೆ. ನೇರವಾಗಿ ಆಸ್ಪತ್ರೆಗೆ ಭೇಟಿಕೊಟ್ಟೆ. ರೋಗಿಗಳ ವಾರ್ಡಿನ ಎಲ್ಲಾ ಮಂಚಗಳು ಇವರ ಪಾಲಾಗಿದ್ದವು. ಎಲ್ಲರಿಗೂ ಕೈಗೋ ಕಾಲಿಗೋ ತಲೆಗೋ ಬ್ಯಾಂಡೇಜು ಕಟ್ಟಲಾಗಿತ್ತು. ಒಟ್ಟು 19 ಜನ ಗಾಯಗೊಂಡು ಮಲಗಿದ್ದರು. 5 ಜನರನ್ನು ಹೆಚ್ಚಿನ ಚಿಕಿತ್ಸೆಗಾಗಿ ಬಳ್ಳಾರಿ ಆಸ್ಪತ್ರೆಗೆ ಕಳಿಸಲಾಗಿತ್ತು. ಗಾಯಗೊಂಡವರ ನರಳಾಟ ಮನ ಕಲಕುವಂತಿತ್ತು. ಗಾಯಗೊಂಡವರ ಸ್ಥಿತಿ ನೋಡಿದವರಿಗೆ ಹಲ್ಲೆಯ ಭೀಕರತೆ ಅರಿವಾಗುತ್ತಿತ್ತು. ಹಲ್ಲೆಗೊಳಗಾದವರ ಬಂಧುಗಳು ಸ್ನೇಹಿತರು ಅವರ ಉಪಚಾರದಲ್ಲಿ ತೊಡಗಿದ್ದರು. ನಡೆದ ಘಟನೆಯ ಬಗ್ಗೆ ಪೂರ್ತಿ ತಿಳಿದುಕೊಳ್ಳಲು ಸಾಧ್ಯವಾಗಲಿಲ್ಲ. ದಲಿತ ಮುಖಂಡ ಹುಸೇನಪ್ಪನ ಭೇಟಿಯಾಗಿ ನಮ್ಮ ಸಹಾಯದ ಬಗ್ಗೆ ವಿಚಾರಿಸಿದೆ. ಸದ್ಯ ಅದೇನು ಬೇಡ, ನೀವು ಬಂದದ್ದಕ್ಕೆ ಸಂತೋಷ ಎಂದರು.

ಹೊಳೆದಂಡೆಯಲ್ಲಿ...

ಮರುದಿನ 5.6.2009 ರಂದು ಕಾಂ.ಅಪ್ಪಣ್ಣ ಕಾಂಬ್ಳೆ, ಕಾಂ.ನಾರಾಯಣಪ್ಪ ಕಿಲ್ಲೇದ, ಕಾಂ.ಹೆಚ್.ವಿ.ಗುಡಿ, ನಾವು (ನರಸಿಂಹಪ್ಪ) ಆಸ್ಪತ್ರೆಗೆ ಭೇಟಿಕೊಟ್ಟೆವು. ಹುಸೇನಪ್ಪನನ್ನು ವಿಚಾರಿಸಿದೆವು. ಹುಸೇನಪ್ಪ ಹೇಳಲು ಮುಂದಾದಾಗ ಏಕೋ ಆತ[...] ನಾಲಿಗೆ ಭಯಗೊಂಡವರಂತೆ ತೊದಲುತ್ತಿತ್ತು "03.06.09 ರಂದು 90 ವರ್ಷದ ಹಣ್ಣು ಹಣ[...] ಮುದುಕಿ ಹುಸೇನಮ್ಮ ತೀರಿಕೊಂಡಿದ್ದಳು. ಆಕೆಯ ಅಂತ್ಯಕ್ರಿಯೆಗೆ ಸುತ್ತಲ ಗ್ರಾಮಸ್ಥರು ಬಂದಿದ್ದರು ಸಾಯಂಕಾಲ 5 ಗಂಟೆಗೆ ಅಂತ್ಯಕ್ರಿಯೆ ಮುಗಿಸಿ [...] ಊರುಗಳಿಗೆ ಹೋದರು. ಹೊಳೆದಾ[...] ಹೋಗುವವರು ಹೊಳೆ ದಂಡೆಗೆ ಹೋದರು. ಹೊ[...] ದಾಟಿಸಲು ಒಬ್ಬರಿಗೆ ನಾಲ್ಕು ರೂಪಾಯಿ ಪಡೆಯಬೇಕಿದ್ದ ಅಂಬಿಗರು 10 ರೂಪಾಯಿ ಕೊಡುವಂತೆ ಒತ್ತಾಯಿಸತೊಡಗಿದರು. ಬಂದವರನ್ನು ಕಳಿಸಲು ನದಿ ದಂಡೆವರೆಗೆ ಹೋಗಿದ್ದ ಗುಂಡ[...] "10 ರೂಪಾಯಿ ಏಕೆ ಕೇಳುವಿರಿ. ರಿವಾಜಿನಂ[...] ತಗೊಳ್ರಿ" ಅಂದದ್ದೇ ತಪ್ಪಾಯಿತು. ಅಲ್ಲೇ ಇ[...] ತಮ್ಮಣ್ಣನೆಂಬ ಯುವಕ ಗುಂಡಪ್ಪನೊಡನೆ ಜಗ[...] ತೆಗೆದು, ತನ್ನ ಸ್ನೇಹಿತರೊಡನೆ ಸೇರಿ ಗುಂಡಪ್ಪನನ್ನು ಥಳಿಸಿದರು. ಗುಂಡಪ್ಪ ಮನೆಗೆ ಬಂದು ತಮ್ಮವರನ್ನು ಕರೆದುಕೊಂಡು ಬಡಿದದ್ದು ಏಕೆ ಎಂದು ಕೇಳಲು ಹೋದಾಗ ತಿಮ್ಮಣ್ಣ ಮತ್ತೆ ಅಲಕ ಸಲಕಾ ಮಾತಾ[...] ಕೈ ಮಿಲಾಯಿಸಿದ. ಅವರೆಲ್ಲ ಸೇರಿ ತಿಮ್ಮಣ್ಣನಿಗು ಹೊಡೆದರು. ಈ ಸುದ್ದಿ ಊರೆಲ್ಲ ಹಬ್ಬಿತು."

ಮನಸ್ಸು ಬಂದಂತೆ ಬಡಿದರು

"ಸವರ್ಣೀಯರೆಲ್ಲ ಗುಂಪು ಸೇರಿ ಏಕಾಏಕಿ ಕೇಕೆ ಹಾಕುತ್ತ ನಮ್ಮ ಕೇರಿ ಹೊಕ್ಕರು ನಾನು ಅವರನ್ನು ತಡೆದು ಕುಂತು ಮಾತಾಡೋಣ. ಇಷ್ಟೆಲ್ಲಾ ಏ[...] ಗಲಾಟೆ ಮಾಡುವಿರಿ ಎಂದು ಗುಂಪಿನ ಮುಖಂ[...] ಅವರೇಶಪ್ಪನ ಕೇಳಿದೆ. ಆ ಮಾತಿಗೆ ಆತ ಒ[...] ವಾಪಾಸು ಕರೆದುಕೊಂಡು ಹೋದ. ನಮ್ಮ ಕೇ[...] ಇನ್ನೂ ದಾಟಿರಲಿಲ್ಲಾ. ಒಮ್ಮೆಗೆ ಕೇಕೇ ಹಾಕುತ್ತಾ [...] ಗುಂಪನ್ನು ವಾಪಾಸು ಕರೆದುಕೊಂಡು ಬಂದ ಅವ[...] ರೊಚ್ಚು ಆವೇಶ ನೋಡಿ ಕೇರಿಯ ಜನ ಮನೆಬಿಟ್ಟು ಓಡಿದರು. ಮನೆ ಒಳಗೆ ನುಗ್ಗಿದ ಗುಂಪು ಸಿಕ್ಕವರನ್ನು ಮನಸ್ಸು ಬಂದಂತೆ ಹೊಡೆದರು. ಓಡಿಹೋದವರನ್ನು ಬೆನ್ನಟ್ಟಿ ಹೊಡೆದರು. ಅವರ ಹೊಡೆತಕ್ಕೆ 10 ಜ[...] ಹೆಣ್ಣುಮಕ್ಕಳು ಸೇರಿ ಒಟ್ಟು 24 ಜನರಿಗೆ ಪೆಟ್ಟು ಬಿದ್ದಾವ. ಮೂರೆಪ್ಪ ಎಂಬುವವರ ಕೈ ಮುರಿದಿದೆ. 5 ಜನರನ್ನು ಬಳ್ಳಾರಿ ಆಸ್ಪತ್ರೆಗೆ ಕಳಿಸಿದೆವು" ಎಂದರು. ಕೇಸು ದಾಖಲಿಸಿದ ಬಗ್ಗೆ ವಿಚಾರಿಸಿದೆವು. 4[...] ಸವರ್ಣೀಯರ ಮೇಲೆ ಕೇಸು ದಾಖಲಾಗಿದೆ. [...] ನಮ್ಮ 19 ಜನರ ಮೇಲೆ ಕೌಂಟರ್ ಕೇಸು ಮಾಡಿರುವರು ಎಂದು ಹೇಳುತ್ತಾ ಹುಸೇನಪ್ಪ ನಿಟ್ಟುಸಿರು ಬಿಟ್ಟ.

22.06.2009 ರಂದು ಸಿಪಿಐ(ಎಂ) ಮುಖಂಡರಾದ ಕಾಂ.ಮಾರುತಿ ಮಾನ್ಪಡೆಯವರ ಮುಖಂಡತ್ವದಲ್ಲಿ ಕಾಂ.ಮಲ್ಲಯ್ಯ ಜಾಲಹಳ್ಳಿ, ಕಾಂ.ಹನುಮನಗೌಡ, ನಾನು ಕಾಂ.ಶಮ್ಸುದ್ದೀನ್, ಕಾಂ.ಕರಿಯಪ್ಪ ಅಚ್ಚೊಳ್ಳಿ ಮತ್ತೆ ಸಿಂಗಾಪುರಕ್ಕೆ ಭೇಟಿ ಕೊಟ್ಟೆವು. ಹಲ್ಲೆಗೊಳಗಾದವರನ್ನು ವಿಚಾರಿಸಿದೆವು. ಸರಕಾರದ ನೆರವಿಗಾಗಿ ಹೋರಾಟಕ್ಕೆ ಸಿದ್ಧರಾಗುವಂತೆ ಮಾನ್ಪಡೆ ಯವರು ತಿಳಿಸಿದಾಗ ಎಲ್ಲರು ಒಪ್ಪಿಕೊಂಡರು. ನಮ್ಮ ಜಿಲ್ಲೆಯಲ್ಲಿ ದಲಿತರ ಬದುಕು ಇನ್ನೂ ಸುಧಾರಿಸಿಲ್ಲ. ಅಸ್ಪೃಶ್ಯತೆಯು ಭೀಕರ[...] ಬೂದಿಮುಚ್ಚಿದ ಕೆಂಡದಂತೆ ಒಳಗೊಳ[...] ನಿಗಿನಿಗಿಸುತ್ತಿದೆ. ದಲಿತರು ಸುಧಾರಿಸಿದಲ್ಲಿ ಮೇಲ್ಜಾ[...] ಮೇಲ್ವರ್ಗದವರ ಮಡಿವಂತಿಕೆಯು ಮಾತು ಮೀರಿದಲ್ಲೆಲ್ಲ ಸ್ಫೋಟಗೊಂಡು ದಲಿತರ[...] ದಮನಿಸಲು ನಿಲ್ಲುತ್ತಿದೆ.

ವರದಿ : **ನರಸಿಂಹಪ್ಪ**, ಸಿಂಧನೂರು

ದಲಿತರ, ಅಲ್ಪಸಂಖ್ಯಾತರ ಆಹಾರದ ಹಕ್ಕು ಮತ್ತು ಗೋಹತ್ಯೆ ನಿಷೇಧ ಕಾಯ್ದೆ ಬೆದರಿಕೆ

ಜಿ.ಎನ್. ನಾಗರಾಜ್

ರಾಜ್ಯದಲ್ಲಿ ಹಲವೆಡೆಗಳಲ್ಲಿ ಅದರಲ್ಲಿಯೂ ಮುಖ್ಯವಾಗಿ ಕರಾವಳಿ ಮತ್ತು ಮಲೆನಾಡಿನ ಪ್ರದೇಶಗಳಲ್ಲಿ ದನಗಳ ಸಾಗಾಣಿಕೆ ಮತ್ತು ಹತ್ಯೆಯನ್ನು ಬಳಸಿಕೊಂಡು ಒಂದು ಕಡೆ ಹಿಂದೂ, ಮುಸ್ಲಿಂ ಕ್ರಿಶ್ಚಿಯನ್ ವಿಭಜನೆಗಳನ್ನು ತೀವ್ರಗೊಳಿಸಲಾಗುತ್ತಿದೆ ಮತ್ತೊಂದು ಕಡೆ ಮುಸ್ಲಿಂ ಕ್ರಿಶ್ಚಿಯನ್ನರ, ಜೊತೆಗೆ, ದನದ ಮಾಂಸ ಸೇವಿಸುವ ಮತ್ತು ಕೆಲವು ಹಿಂದುಳಿದ ಜಾತಿಗಳ ಆಹಾರದ ಮೇಲೆ ಧಾಳಿ ನಡೆಸಲಾಗುತ್ತಿದೆ.

ಕೋಟ್ಯಾಂತರ ಜನರ ಆಹಾರದ ಹಕ್ಕಿನ ಮೇಲೆ, ಧಾಳಿಯಾಗುತ್ತಿದೆ. ಅವರಿಗೆ ಉತ್ತಮ ಪೋಷಕಾಂಶಗಳನ್ನು ಅಗ್ಗವಾಗಿ ದೊರಕಿಸುವ ಕೆಲವೇ ಮೂಲಗಳನ್ನು ಈ ಮೂಲಕ ತಪ್ಪಿಸಲಾಗುತ್ತಿದೆ. ಇನ್ನೊಂದೆಡೆ ದನಗಳನ್ನು ಕೊಳ್ಳುವ, ವಧಾಸ್ಥಾನಗಳಿಗೆ ಸಾಗಿಸುವ ಮತ್ತು ಮಾಂಸವನ್ನು ಮಾರುವವರ ಮೇಲೆ ದಿನನಿತ್ಯವೂ ದಬ್ಬಾಳಿಕೆ ಹಾಗೂ ಹಲ್ಲೆಗಳಾಗುತ್ತಿವೆ. (ಬಾಕ್ಸ್ ನೋಡಿ)

ಕುತಂತ್ರಗಳ ಸರಮಾಲೆ

ದನದ ಮಾಂಸದ ಮಾರಾಟದ ನೆಪದಲ್ಲಿ ಹಿಂದೂ- ಮುಸ್ಲಿಂ ವಿಭಜನೆ ಮಾಡಲು ಸಂಘ ಪರಿವಾರದ ಎಲ್ಲ ಸಂಘಟನೆಗಳೂ ಹಗಲು ರಾತ್ರಿ ತೊಡಗಿವೆ. ಗೋಮಾತೆ, ಗೋರಕ್ಷಣೆಯ ಹೆಸರಿನಲ್ಲಿಯೇ ವಿಶೇಷ ಸಂಘಟನೆಗಳನ್ನು ಹುಟ್ಟುಹಾಕಲಾಗಿದೆ. ರಾಘವೇಶ್ವರ ಎಂಬ ರಾಮಚಂದ್ರಾಪುರ ಮಠಾಧೀಶರಿಗೆ (ಗೋತಳಿಗಳ ಸಂರಕ್ಷಣೆ ಹೆಸರಿನಲ್ಲಿ) ಸರ್ಕಾರದಿಂದಲೇ ಕೋಟಿಗಟ್ಟಲೆ ಸಹಾಯ ನೀಡಲಾಗಿದೆ. ಈ ಮಠದಲ್ಲಿ ಹಲವು ಬಾರಿ ಗೋತಳಿ ಉತ್ಸವಗಳನ್ನು ನಡೆಸಿ ಪತ್ರಿಕೆ ಮತ್ತು ಟಿ.ವಿ. ಲೋಕಗಳಲ್ಲಿರುವ ಆರೆಸ್ಸೆಸ್ ಭಕ್ತರನ್ನು ಬಳಸಿ ದೊಡ್ಡ ಪ್ರಮಾಣದಲ್ಲಿ ಪ್ರಚಾರ ಗಿಟ್ಟಿಸಲಾಗಿದೆ. ಇತರ ಮಠಗಳಿಗೂ ಸರ್ಕಾರದ ಹಣದಾಸೆ ತೋರಿಸಿ ಗೋಸಂರಕ್ಷಣಾ ಆಶ್ರಮಗಳನ್ನು ಮಾಡಲು ಸೆಳೆಯಲಾಗಿದೆ. ನೂರಾರು ಎಕರೆ ಸರ್ಕಾರಿ ಭೂಮಿ ನೀಡುವ ಆಮಿಷ ಒಡ್ಡಲಾಗಿದೆ. ಸಾವಯವ ಕೃಷಿಯ ಹೆಸರಿನಲ್ಲಿ ಪ್ರತಿ ತಾಲ್ಲೂಕಿನಲ್ಲಿ ಗೋಸಂರಕ್ಷಣಾ ಆಶ್ರಮಗಳನ್ನು ಮಾಡುವ, ಅದನ್ನು ಸಂಘ ಪರಿವಾರಕ್ಕೆ ಒಪ್ಪಿಸಿ ಅದರ ಹೆಸರಿನಲ್ಲಿ ಒಂದು ಕಡೆ ಸಾವಿರಾರು ಎಕರೆ ಸರ್ಕಾರಿ ಭೂಮಿ ಕಬಳಿಸುವ, ಮತ್ತೊಂದು ಕಡೆ ದಿನನಿತ್ಯವೂ ಹಿಂದು -ಮುಸ್ಲಿಂ ದ್ವೇಷದ ಕಿಚ್ಚುಹಚ್ಚುವ ಬೆಂಕಿಯ ಕೊಂಡಗಳನ್ನಾಗಿ ರೂಪಿಸುವ ದುಷ್ಟ ಯೋಜನೆಯನ್ನು ರೂಪಿಸಲಾಗಿದೆ.

ಇಂತಹ ಆಮಿಷಕ್ಕೆ ಬಲಿಯಾಗಿರುವ ಆದಿ ಚುಂಚನಗಿರಿ ಮಠದ ಬಾಲಗಂಗಾಧರ ಸ್ವಾಮೀಜಿಯವರು ಪೇಜಾವರ ಶ್ರೀಗಳಿಗಿಂತಲೂ ಜೋರಾಗಿ ಗೋ ಹತ್ಯೆ ನಿಷೇಧ ಕಾಯ್ದೆಯನ್ನು ಜಾರಿಗೆ ತರಬೇಕೆಂದು ಒತ್ತಾಯಿಸಿದ್ದಾರೆ.

1964 ರಲ್ಲಿಯೇ ಕಾಂಗ್ರೆಸ್ ನೇತೃತ್ವದ ಕರ್ನಾಟಕ ಸರ್ಕಾರ ಅಂಗೀಕರಿಸಿದ ಗೋಹತ್ಯೆಯ ಕಾಯಿದೆಯನ್ನು (ಬಾಕ್ಸ್ 2 ನೋಡಿ) ಬಳಸಿ ಭಜರಂಗದಳ ಮೊದಲಾದ ವಾನರಪಡೆಗಳು ಈಗಾಗಲೇ ಹಲವು ದಾಂಧಲೆಗಳನ್ನು(ಬಾಕ್ಸ್1) ನಡೆಸಿದೆ. ಈ ಎಲ್ಲಾ ದಾಂಧಲೆಗಳನ್ನು ಕಾನೂನು ಪ್ರಕಾರ ನಿಯಂತ್ರಿಸಿ ಈ ಕಪಿ ಸೈನ್ಯವನ್ನೂ ನಿಯಂತ್ರಿಸುವ ಬದಲು ಸರ್ಕಾರ ಅವುಗಳನ್ನೇ ಒಂದು ನೆಪವಾಗಿ ಬಳಸಿಕೊಂಡು ಈ ಕಾಯಿದೆಯನ್ನು ತಿದ್ದುಪಡಿ ಮಾಡಲು ನಿರ್ಧರಿಸಿತು. ಹಿಂದಿನ ವರ್ಷವೇ 8 ವಿಧಾನಸಭಾ ಉಪ ಚುನಾವಣೆಗಳು ನಡೆದು ಬಿಜೆಪಿ ಸ್ವತಂತ್ರವಾಗಿ ಬಹುಮತವನ್ನು ಗಳಿಸಿದ ಮರುಘಳಿಗೆಯಲ್ಲಿಯೇ ಬೆಳಗಾಂ ಅಧಿವೇಶನದಲ್ಲಿ ತಿದ್ದುಪಡಿ ಸೂಚನೆಗಳನ್ನು ಮಂಡಿಸಿತು. ಆದರೆ ಗಣಿವಿವಾದ, ಬರಗಾಲ ಇತ್ಯಾದಿ ಪ್ರಶ್ನೆಗಳು ಪ್ರಾಧಾನ್ಯತೆ ಪಡೆದಿದ್ದರಿಂದ ಈ ತಿದ್ದುಪಡಿಗಳ ಅಂಗೀಕಾರವನ್ನು ಮುಂದೂಡಲಾಗಿದೆ ಎಂದು ತಿಳಿಸಲಾಯಿತು.

ಆದರೆ ನಂತರ ಮಂತ್ರಿಮಂಡಲದಲ್ಲಿ ನಿಷ್ಠಾವಂತ ಆರೆಸ್ಸೆಸ್ಸಿಗರ ಪ್ರಮುಖರಾದ ಗೃಹಸಚಿವ ಆಚಾರ್ಯ ನಂತರ ನಡೆಸಿದ ಚಟುವಟಿಕೆಗಳಿಂದ ನಿಜವಾದ ಕಾರಣ ಬೇರೆಯೇ ಇತ್ತು ಎಂಬ ಸಂಶಯ ಪ್ರಜ್ಞಾವಂತ ಜನರಲ್ಲಿ ಮೂಡಿದೆ. ಈ ಹಿಂದೆ ತಂದಿದ್ದ ತಿದ್ದುಪಡಿಗಳು ಆರೆಸ್ಸೆಸ್‌ನ ಉದ್ದೇಶ ಅರ್ಥಾತ್ ದುರುದ್ದೇಶ ಸಾಧನೆಗೆ ಪೂರ್ಣ ಪ್ರಯೋಜನಕಾರಿಯಲ್ಲ ಎಂದು ಅವರಿಂದ ಛೀಮಾರಿಗೊಳಗಾದ್ದರಿಂದಲೇ ಅದನ್ನು ಮುಂದೆ ಹಾಕಲಾಯಿತು. ಜೊತೆಗೆ ಲೋಕಸಭಾ ಚುನಾವಣೆಗಳನ್ನು ಮುಂದಿರಿಸಿಕೊಂಡು ಇಂತಹ ಗೊಂದಲಕಾರಿ ಕಾನೂನು ತಿದ್ದುಪಡಿಗೆ ಕೈಹಾಕುವುದು ಬೇಡ. ಇದರಿಂದ ಸಿಗಬಹುದಾದ ಅಲ್ಪಸ್ವಲ್ಪ ಅಲ್ಪಸಂಖ್ಯಾತರ ಮತಗಳ ಜೊತೆಗೆ ತಮಗೆ ಬೀಳಬಹುದಾದ ದಲಿತರ ಮತಗಳಿಗೆ ದೋಖಾ ಆಗಬಹುದು ಎಂಬ ಭಯವೂ ಕಾರಣವಾಗಿದೆ ಎಂಬ ಅನಿಸಿಕೆಗಳಲ್ಲಿ ಸತ್ಯವಿಲ್ಲದಿಲ್ಲ.

ಲೋಕಸಭಾ ಚುನಾವಣೆಗಳಲ್ಲಿ ದಲಿತ,

ಪುಟ 4ಕ್ಕೆ



ಆದಿ ಉಡುಪಿಯಲ್ಲಿ ನಡೆದ ಹೀನಾಯ ದೌರ್ಜನ್ಯ

ಅಸ್ಪೃಶ್ಯತೆ

ವೈದಿಕದಿ ಅಸ್ಪೃಶ್ಯತೆ ಇಲ್ಲವೈ ಎಂದು
ಸ್ವಾಮಿಗಳೇ ಹೇಳಿಹರು ಸಭೆಯಲ್ಲಿ ಬಂದು
ಪವಿತ್ರ ನಾಲಿಗೆಯು ಉರುಳಿಸಿದ ಸುಳ್ಳು
ನಂಬಲೇ ಬೇಕಯ್ಯ ನಂಬದವ ಮಳ್ಳು

- ವಿಡಂಬಾರಿ

ಬಾಕ್ಸ್ 1: ಹೊಸ ರೀತಿಯ, ಹೊಸರುಚಿಯ ಕೇಕ್

ಒಂದು ಜಿಲ್ಲಾ ಕೇಂದ್ರ ಸಭೆಯೊಂದರ ನಂತರ ಬೇರೆ ಜಿಲ್ಲೆಗೆ ಹೋಗಲು ಬಸ್ ನಿಲ್ದಾಣ ಬಸ್‌ಗಾಗಿ ಕಾಯುತ್ತಾ ನಿಂತಿದೆ. ಅಲ್ಲಿ ಅದೇ ನಗರದ ಕೆಲವು ಹುಡುಗರು, ಬೆಳಗಿನ ಸಭೆಯಲ್ಲಿ ಭಾಗವಹಿಸಿದ್ದವರು-, ಕಾಯುತ್ತಾ ನಿಂತಿದ್ದರು.ಏತಕ್ಕಾಗಿ ಅಲ್ಲಿ ಕಾಯುತ್ತಾ ಇದ್ದಾರೆಂದರೆ ಅವರಿಂದ ಸ್ಪಷ್ಟ ಉತ್ತರ ಬರಲಿಲ್ಲ. ಅವರು ಯಾವುದೋ ಬೇರೆ ಊರಿಗೆ ಹೋಗಲೆಂದು ಬಸ್‌ಗಾಗಿ ಕಾಯುತ್ತಿರಲಿಲ್ಲ. ಬೇರೆ ಯಾವುದೋ ಊರಿಂದ ಬರುವವರಿಗಾಗಿಯೂ ಕಾಯುತ್ತಿರಲಿಲ್ಲ. ಹಾಗಾದರೆ ಮತ್ಯಾಕೆ? ಅವರು ಹೇಳಲು ಸಂಕೋಚ ಪಡುತ್ತಿದ್ದರು. ಸ್ವಲ್ಪ ಹೊತ್ತಿನಲ್ಲಿ ಅವರು ಕಾಯುತ್ತಿದ್ದ ಬಸ್ಸು ಬಂತು. ಆ ಬಸ್ಸಿನಲ್ಲಿ ಅವರಿಗಾಗಿಯೇ ಬಂದಿದ್ದ ಪ್ಯಾಕೆಟ್ ಒಂದನ್ನು ಅವರು ಪಡೆದುಕೊಂಡರು. ಅದರ ಮೇಲೆ ಯಾವುದೋ ಬೇಕರಿಯ ಹೆಸರಿತ್ತು. ಅರೆ! ಅದನ್ನು ನೇರವಾಗಿ ಕೇಳಬಹುದಿತ್ತಲ್ಲಾ! ಎಂದುಕೊಂಡು ಏನಪ್ಪಾ ನನಗೂ ಅದರಲ್ಲಿರುವ ಕೇಕೋ ಅಥವಾ ಸ್ವೀಟೊ ಕೊಡಬೇಕಾಗುತ್ತದೆಂದು ಮುಚ್ಚಿಟ್ಟಿದ್ದೀರಾ! ಏನು ಸಮಾಚಾರ! ಎಂದು ತಮಾಷೆ ಮಾಡಿದೆ. ಅದನ್ನು ತೆಗೆದು ನನಗೂ ಒಂದು ಚೂರು ಕೊಡಲು ತಿಳಿಸಿದೆ.

ಆಗ ಅವರು ನನ್ನನ್ನು ಪಕ್ಕಕ್ಕೆ ಕರೆದುಕೊಂಡು ಹೋದರು. 'ಆ ಪ್ಯಾಕೆಟ್‌ನಲ್ಲಿರುವುದು ಕೇಕ್ ಆಗಲೀ, ಸಿಹಿ ತಿಂಡಿಯಾಗಲೀ ಅಲ್ಲ. ದನದ ಮಾಂಸ ಎಂದರು. ನನಗೆ ಆಶ್ಚರ್ಯವಾಯಿತು. 'ಯಾತಕ್ಕೆ! ಅ ನಗರದಲ್ಲಿ ದನದ ಮಾಂಸ ಸಿಗುವುದಿಲ್ಲವೇ? ಅಷ್ಟು ದೂರದ ಊರಿಂದ ಯಾಕೆ ತರಿಸಿಕೊಳ್ಳಬೇಕು' ಎಂದು ಕೇಳಿದೆ. ಅವರು, 'ಅನೇಕ ತಿಂಗಳುಗಳಿಂದ ಈ ನಗರದಲ್ಲಿ ದನದ ಮಾಂಸ ಸಿಗುವುದಿಲ್ಲ. ನಮಗೆ ತಿನ್ನಲು ಆಸೆಯಾದಾಗ 70 ಕಿ.ಮಿ. ದೂರದ ಊರಿಂದ ತರಿಸಿಕೊಳ್ಳುತ್ತೇವೆ. ಅದಕ್ಕಾಗಿ ನಮಗೆ ಎರಡಷ್ಟು ವೆಚ್ಚವಾಗುತ್ತದೆ. ಕೋಳಿ ಮಾಂಸಕ್ಕಿಂತ ದುಬಾರಿಯಾಗುತ್ತದೆ ಎಂದು ವ್ಯಥೆಯಿಂದ ಹೇಳಿದರು. ನನಗೆ ಅವರ ಪರಿಸ್ಥಿತಿಗೆ ಅನುತಾಪ

ಪುಟ 4ಕ್ಕೆ

ಬಾಕ್ಸ್ 2: ಗೋ ಸಂರಕ್ಷಣಾ ಕಾಯಿದೆ ಹಾಗೂ ಕಾಂಗ್ರೆಸ್

ನಮ್ಮ ದೇಶದಲ್ಲಿ ಇಂದು ಜಾರಿಯಲ್ಲಿರುವ ಎಲ್ಲಾ ಗೋ ರಕ್ಷಣಾ ಕಾನೂನುಗಳನ್ನು ರೂಪಿಸಿದ್ದು ಅಂಗೀಕರಿಸಿದ್ದು ಜಾರಿಗೆ ತಂದಿದ್ದು ಬಿಜೆಪಿ ಎಂದು ಸಾಮಾನ್ಯವಾಗಿ ಜನರು ಭಾವಿಸಿದ್ದಾರೆ. ಆದರೆ ಇದೆಲ್ಲವನ್ನೂ ಮಾಡಿದ್ದು ಕಾಂಗ್ರೆಸ್ ಪಕ್ಷವೇ! ಕರ್ನಾಟಕ ರಾಜ್ಯದಲ್ಲಿ 'ಗೋವಧೆ ಪ್ರತಿಬಂಧಕ ಮತ್ತು ಜಾನುವಾರು ಪರಿರಕ್ಷಣೆ ಅಧಿನಿಯಮ (Karnataka Prevention of cow slaughter and cattle protection act -1964) ವನ್ನು ಅಂಗೀಕರಿಸಿದ್ದು 1964ರಲ್ಲಿ. 1964ರ ಆಗಸ್ಟ್ ಹದಿನಾಲ್ಕರಂದು ಕೇಂದ್ರ ಸರ್ಕಾರದ ಮೂಲಕ ರಾಷ್ಟ್ರಪತಿಯ ಅನುಮತಿ ಪಡೆದಿದೆ. ಆಗ ರಾಜ್ಯದಲ್ಲಿ ಮೂರನೇ ಎರಡರಷ್ಟು ಬಹುಮತವಿದ್ದ ಕಾಂಗ್ರೆಸ್ ಸರ್ಕಾರ. ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳು. ಕೇಂದ್ರದಲ್ಲಿಯೂ ರಾಷ್ಟ್ರಪತಿಗಳ ಅನುಮತಿ ಪಡೆಯುವಾಗ ಕೂಡ ಕೇಂದ್ರದಲ್ಲಿ ಅಧಿಕಾರದಲ್ಲಿದ್ದದ್ದು ಕಾಂಗ್ರೆಸ್ ಸರ್ಕಾರ.

ಇಂದು ಅಲ್ಪಸಂಖ್ಯಾತ ಜನಸಮುದಾಯ ಅದರಲ್ಲಿಯೂ ಮುಸ್ಲಿಂ ಅಲ್ಪಸಂಖ್ಯಾತ ಮಾಂಸ ವ್ಯಾಪಾರಿಗಳು ಅನುಭವಿಸುತ್ತಿರುವ ಕಿರುಕುಳಗಳು, ಸಂಕಟಗಳಿಗೆ ಯಾರು ಹೊಣೆ? ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಹೊಣೆಗಾರರು! ಅಂದು ಕಾಂಗ್ರೆಸ್ ಅಂಗೀಕರಿಸಿದ ಕಾನೂನನ್ನು ಇಂದು ಸಂಘ ಪರಿವಾರ, ತನ್ನ ಸಂಘಟನೆಗಳ ಮೂಲಕ ನೇರವಾಗಿ ಮತ್ತು ಪೋಲೀಸ್, ಇತರ ಆಡಳಿತ ವ್ಯವಸ್ಥೆಯ ಮೂಲಕ ಜಾರಿಗೆ ತರುತ್ತಿದ್ದಾರೆ.

ಸಂವಿಧಾನದಲ್ಲಿ ಗೋ ರಕ್ಷಣೆ : ಗೋ ಸಂರಕ್ಷಣೆಯ ವಿವಿಧ ರಾಜ್ಯಗಳ ಕಾನೂನುಗಳನ್ನೆಲ್ಲಾ ಜಾರಿಗೆ ತಂದದ್ದು ಕಾಂಗ್ರೆಸ್ ಪಕ್ಷದ ಸರ್ಕಾರಗಳೇ ಮತ್ತು ಈ ಕಾನೂನುಗಳನ್ನು ತರಲು ನಿರ್ದೇಶನ ನೀಡಿದ್ದು, ಒತ್ತಡ ಹೇರಿದ್ದು, ಮಾದರಿ ಕಾನೂನು ರಚಿಸಿ ರಾಜ್ಯಗಳಿಗೆ ಕಳುಹಿಸಿದ್ದು ಅಂದಿನ ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರ. ಅಂದು ಕೇಂದ್ರ ಸರ್ಕಾರಗಳ ಗೃಹಮಂತ್ರಿಗಳಾಗಿ ಈ ಕಾನೂನುಗಳ ಜಾರಿಗೆ ಒತ್ತಡ ಹಾಕಿದವರೆಲ್ಲರೂ ಸರ್ದಾರ್ ಪಟೇಲ್, ಗೋವಿಂದ ವಲಭಪಂತ್ ಮತ್ತು ಗುಲ್ಜಾರಿಲಾಲ್ ನಂದಾ. ಈ ಗೃಹಮಂತ್ರಿಗಳ ಕೀರ್ತಿ ಬಹಳವೇ ಇದೆ.

ದೇಶದ ಪ್ರಥಮ ಗೃಹ ಮಂತ್ರಿಯಾಗಿದ್ದ ಸರ್ದಾರ್‌ವಲ್ಲಭಬಾಯಿ ಪಟೇಲ್‌ರವರನ್ನು

ಪುಟ 4ಕ್ಕೆ

ದಲಿತರ, ಅಲ್ಪಸಂಖ್ಯಾತರ ಆಹಾರದ ಹಕ್ಕು...

ಪುಟ 3 ರಿಂದ

ಹಿಂದುಳಿದ ಜಾತಿಗಳ ಮತಗಳನ್ನು ಪಡೆದು 19 ಸ್ಥಾನಗಳನ್ನು ಗಳಿಸಿದ ಮೇಲೆ ಈಗ ನಿರಾತಂಕವಾಗಿ ಗೋಹತ್ಯೆ ನಿಷೇಧದ ಕಾಯಿದೆಗೆ ಕೈಹಾಕಿದ್ದಾರೆ. ಗೋಹತ್ಯೆಯ ಪ್ರಶ್ನೆ ಏನಿದ್ದರೂ ಪಶು ಸಂಗೋಪನಾ ಖಾತೆಗೆ ಸಂಬಂಧಿಸಿದ ಪ್ರಶ್ನೆ. ಆ ಖಾತೆಯ ಸಚಿವರು ಅದನ್ನು ನಿರ್ವಹಿಸಬೇಕು. ಆದರೆ ಈ ಕಾಯಿದೆಯ ಎಲ್ಲಾ ವ್ಯವಹಾರವನ್ನು ನಿರ್ವಹಿಸುತ್ತಿರುವವರು ಗೃಹಸಚಿವ ಆರೆಸ್ಸೆಸ್ಸಿಗ ಆಚಾರ್ಯರವರು. ಅವರು ಪಶು ಸಂಗೋಪನಾ ಸಚಿವ ಹಾಗೂ ಕಾನೂನು ಸಚಿವರನ್ನು ಕರೆಸಿಕೊಂಡು ಚರ್ಚಿಸಿದ್ದಾರೆ. ಈಗಿನ ಕಾನೂನಿಗೆ ತಿದ್ದುಪಡಿ ತರುವುದಕ್ಕಿಂತ ಹೊಸ ಕಾನೂನನ್ನೇ ತರುವುದು ಸಂಘ ಪರಿವಾರದ ಅವಶ್ಯಕತೆಗೆ ಹೆಚ್ಚು ಪೂರಕ ಎಂದು ತೀರ್ಮಾನಿಸಿದ್ದಾರೆ. ಈಗಿನ ಕಾನೂನು ಅನೇಕ ಪ್ರತಿಬಂಧಕಗಳನ್ನು ಹೇರಿ ಗೋಹತ್ಯೆ ಏಕೆ ಯಾವುದೇ ಪ್ರಾಣಿಯ ಹತ್ಯೆ ಕೂಡ ಬಹಳ ಕಷ್ಟಕರ ಎನ್ನುವಂತೆ ಮಾಡಿದೆ. ಆದರೂ ಕೆಲವು ರೀತಿಯ ದನಗಳ ಹತ್ಯೆಗೆ -ಬಂಜೆಯಾದ ದನಗಳು, ಮುದಿಯಾದ ಎತ್ತುಗಳು ಇಂತಹವಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಂದ ಸರ್ಟಿಫಿಕೇಟ್, ಅನುಮತಿಗಳ ನಂತರವಾದರೂ ಅವಕಾಶವಿತ್ತು.

ಈಗ ಬಿಜೆಪಿ ಸರ್ಕಾರ ಯಾವುದೇ ರೀತಿಯ ದನ, ಎಮ್ಮೆಗಳನ್ನು ಯಾವುದೇ ಕಾರಣಕ್ಕಾಗಿ ಹತ್ಯೆ ಮಾಡುವುದನ್ನು ಸಂಪೂರ್ಣ ನಿಷೇಧಿಸುವ ಕಾನೂನನ್ನು ತರಲು ಆಲೋಚಿಸಿದೆ. ಈ ಕಾನೂನು ರಾಜ್ಯದಲ್ಲಿರುವ ಶೇ.12.2 ಮುಸ್ಲಿಂ, ಶೇ.1.9 ಕ್ರಿಶ್ಚಿಯನ್, ಶೇ.16.2 ಪರಿಶಿಷ್ಟ ಜಾತಿ, ಶೇ.6.6 ಪರಿಶಿಷ್ಟ ಪಂಗಡಗಳಲ್ಲಿ ಬಹುಭಾಗ ಒಟ್ಟಾರೆ ಶೇ.37 ಜನರ ಆಹಾರ ಪದ್ಧತಿಗೆ ಹಾಗೂ ಕಡಿಮೆ ಬೆಲೆಯಲ್ಲಿ ಉತ್ತಮ ಪೋಷಕಾಂಶಗಳನ್ನು ಪಡೆಯುವುದಕ್ಕೆ ಮಾರಕವಾಗಿದೆ. ಜನಸಮುದಾಯದ ಮೇಲೆ ಬ್ರಾಹ್ಮಣ ಪುರೋಹಿತಶಾಹಿಯ ಇಚ್ಛೆಯ ಆಹಾರಪದ್ಧತಿಯನ್ನು ಹೇರಿದಂತಾಗುತ್ತದೆ. ಇದು ಅವರ ಪ್ರಜಾಪ್ರಭುತ್ವದ, ಸಮಾನತೆಯ ತತ್ವದ ಉಲ್ಲಂಘನೆಯಾಗುತ್ತದೆ. ತಮ್ಮ ದೇಶದಲ್ಲಿಯೇ ತಾವು ಪರಕೀಯರೆಂದು ಭಾವಿಸುವಂತಾಗುತ್ತದೆ. ಈ ಪರಕೀಯತೆಯ ಭಾವನೆ ಜನಸಮುದಾಯದ ಒಳಗೆ ಪ್ರತ್ಯೇಕವಾದಿ, ಉಗ್ರಗಾಮಿ ವಾದಗಳಿಗೆ ಫಲವತ್ತಾದ ಪರಿಸ್ಥಿತಿಯನ್ನು ಒದಗಿಸುತ್ತದೆ. ಮುಸ್ಲಿಂ, ಕ್ರಿಶ್ಚಿಯನ್ ಮೂಲಭೂತವಾದಕ್ಕೆ, ದಲಿತ ಪ್ರತ್ಯೇಕೀಕರಣಕ್ಕೆ ದಾರಿ ಮಾಡಿಕೊಡುತ್ತದೆ. ಸಮಾಜದಲ್ಲಿ ಹಿಂಸೆ, ಅಶಾಂತಿಗಳಿಗೆ ಕಾರಣವಾಗುತ್ತದೆ. ಆದರೆ ಬಿಜೆಪಿಗೆ, ಅದರ ಬುನಾದಿಯಾದ ಸಂಘಪರಿವಾರಕ್ಕಿದ್ದ ಉದ್ದೇಶವೂ ಅದೇ. ಮುಸ್ಲಿಂ, ಕ್ರಿಶ್ಚಿಯನ್ ಕೋಮುವಾದ ಬೆಳೆದರೆ ಅದನ್ನು ಉಪಯೋಗಿಸಿ ಹಿಂದೂಗಳನ್ನು ಕೋಮುವಾದೀಕರಣ ಮಾಡಬಹುದು. ಅವರನ್ನು ತಮ್ಮ ಖಾಯಂ ಮತ ಬ್ಯಾಂಕ್ ಆಗಿ, ಕರ್ನಾಟಕದಲ್ಲಿ ನಿರಂತರವಾಗಿ ಅಧಿಕಾರದ ಏಣಿಯಾಗಿ ಬಳಸಿಕೊಳ್ಳಬಹುದು. ಬಿಜೆಪಿಯ ಈ ಕೋಮುವಾದಿ ಕುತಂತ್ರವನ್ನು ಸೋಲಿಸಬೇಕಾದರೆ ಜನತೆಯ ಆಹಾರದ ಹಕ್ಕಿಗಾಗಿ ಎಲ್ಲ ಸಮುದಾಯದ ಜನರೂ ಸೇರಿ ಪ್ರಜಾಸತ್ತಾತ್ಮಕ ಹೋರಾಟದಲ್ಲಿ ತೊಡಗಬೇಕು. ಇದು ರಾಜ್ಯದ ಎಡ, ಪ್ರಜಾಸತ್ತಾತ್ಮಕ ಶಕ್ತಿಗಳ ಮೇಲೆ ಪ್ರಜಾವಂತರೆಲ್ಲರ ಮೇಲಿರುವ ಹೊಣೆಗಾರಿಕೆ.

ಎಂಥಾ ದಕ್ಷ ಆಡಳಿತ !!

ದಕ್ಷತೆ

ದಕ್ಷ ಆಡಳಿತದಲ್ಲಿ ಕರ್ನಾಟಕ ನಂ.1 ಸ್ಥಾನ ಪಡೆದಿದೆ. ಪೆಟ್ರೋಲ್ ಡೀಸಲ್ ಬೆಲೆಯೇರಿದ ಒಂದೇ ದಿನದಲ್ಲಿ ಬಸ್ ಪ್ರಯಾಣ ದರ ಹೆಚ್ಚಿಸಲಾಗಿದೆ. ಆಗಾಗ್ಗೆ ಬಂದುಹೋಗುವ ವಿದ್ಯುತ್ ಬೆಲೆಯೂ ಹೆಚ್ಚಾಗಲಿದೆ. ಇನ್ನೇನು ಕರ್ನಾಟಕ ಅಭಿವೃದ್ಧಿಯಾಗಿ ಬಿಟ್ಟಿತು ಅಂತ ಹುಗ್ಗಿ ಪಾಯಸ ಮಾಡಿಕೊಂಡು ತಿನ್ನೋಣ ಅಂತ ಅಕ್ಕಿ ಬೇಳೆ ಬೆಲ್ಲಗಳ ಬೆಲೆ ಕೇಳಿದರೆ, ಮೆಣಸಿನಕಾಯಿಯ ರೇಟಿನ ಹಾಗೆ ಉರಿ ಕಿತ್ತುಕೊಳ್ಳುತ್ತದೆ!

ಸಂಸ್ಕೃತದ ವಾಸನೆ

ಹೋಗಲಿ ತಣ್ಣಗೆ ನೀರು ಕುಡಿದು ಹೊಟ್ಟೆಗೆ ತಣ್ಣೀರು ಬಟ್ಟೆ ಹಾಕಿಕೊಳ್ಳೋಣ ಅಂದರೆ ಅದಕ್ಕೂ 'ಕನ್ನಡ ಗಂಗಾ' ಯೋಜನೆ (24/7-ನೀರು ಬಿಡುವ ಯೋಜನೆ) ಸಂಚಕಾರ ತರಲಿದೆ. ಕುಡಿಯುವ ನೀರನ್ನೂ ಹಾಲಿಗಿಂತ ಹೆಚ್ಚಿನ ಬೆಲೆಯಲ್ಲಿ ಮಾರುವ ಈ ದರೋಡೆ ದಂಧೆಗೆ 'ಕನ್ನಡ-ಗಂಗಾ' ಎಂದು ಅದ್ಯಾವ ಮಹಾತ್ಮ ಹೆಸರಿಟ್ಟನೋ? ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮುಖ್ಯಮಂತ್ರಿ ಚಂದ್ರು ಅವರನ್ನೇ ಕೇಳಬೇಕು. ಅವರು ಅದೇನೋ 'ಕನ್ನಡ ಅನುಷ್ಠಾನ ಪರ್ವ' ಅಂತ ಎಲ್ಲ ಸರಕಾರಿ ಕಚೇರಿಗಳಲ್ಲಿ ಚೀಟಿಗಳನ್ನು ಅಂಟಿಸಿದ್ದಾರೆ. ಇದರಲ್ಲಿ ಮೂರನೇ ಒಂದು ಭಾಗ ಮಾತ್ರ 'ಕನ್ನಡ', ಮೂರನೇ ಎರಡು ಭಾಗ- 'ಅನುಷ್ಠಾನ ಪರ್ವ' ದಲ್ಲಿ ಸಂಸ್ಕೃತದ ವಾಸನೆ!

ಕ್ಷಾತ್ರೇಶ್ರೀ

ಅಚ್ಚರಿ

ವಿಧಾನ ಸಭೆ ಅಧಿವೇಶನ ವಿಧಾನ ಸೌಧದಲ್ಲಿ ನಡೆಯುತ್ತಿದೆ! ಇದರಲ್ಲೇನ ಆಶ್ಚರ್ಯ ಅಂದ್ರಾ? ಬಲು ಅಚ್ಚರಿಯೇ ಕಣ್ರೀ, ಅಧಿಕಾರಿಗಳ ಸಭೆ, ಮಂತ್ರಿಮಂಡಲ ಸಭೆ, ಇಂಥವೆಲ್ಲ ರೆಸಾರ್ಟುಗಳಲ್ಲಿ, ಮಠಗಳಲ್ಲಿ, ಕೇಶವ ಕೃಪಗಳಲ್ಲಿಯೋ , ಪರರಾಜ್ಯ/ದೇಶಗಳ ಗಿರಿಧಾಮಗಳಲ್ಲಿಯೋ ನಡೆಯುವಂಥ ಕಾಲದಲ್ಲಿ ವಿಧಾನ ಸಭೆಯಲ್ಲಿ ಅಧಿವೇಶನ ನಡೆದರೆ ಅಚ್ಚರಿಯಲ್ಲವೇ? ಎಲ್ಲಿಯಾದರೂ ಆಗಲಿ ಬಿಡಿ, ಅದನ್ನು ಯಾರೂ ಕೇಳುವ ಹಾಗಿಲ್ಲವಂತಲ್ಲ.

ಹೊಸರುಚಿಯ ಕೇಕ್...

ಪುಟ 3 ರಿಂದ

ಉಕ್ಕಿತು. ಆ ಜಿಲ್ಲಾ ಕೇಂದ್ರದಲ್ಲಿಯೂ ಇಂತಹ ಪರಿಸ್ಥಿತಿಯೇ? ಅಲ್ಲಿ ಗಣನೀಯ ಪ್ರಮಾಣದಲ್ಲಿ ಮುಸ್ಲಿಂ ಮತ್ತು ಕ್ರಿಶ್ಚಿಯನ್ ಅಲ್ಪಸಂಖ್ಯಾತರಿಗೆ ಹೇಗನ್ನಿಸುತ್ತಿರಬಹುದು ಎಂದು ಮನಸ್ಸು ಯೋಚಿಸಲಾರಂಭಿಸಿತು.

ಅದಿ ಉಡುಪಿಯ ಬೆತ್ತಲೆ ಪ್ರಕರಣದ ನೆನಪು:

ಇಬ್ಬರು ಪುರುಷರನ್ನೂ ಬೆತ್ತಲೆ ಮಾಡಿ ಮಾನವತ್ವಕ್ಕೆ ಅಪಚಾರವೆಸಗಿದ ಪ್ರಕರಣ ರಾಜ್ಯಕ್ಕೆ ಗೊತ್ತಿರುವಂತಹದ್ದು. ದನಗಳ ವ್ಯಾಪಾರ ಮಾಡುತ್ತಿದ್ದರು ಎಂಬ ಒಂದೇ ಕಾರಣಕ್ಕೆ ಅವರನ್ನು ಸಂಘ ಪರಿವಾರದ ರಕ್ಕಸರು ಈ ಅವಮಾನಕ್ಕೆ ಗುರಿ ಮಾಡಿದ್ದರು. ಹೀಗೆ ದಕ್ಷಿಣ ಕನ್ನಡ, ಉಡುಪಿ, ಕಾರವಾರ ಗಳಲ್ಲಿ ದಿನಕ್ಕೆ ಹಲವು ಪ್ರಕರಣಗಳು ಯಾವುದೇ ಮೋಟಾರು ಗಾಡಿಯಲ್ಲಿ ದನಗಳು ಕಂಡರೆ ಸಾಕು ಭಜರಂಗದಳದವರಿಗೆ ಹಬ್ಬ. ಒಂದು ದನದ ಸಾಗಾಟ ನಡೆಸುತ್ತಿದ್ದವರಿಂದ ಹಣ ಕೀಳುವುದು, ಅಥವಾ ಅವರು ಹಣ ಕೊಟ್ಟುಕೊಂಡು ಬಂದ ದನಗಳನ್ನು ಬಿಡಿಸಿ ತೆಗೆದುಕೊಂಡು ಹೋಗಿ ಬಿಡುವುದು ಅಂದರೆ ಹಗಲು ದರೋಡೆ. ಇವು ಸಾಧ್ಯವಾಗದೇ ಹೋದರೆ ಯಾವುದಾದರೂ ಸಂರಕ್ಷಣಾ ಆಶ್ರಮಗಳಿಗೆ ಒಪ್ಪಿಸಿಬಿಡುವುದು ಅಥ ಪೋಲೀಸ್ ಸ್ಟೇಷನ್‌ಗೆ ಒಪ್ಪಿಸುವುದು. ಹಿ ಕಾನೂನನ್ನು ತಾನೇ ಕೈಗೆ ತೆಗೆದುಕೊಂಡು ತ ಖಾಕಿ ಇಲ್ಲದ ಪೋಲೀಸರಂತೆ ವರ್ತಿಸುವು ಕಾನೂನಿನ ಪ್ರಕಾರ ಅಪರಾಧ. ಆದರೆ ಹ ಕೀಳುವುದು ಹೊಡೆಯುವುದು ದನಗಳ ದರೋ ಮಾಡುವುದು ಇಂತಹ ನೂರಾರು ಪ್ರಕರಣಗಳಿದ್ದ ಅವರ್‍ಯಾರ ಮೇಲೂ ಕೇಸು ಹಾಕಿದ ಶಿಕ್ಷೆ ನೀಡಿ ಉದಾಹರಣೆಗಳನ್ನು ಕಾಣೆವು.

ದುಬಾರಿಯಾದ ದನದ ಮಾಂಸ: ದನ ಮಾಂಸವೇ ಕುರಿ, ಕೋಳಿ, ಹಂದಿ ಮಾಂಸಗಳಿಗಿ ಅಗ್ಗ ಎಂಬುದು ಎಲ್ಲರ ತಿಳುವಳಿಕೆ. ದನಗಳ ಕೊಳ್ಳುವ ಸ್ಥಳದಿಂದ ಹಿಡಿದು ದಾರಿಯಲ್ಲಿ ಎಲ್ಲೆಂದ ಹಿಡಿಯುವ ಪೋಲೀಸರಿಗೆ ಎರಡುಪಟ ಮೂರುಪಟ್ಟು ನೀಡಬೇಕು, ಅವರು ದರೋ ಮಾಡಿದ ದನಗಳ ವೆಚ್ಚ, ಕೇಸು ಹಾಕಲ್ಪಟ್ಟರೆ ಅ ವೆಚ್ಚವೆಲ್ಲವನ್ನೂ ದನದ ಮಾಂಸದ ಮೇಲೆ ಹಾಕುವುದು ಅನಿವಾರ್ಯ. ಹೀಗಾಗಿ ದನದ ಬೇರೆ ಮಾಂಸಗಳಂತೆಯೇ ದುಬಾರಿಯ ಹೀಗಾಗಿ ಅಗ್ಗದ ಪುಷ್ಟಿಕರ ಆಹಾರ ಸಾಮಾ ಜನಗಳಿಗೆ ಅಲಭ್ಯವಾಗಿದೆ.

ಗೋ ಸಂರಕ್ಷಣಾ ಕಾಯ್ದೆ ಹಾಗೂ ಕಾಂಗ್ರೆಸ್

ಪುಟ 3 ರಿಂದ

ಉಕ್ಕಿನ ಮನುಷ್ಯ ಎಂದೆಲ್ಲಾ ಕರೆಯಲಾಗಿದೆ. ಇದೇ ವಲ್ಲಭ ಬಾಯಿ ಪಟೇಲ್‌ರವರು ಆರೆಸ್ಸೆಸ್ ಜೊತೆ ಅತ್ಯಂತ ಆಪ್ತ ಸಂಬಂಧವಿರಿಸಿಕೊಂಡದ್ದು ಮಾತ್ರವಲ್ಲ ಗಾಂಧಿಯವರ ಕೊಲೆಯ ನಂತರ ಇಡೀ ದೇಶವೇ ಆರೆಸ್ಸೆಸ್ ಅನ್ನು ದ್ವೇಷ ಮಾಡುತ್ತಿದ್ದ ಪರಿಸ್ಥಿತಿಯಲ್ಲಿಯೂ ಅವರನ್ನು ಕಾಂಗ್ರೆಸ್‌ನ ಸ್ವಯಂ ಸೇವಕರನ್ನಾಗಿ ಸೇರಿಸಿಕೊಳ್ಳಲು ಸಂಧಾನ ನಡೆಸಿದ್ದರು. ಗುಲ್ಜಾರಿಲಾಲ್‌ನಂದಾರವರಂತೂ ಎರಡು ಬಾರಿ ಹಂಗಾಮಿ ಪ್ರಧಾನಿಯೂ ಆಗಿದ್ದವರು. ಆದರೆ ಅವರು ಅಖಿಲ ಭಾರತ ಗೋ ಸಂರಕ್ಷಣಾ ಸಮಿತಿಯ ಭಾಗವಾಗಿದ್ದವರು ಕೂಡಾ.

ಹೀಗೆ ಕಾಂಗ್ರೆಸ್‌ನಲ್ಲಿ ಆರೆಸ್ಸೆಸ್ ಮನೋಭಾವದ ಒಂದು ದೊಡ್ಡ ವಿಭಾಗವೇ ಇತ್ತು. ಸಂವಿಧಾನ ಸಭೆಯ ಅಧ್ಯಕ್ಷರೂ ದೇಶದ ಮೊದಲ ರಾಷ್ಟ್ರಪತಿಯೂ ಆಗಿದ್ದ ರಾಜೇಂದ್ರ ಪ್ರಸಾದ್‌ರವರು ಇದೇ ಗುಂಪಿನವರಾಗಿದ್ದವರು. ನಮ್ಮ ದೇಶದ ಸಂವಿಧಾನ ಜನತೆಗೆ ಅನೇಕ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ನೀಡಿರುವಾಗಲೂ, ಜಾತ್ಯಾತೀತತೆ, ಧಾರ್ಮಿಕ ಸ್ವಾತಂತ್ರ್ಯ, ಜಾತಿ, ಮತ, ಲಿಂಗಾಧಾರಿತ ಬೇಧಗಳನ್ನು ಮೀರಿದ ಸಮಾನತೆಗಳನ್ನು ಪ್ರತಿಪಾದಿಸಿರುವಾಗಲೂ ಜಾತ್ಯಾತೀತ ತತ್ವಕ್ಕೆ, ಪ್ರಜಾಸತ್ತಾತ್ಮಕ ಹಕ್ಕುಗಳಿಗೆ ವಿರೋಧವಾದ ವಿಷಯವೊಂದು ಸಂವಿಧಾನಕ್ಕೆ ಸೇರಲು ಅವಕಾಶವಾಗಿದ್ದು ಇಂತಹ ಕೋಮುವಾದಿ ಮನಸ್ಸಿನ ಕಾಂಗ್ರೆಸ್ಸಿಗರಿಂದಲೇ. ಇತ್ತೀಚಿಗೆ ನಿಧನರಾದ ಕಾಂಗ್ರೆಸ್ ನಾಯಕ, ಮಾಜಿ ಮಂತ್ರಿ, ಸಂಯುಕ್ತ ಕರ್ನಾಟಕ ಪತ್ರಿಕೆಯ ಮುಖ್ಯಸ್ಥರಾಗಿದ್ದ ಹಾರನಹಳ್ಳಿ ರಾಮಸ್ವಾಮಿಯವರು ಇಂತಹ ಕಾಂಗ್ರೆಸ್ಸಿಗರ ತದ್ರೂಪು.

ಇಂತಹ ಕೋಮುವಾದಿ ಕಾಂಗ್ರೆಸ್ಸಿಗರ ಕಾರಣವಾಗಿಯೇ ಸಂವಿಧಾನದ ನಿರ್ದೇ ತತ್ವಗಳೆಂಬ ಎರಡನೇ ಅಧ್ಯಾಯದಲ್ಲಿ 'ಗೋ ನಿಷೇಧ' ಎಂಬ ಕಲಂಕೂಡ ಸೇರಿದೆ. ನಿರ್ದೇ ತತ್ವಗಳೆಂಬ ಸಂವಿಧಾನದ ಅಧ್ಯಾಯದಲ್ಲಿ ಶಿಕ್ಷ ಹಕ್ಕು, ಉದ್ಯೋಗದ ಹಕ್ಕು, ವೈಜ್ಞಾನಿಕ ಶಿಕ್ಷ ವೈಜ್ಞಾನಿಕ ಮನೋಭಾವ ಮೊದಲಾದ ಅ ಸಾಮಾಜಿಕ ಹಕ್ಕುಗಳು ಸೇರಿವೆ. ಇವುಗಳ ಜಾ ಸಂಬಂಧಿಸಿ ಕೇಂದ್ರ ಸರ್ಕಾರ ಹಾಗೂ ಸುಪ್ ಕೋರ್ಟ್ ಎರಡೂ ಇವು ಸರ್ಕಾರಕ್ಕೆ ಮಾರ್ಗದ ಸೂತ್ರಗಳೇ ಹೊರತು ಮೂಲಭೂತ ಹಕ್ಕುಗಳ ಸಾರ್ವತ್ರಿಕ ಜಾರಿಗಾಗಿ ರೂಪಿಸಿರುವಂ ಎಂಬ ತೀರ್ಪು ನೀಡಿತು. ಸ್ವಾತಂತ್ರ್ಯ ಬಂದ ವರ್ಷಗಳಾದರೂ ಕೂಡ ನಿರ್ದೇಶಕ ತತ್ವ ಜಾರಿಗೆ ತರಲಾಗಿಲ್ಲ. ಆದರೆ ಕಾಂಗ್ರೆಸ್ ಕೇ ಸರ್ಕಾರ ಸಂವಿಧಾನ ಜಾರಿಗೆ ಬಂದ ಕೂಡ ಗೋಹತ್ಯೆ ನಿಷೇಧ ಕಾಯಿದೆಯನ್ನು ಅಂಗೀಕರಿ ಒತ್ತಾಯ ಹೇರಿತು. ಭಾರತದ ಅತ್ಯಂತ ಜಾತ್ಯಾ ಮನೋಭಾವದ, ವೈಜ್ಞಾನಿಕ ಮನೋಭಾ ಪ್ರಧಾನಿ ನೆಹರೂರವರ ನಾಯಕತ್ವದಲ್ಲಿಯೇ ಇ ನಡೆದಿದೆ ಎಂಬುದು ಕಾಂಗ್ರೆಸ್‌ನ ಜಾತ್ಯಾತೀತ ಪೊಳ್ಳು ಸ್ವರೂಪವನ್ನು ತೋರಿಸುತ್ತದೆ.

ಈಗಲಾದರೂ ಕಾಂಗ್ರೆಸ್‌ಪಕ್ಷ ಎಚ್ಚೆತ್ತು ಕೊ ರಾಜ್ಯದ ಕಾಂಗ್ರೆಸ್ ನಾಯಕರು ಗೋಹತ್ಯೆ ನಿ ಕಾನೂನು ಜಾರಿಯಾಗದಂತೆ ದೃಢ ನಿಲು ತಳೆಯಲಿ. ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ ಅಲ್ಪಸಂಖ್ಯಾತರ ಹಕ್ಕುಗಳಿಗೆ; ದೇಶದ ದ ಹಿಂದುಳಿದ ಜಾತಿಗಳ ಆಹಾರದ ಹ ಬಾಧಕವಾಗದಂತೆ ರಾಜ್ಯ ಸರ್ಕಾರಗಳಿಗೆ ಹ ನಿರ್ದೇಶನಗಳನ್ನು ನೀಡಲಿ. ಸಂವಿಧಾನದ ತಿದ್ ಮಾಡಿ ಗೋಹತ್ಯೆ ನಿಷೇದದ ಪ್ರಸ್ತಾಪ ಕಿತ್ತೊಗೆಯುವ ಧೈರ್ಯ ತೋರಲಿ.

ಬೃಹತ್ ಬೆಂಗಳೂರು ನಗರದ ನಾಗರಿಕ ಸಮಸ್ಯೆಗಳ ಪರಿಹಾರದ ಹೆಸರಿನಲ್ಲಿ ಹಲವು ಯೋಜನೆಗಳೇನೋ ಕಾಣುತ್ತವೆ. ಆದರೆ ಅದರಿಂದ ಸಮಸ್ಯೆ ಬಗೆಹರಿವುದೇ? ಸಮಸ್ಯೆಗಳ ಪರಿಹಾರಕ್ಕೆ ನಿಜವಾಗಿಯೂ ಬೇಕಾದುದೇನು?

ಒಂದು ವಿಚಾರ ಸಂಕಿರಣದ ವರದಿ

ಬೃಹತ್ ಬೆಂಗಳೂರು ಸಮಸ್ಯೆ - ಸವಾಲುಗಳು

ವಿಚಾರಸಂಕಿರಣ

ಅಂಗರಾಜು

ಬೃಹತ್ ಬೆಂಗಳೂರು -ಸಮಸ್ಯೆ ಸವಾಲುಗಳು ಈ ಕುರಿತು ವಿಚಾರ ಸಂಕಿರಣ ಬೆಂಗಳೂರಿನಲ್ಲಿ ನಡೆಯಿತು. ಜೆಎಂಎಸ್-ಡಿವೈಎಫ್ಐ ಜಂಟಿಯಾಗಿ ಈ ಕಾರ್ಯಕ್ರಮವನ್ನು ಆಯೋಜಿಸಿದ್ದವು.

ಬೆಂಗಳೂರು ಬೆಳೆಯುತ್ತಿರುವಂತೆಯೇ ಬೆಂಗಳೂರಿನ ಸಮಸ್ಯೆಗಳೂ ಸಮಾನಾಂತರದಲ್ಲಿ ಬೆಳೆಯುತ್ತಿವೆ. ನಗರದ ಜನಸಾಂದ್ರತೆ ಹೆಚ್ಚಿದಂತೆಲ್ಲಾ ಜನರ ಬವಣೆಯೂ ಹೆಚ್ಚುತ್ತಿವೆ. ಸಣ್ಣ ಮಳೆ ಬಂದರೂ ಎದುರಿಸಿಕೊಳ್ಳಲಾಗದ ಪರಿಸ್ಥಿತಿ, ಎಷ್ಟೇ ದುಡಿದರೂ ನೆಮ್ಮದಿಯಿಂದ ಬದುಕಲಾರದ ಸ್ಥಿತಿ. ಅಂತರರಾಷ್ಟ್ರೀಯ ಬಂಡವಾಳದಾರರಿಗೆ ಸ್ವರ್ಗವಾಗುತ್ತಿರುವ ಬೆಂಗಳೂರು, ಬಡಜನರ ಪಾಲಿಗೆ ನರಕವಾಗಿ ಪರಿಣಮಿಸಿದೆ.

ಬೆಂದಕಾಳೂರನ್ನು ಬೃಹತ್ ಬೆಂಗಳೂರಾಗಿ ಭವ್ಯವಾಗಿ ಕಟ್ಟಿದ ದುಡಿಯುವ ಜನ ಬೆಂಗಳೂರಿನ ಹೊರಗೆ ಬದುಕುವಂತಾಗಿದೆ. ಭವ್ಯ ಬೆಂಗಳೂರಿಗೆ ಯಾವುದೇ ರೀತಿಯಲ್ಲೂ ಕಾಣಿಕೆ ನೀಡದ ಜನ ಬೆಂಗಳೂರಿನ ಹೃದಯ ಭಾಗದಲ್ಲಿ ಬದುಕುತ್ತಿದ್ದಾರೆ. ಯಾಕೀ ಪರಿಸ್ಥಿತಿ? ಬೆಂಗಳೂರಿನ ಜನರ, ಅದರಲ್ಲಿಯೂ ದುಡಿಯುವ ಜನರ ಬವಣೆಗಳೇನು, ಅಗತ್ಯಗಳೇನು, ಸಮಸ್ಯೆ ಮುಕ್ತ ಬೆಂಗಳೂರಿನ ಅಭಿವೃದ್ಧಿಯ ದಾರಿ ಏನು? ಎಂಬುದನ್ನು ಕಂಡುಕೊಳ್ಳ ಹಿನ್ನೆಲೆಯಲ್ಲಿ ಈ ವಿಚಾರ ಸಂಕಿರಣವನ್ನು ಸಂಘಟಿಸಲಾಗಿತ್ತು.

ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಚಿಂತಕ ಪ್ರೊ: ಜಿ.ಕೆ.ಗೋವಿಂದ ರಾವ್ ಬೆಂಗಳೂರು ಹಲವು ಜಲ್ವಂತ ಸಮಸ್ಯೆಗಳಿಂದ ಬಳಲುತ್ತಿರುವುದಕ್ಕೆ ವಿಧಾನ ಸೌಧದಲ್ಲಿ ಕುಳಿತಿರುವವರ ರಾಜಕೀಯ ಇಚ್ಛಾಶಕ್ತಿ ಇಲ್ಲದ ಕೇವಲ ಸ್ವ ಹಿತಾಸಕ್ತ ರಾಜಕಾರಣವೇ ಕಾರಣ. ರಾಜಕೀಯ ಇಚ್ಛಾಶಕ್ತಿ ಇಲ್ಲದೇ ಕೇವಲ ಸ್ವಹಿತಾಸಕ್ತಿಗಾಗಿ ರಾಜ್ಯವನ್ನೇ ಬಲಿ ಕೊಡುವ ಹಂತಕ್ಕೆ ಇಳಿಯುವ ಇಂದಿನ ರಾಜಕೀಯ ವ್ಯವಸ್ಥೆ ಬದಲಾಗದ ಹೊರತು ಬೆಂಗಳೂರು ಅಭಿವೃದ್ಧಿ ಸಾಧ್ಯವಿಲ್ಲವೆಂದು ಅಭಿಪ್ರಾಯಪಟ್ಟರು. ರಸ್ತೆ ಅಗಲೀಕರಣದ ಹೆಸರಿನಲ್ಲಿ ಸಾವಿರಾರು ಮರಗಳನ್ನು ಕಡಿದು ಹಾಗೂ ಹಾಕಿರುವುದು ಬೆಂಗಳೂರಿನ ವಾತಾವರಣವನ್ನೇ ಕೆಡಿಸಿದೆ. ಒಂದು ಕಾಲದಲ್ಲಿ ಏರ್‌ಕಂಡಿಷನ್ಡ್ ನಗರವಾಗಿದ್ದ ನಗರ ಇಂದು ಬಿಸಿಲ ನಗರವಾಗಿ ಮಾರ್ಪಾಡುತ್ತಿದೆ ಎಂದು ಮುಂದಿನ ಪೀಳಿಗೆಯ ಭವಿಷ್ಯದ ಕುರಿತು ಅವರು ಕಳವಳ ವ್ಯಕ್ತಪಡಿಸಿದರು. ಜೆಎಂಎಸ್ ಜಿಲ್ಲಾ ಕಾರ್ಯದರ್ಶಿ ಗೌರಮ್ಮ ಅಧ್ಯಕ್ಷತೆ ವಹಿಸಿದ್ದರು.

ವಿಚಾರಸಂಕಿರಣದ ಮೊದಲ ಗೋಷ್ಠಿಯಲ್ಲಿ ನೈರ್ಮಲ್ಯ ಹಾಗೂ ಪರಿಸರ ಕುರಿತು ಮಾತನಾಡಿದ ಪರಿಸರ ತಜ್ಞ ಯಲ್ಲಪ್ಪರೆಡ್ಡಿ ನಗರದ ನೈರ್ಮಲ್ಯ ಕಾಪಾಡುವಲ್ಲಿ ಆಡಳಿತದ ಜೊತೆ ಜನತೆಯ ಪಾತ್ರ ಕೂಡ ಮಹತ್ವದ್ದಾಗಿರುತ್ತದೆ. ಜನತೆಯ ಸಹಕಾರವಿಲ್ಲದಿದ್ದರೆ ಯಾವುದೇ ಯೋಜನೆ ಸಾಧ್ಯವಿಲ್ಲ ಎಂದರು.

ಆಹಾರ ನಿರಾಕರಣೆ

ಆಹಾರ ಮತ್ತು ವಸತಿ ವಿಚಾರದ ಕುರಿತಾಗಿ ವಿಷಯ ಮಂಡಿಸಿ ಮಾತನಾಡಿದ ಪತ್ರಕರ್ತೆ ಕಾತ್ಯಾಯಿನಿ ಚಾಮರಾಜ ಸಂವಿಧಾನದ ಆಶಯದಂತೆ ದೇಶದ ಪ್ರತಿಯೊಬ್ಬರಿಗೂ ಆಹಾರ ಭದ್ರತೆ ಒದಗಿಸಬೇಕಿದ್ದ ಆಳುವ ಸರ್ಕಾರಗಳು ವಿಶ್ವ ಬ್ಯಾಂಕ್ ನಿರ್ದೇಶಿತ ನೀತಿಗಳನ್ನು ಅನುಸರಿಸಿ ಜನತೆಗೆ ಆಹಾರವನ್ನು ನಿರಾಕರಿಸಲಾಗುತ್ತಿದೆ. ಎಪಿಎಲ್-ಬಿಪಿಎಲ್ ಎಂಬ ವಿಂಗಡನೆ ಮಾನದಂಡವೇ ಅವೈಜ್ಞಾನಿಕ. ಒಂದು ಕುಟುಂಬದಲ್ಲಿ ಏನಿಲ್ಲ ಎಂಬುದನ್ನೇ ಮಾನದಂಡವಾಗಿ ನೋಡುತ್ತಿವೆಯೇ ವಿನಃ ಬದಲಾಗಿ -ಆ ಕುಟುಂಬದಲ್ಲಿ ಏನೇನು ಹೊಂದಿದೆ ಎಂಬುದನ್ನೇ ಗಣನೆಗೆ ತೆಗೆದು ಕೊಳ್ಳುವುದಿಲ್ಲ. ಇದು ಬದಲಾಗಬೇಕು. 1 ಕೋಟಿ 6 ಸಾವಿರ ರೇಷನ್‌ಕಾರ್ಡ್‌ಗಳನ್ನು ಹಂಚಲಾಗಿದೆ ಎಂದು ಸರ್ಕಾರ ಹೇಳಿಕೊಳ್ಳುತ್ತಿದೆ. ಆದರೆ ವಾಸ್ತವ ಮಾತ್ರ ಬೇರೆಯೇ ಇದೆ. ನ್ಯಾಯವಾಗಿ ಬಿಪಿಎಲ್ ವ್ಯಾಪ್ತಿಗೆ ಬರುವ ಸಾವಿರಾರು ಕುಟುಂಬಗಳಿಗೆ ಬಿಪಿಎಲ್ ಕಾರ್ಡ್ ಸಿಕ್ಕಿಲ್ಲ ಎಂಬುದು ಕಟು ಸತ್ಯ.

ಒಂದು ದಿವಸದಲ್ಲಿ 10 ರೂಪಾಯಿಗಿಂತ ಕಡಿಮೆ



ಇದ್ದರೆ ಆತ ಬಡವ ಎಂದು ಇವರ ನಿಯಮಾವಳಿಗಳು ಹೇಳುತ್ತಿವೆ. ಅದೇ ಸರ್ಕಾರ NREGA ಯೋಜನೆಯಲ್ಲಿ ದಿನದ ಕೂಲಿಯನ್ನು 80 ರೂಪಾಯಿಗಳನ್ನು ನಿಗದಿಗೊಳಿಸುತ್ತಿದೆ. ಅಂದರೆ ಇದರಿಂದಲೇ ಸ್ಪಷ್ಟವಾಗುವುದೇನೆಂದರೆ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಸಂಪೂರ್ಣವಾಗಿ ಕೈ ಬಿಡುವ ಹುನ್ನಾರ ಇದರಲ್ಲಿದೆ.

ನಮ್ಮ ಜಿಡಿಪಿಯ (ಒಟ್ಟು ರಾಷ್ಟ್ರೀಯ ಉತ್ಪನ್ನ) ಶೇ.1 ರಷ್ಟನ್ನು ಮೀಸಲಿಟ್ಟರೆ ಸಾಕು ಇಡೀ ರೇಷನ್‌ನ್ನು ಸಾರ್ವತ್ರೀಕರಣ ಗೊಳಿಸಬಹುದು. ಆದರೆ ಆಳುವ ಸರ್ಕಾರಗಳು ಈ ನಿಟ್ಟಿನಲ್ಲಿ ಯೋಚಿಸುತ್ತಿಲ್ಲ. ಸಾರ್ವತ್ರೀಕರಣಗೊಳಿದರೆ ಎಪಿಎಲ್- ಬಿಪಿಎಲ್ ಪ್ರಶ್ನೆಯೇ ಬರುವುದಿಲ್ಲ. ಆದರೆ ಸರ್ಕಾರಗಳು ಜನತೆಯ ಕಣ್ಣಿಗೆ ಮಣ್ಣೆರುಚುತ್ತಿವೆ ಎಂದರು.

ಮುಂದುವರಿದು ವಸತಿ ಕುರಿತು ಮಾತನಾಡಿದ ಅವರು ಬೆಂಗಳೂರಿನಲ್ಲಿ ವಸತಿ ಹೊಂದುವುದು ತೀರ ದುಬಾರಿಯಾಗುತ್ತದೆ. ಸದ್ಯ ಆರ್ಥಿಕವಾಗಿ ಹಿಂದುಳಿದ ಶೇ.99 ರಷ್ಟು ಜನರಿಗೆ 'ವಸತಿ'ವ್ಯವಸ್ಥೆಯೇ ಇಲ್ಲ. ಬೆಂಗಳೂರಿನಲ್ಲಿ ಅತಿ ಹೆಚ್ಚು ಬಂಡವಾಳ ರಿಯಲ್ ಎಸ್ಟೇಟ್‌ಗೆ ಹೂಡಿಕೆಯಾಗುತ್ತಿರುವುದರಿಂದಾಗಿ ಭೂಮಿಯ ಬೆಲೆ ವಿಪರೀತವಾಗಿ ಏರಿಕೆಯಾಗಿದೆ Junurm ಯೋಜನೆಯಲ್ಲಿ ಸ್ಲಂ ನಿವಾಸಿಗಳಿಗೆ ವಸತಿ ಕಲ್ಪಿಸುವ ಉದ್ದೇಶವಿದೆಯಾದರೂ ಉದ್ದೇಶದ ಈಡೇರಿಕೆ ಸಾಧ್ಯವಾಗುತ್ತಿಲ್ಲ, ಇದೇ ಯೋಜನೆಯಲ್ಲಿ ಕೆರೆ ಹೂಳೆತ್ತುವ ವ್ಯವಹಾರದಲ್ಲಿ 600 ಕೋಟಿರೂ. ಭ್ರಷ್ಟಾಚಾರ ನಡೆದಿದೆ ಎಂಬುದು ಗುಟ್ಟಾಗಿ ಉಳಿದಿಲ್ಲ. ಬೆಂಗಳೂರಿನಲ್ಲಿ ಸರಿಸುಮಾರು 15 ಲಕ್ಷ ಜನ ಸ್ಲಂಗಳಲ್ಲಿ ವಾಸಿಸುತ್ತಿದ್ದಾರೆ. ಇವರಿಗೆ ಯಾವುದೇ ಕನಿಷ್ಠ ನಾಗರೀಕ ಸೌಲಭ್ಯಗಳು ದೊರಕುತ್ತಿಲ್ಲ. ಇನ್ನು ಸ್ವಂತ ವಸತಿ ಎಂಬುದು ದೂರದ ಮಾತಾಗಿದೆ.

ಶುದ್ಧ ನೀರಿನ ಕೊರತೆ

ನೀರು ಮತ್ತು ಆರೋಗ್ಯ ಕುರಿತು ಮಾತನಾಡಿದ ಡಾ: ಪ್ರಕಾಶ್ ಸಿ.ರಾವ್ ಅವರು ಬೆಂಗಳೂರಿನಲ್ಲಿ ನೀರಿನ ಸಮಸ್ಯೆ ಅಪಾರ ಪ್ರಮಾಣದಲ್ಲಿದೆ. ಸುಮಾರು 1400 ದಶಲಕ್ಷ ಲೀಟರ್ ನೀರು ಆದ್ಯತೆವಿದೆ ಎಂಬ ಅಂದಾಜಿದೆ. ಆದರೆ ಇದರಲ್ಲಿ 500 ದಶಲಕ್ಷ ಲೀಟರ್ ನೀರು ಕೊರತೆಯಾಗಿದ್ದು ಈ ಕೊರತೆಯನ್ನು ತುಂಬಲು ಸರ್ಕಾರದ ಬಳಿ ಯಾವುದೇ ನಿರ್ದಿಷ್ಟ ಯೋಜನೆಗಳಿಲ್ಲ. ಕುಡಿಯುವ ನೀರಿನಲ್ಲಿ ಸ್ವಚ್ಛತೆ ಇಲ್ಲದ ಕಾರಣ ಪ್ರತಿವರ್ಷ ದೇಶದಲ್ಲಿ 4 ಲಕ್ಷ ಮಕ್ಕಳು ಸಾಯುತ್ತಿದ್ದಾರೆ. ಈ ಗಂಭೀರತೆ ನಮ್ಮ ಆಳುವ ಸರ್ಕಾರಗಳಿಗೆ ಅರ್ಥವಾಗುತ್ತಿಲ್ಲ. ವಿಪರೀತ ಬೋರ್‌ವೆಲ್ ಹಾಕಲಾಗುತ್ತಿದ್ದು, ಇದರಿಂದ ಅಂತರ್ಜಲ ತೀವ್ರವಾಗಿ ಕುಸಿಯುತ್ತಿದೆ ಮತ್ತು ನೈಟ್ರೇಟ್ ರಸಾಯನಿಕ ಇರುವುದರಿಂದ ಮೂಳೆ ಸಂಬಂಧಿತ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ ಎಂದರು.

ಬಾಟಲಿ ನೀರಿನ ದಂಧೆ

ನೀರಿನ ಅಭಾವವನ್ನು ಲಾಭ ಮಾಡಿಕೊಂಡ ಉದ್ದಿಮೆದಾರರು ಪ್ಯಾಕೇಜ್ಡ್ ನೀರಿನ ಮೂಲಕ ನೂರಾರು ಕೋಟಿಗಳನ್ನು ಸಂಪಾದಿಸುತ್ತಿದ್ದಾರೆ. ಬೆಂಗಳೂರಿನಲ್ಲಿ 1500 ಕೋಟಿಗಳ ಆದಾಯ ಈ ಮೂಲದಿಂದ ಬರುತ್ತಿದೆ.

ಬೆಂಗಳೂರು ಸಮುದ್ರಮಟ್ಟದಿಂದ ಸಾಕಷ್ಟು ಮೇಲ್ಭಾಗದಲ್ಲಿರುವುದರಿಂದ ನೀರು ಹರಿದು ಹೋಗುವ ನೈಸರ್ಗಿಕವಾದ ಗುಣ ಹೊಂದಿದೆ. ಹೀಗಾಗಿ ಕೊಳಚೆ ನೀರು, ನಿಲ್ಲುವುದು ಕಡಿಮೆ. ಆದರೆ ಸರಿಯಾದ ಒಳಚರಂಡಿ ವ್ಯವಸ್ಥೆ ಇಲ್ಲದೆ ನೈಸರ್ಗಿಕವಾಗಿ ಸಿಕ್ಕಿರುವ ಈ ಅವಕಾಶವನ್ನು ಪೂರ್ಣಪ್ರಮಾಣದಲ್ಲಿ ಬಳಸಿಕೊಳ್ಳ ಲಾಗುತ್ತಿಲ್ಲ.

ತ್ಯಾಜ್ಯ ವಿಲೇವಾರಿ ಮಾಡದ ಸರ್ಕಾರಿ ಆಸ್ಪತ್ರೆಗಳನ್ನು ಮುಚ್ಚಲು ಹೈಕೋರ್ಟ್‌ನ ತೀರ್ಪು ದುರದೃಷ್ಟಕರ. ಈ ಬಗ್ಗೆ ಸರ್ಕಾರ ಅಥವಾ ಆಡಳಿತ ಯಂತ್ರದ ಮೇಲೆ ಕ್ರಮ ಕೈಗೊಳ್ಳಬೇಕೇ ವಿನಃ ಆಸ್ಪತ್ರೆಗಳ ಮೇಲಿಲ್ಲ. ಎಷ್ಟೋ ಖಾಸಗಿ ಆಸ್ಪತ್ರೆಗಳು ಕೂಡ ತ್ಯಾಜ್ಯ ವಿಲೇವಾರಿ ಘಟಕಗಳನ್ನು ಹೊಂದಿಲ್ಲ. ಆದರೆ ಅವರ ವಿರುದ್ಧ ಯಾವ ಕ್ರಮವಿಲ್ಲ.

ಸರ್ಕಾರ ಮಲೇರಿಯಾ ತಡೆಯಲು ಮೀಸಲಿಡುತ್ತಿದ್ದ, ಹಣದಲ್ಲಿ ಕಡಿತ ಮಾಡಲಾಗುತ್ತಿದ್ದು, ಇದು ಒಟ್ಟು ನೈರ್ಮಲ್ಯವನ್ನೇ ಕಡೆಗಣಿಸಿದಂತಾಗುತ್ತದೆ. ಅಂದರೆ ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಇದೆಯಾದರೂ ಸರ್ಕಾರಗಳು ಈ ಬಗ್ಗೆ ಗಮನಹರಿಸುತ್ತಿಲ್ಲ. ಈ ಹಿನ್ನೆಲೆಯೂ ಜನ ಚಳುವಳಿಗಳು ಜನರ ಗಮನ ಸೆಳೆಯಬೇಕು ಎಂದೂ ಪ್ರಕಾಶ್ ಸಿ. ರಾವ್ ತಿಳಿಸಿದರು.

ಸಾರ್ವಜನಿಕ ಸಾರಿಗೆ ಹೆಚ್ಚಲಿ

ಸಾರಿಗೆ ಸಮಸ್ಯೆಗಳ ಕುರಿತ ಮಾತನಾಡಿದ ವಿನಯ್ ಶ್ರೀನಿವಾಸ್ ಬೆಂಗಳೂರು ನಗರ ಟ್ರಾಫಿಕ್ ನಗರವಾಗಿ ಮಾರ್ಪಾಡಾಗಿದೆ. ಟ್ರಾಫಿಕ್ ಸಮಸ್ಯೆಗಳನ್ನು ಬಗೆಹರಿಸಲು ನೈಜ ಅಂಶಗಳನ್ನು ಮರೆಮಾಚಿ ರಸ್ತೆಗಳನ್ನು ಅಗಲೀಕರಣ ಮಾಡುವುದು. ಫ್ಲೇ ಓವರ್‌ಗಳನ್ನು ನಿರ್ಮಾಣ, ಸಿಗ್ನಲ್ ಫ್ರೀ ರೋಡ್‌ಗಳನ್ನು ನಿರ್ಮಾಣ ಮಾಡಲು ಸರ್ಕಾರ ಹೊರಟಿದೆ. ಇದೊಂದು ಅವೈಜ್ಞಾನಿಕ ಕ್ರಮವಾಗಿದ್ದು, ಸಮಸ್ಯೆಯ ಮೂಲವನ್ನು ಹುಡುಕಲು ಪ್ರಯತ್ನಸಬೇಕು. ಬೆಂಗಳೂರಿನಲ್ಲಿ 70 ಲಕ್ಷ ಜನಸಂಖ್ಯೆಯಲ್ಲಿ ಸುಮಾರು 38 ಲಕ್ಷ ಜನ ಬಿಎಂಟಿಸಿ ಬಸ್ಸುಗಳಲ್ಲಿ ಪ್ರಯಾಣಿಸುತ್ತಿದ್ದಾರೆ. ಶೇ.25 ರಷ್ಟು ಖಾಸಗಿ ವಾಹನಗಳು ಸಂಚರಿಸುತ್ತಿವೆ. ಇದರಲ್ಲಿ ಐದುವರೆ ಸಾವಿರ ಕಾರುಗಳು ಸೇರಿವೆ. ರಸ್ತೆ ಅಗಲೀಕರಣ ಫ್ಲೇ ಓವರ್, ಸಿಗ್ನಲ್ ಫ್ರೀ ರೋಡ್‌ಗಳನ್ನು ಮಾಡುವ ಬದಲು ಸಾರ್ವಜನಿಕ ಸಂಚಾರಿ ವ್ಯವಸ್ಥೆ ಅಂದರೆ ಬಸ್ಸು, ರೈಲನ್ನು ಬಲಪಡಿಸಲು ಮುಂದಾದಲ್ಲಿ ಈಗಿರುವ ಟ್ರಾಫಿಕ್

ಪುಟ6 ಕ್ಕೆ

ಬೆಲೆಯೇರಿಕೆ

ನಮ್ಮಲ್ಲಿ ಬೆಲೆ ನೋಡಿ ಈ ರೀತಿ ಹಿಂದೆ
ಏರಿದ್ದೆ ಇರಲಿಲ್ಲ ಗತಿಯೇನು ಮುಂದೆ,
ವ್ಯಾಪಾರಿ ಮಂದಿಗಳು ಎಲ್ಲರೂ ಚಿಡ್ಡಿ
ದೋಸ್ತರೈ ಹೀಗಾಗಿ ಸುಮ್ಮನಿಹ ಯೆಡ್ಡಿ

- ವಿಡಂಬಾರಿ



ಕರಾವಳಿ ಮಳೆ ಹಾನಿ

● ಸಂಜಯ

ತಡವಾಗಿ ಕರಾವಳಿ ಪ್ರವೇಶಿಸಿದ ಮಳೆರಾಯ ಈಗ ಜಿಲ್ಲೆಯ ಜನರು ತತ್ತರಗೊಳ್ಳುವಂತೆ ಮಾಡಿದ್ದಾನೆ. ಮಳೆಗಾಗಿ ಪರಿತಪಿಸುತ್ತಿದ್ದ ಜನತೆ ಮಳೆಯೆಂದರೆ ಬೆಚ್ಚಿ ಬೀಳುವ ಮನೋಸ್ಥಿತಿಗೊಳಗಾಗಿದ್ದಾರೆ. ಬುಧವಾರ ಬಿಡದೆ ಸುರಿದ ಮಳೆಗೆ ಕರಾವಳಿ ಸ್ತಬ್ದಗೊಂಡಿದೆ. ಶಾಲೆಗಳಿಗೆ ನಿರಂತರ ನಾಲ್ಕು ದಿನ ರಜೆ ಘೋಷಿಸಲಾಯಿತು. ಅಧಿಕಾರಿಗಳನ್ನು 24 ಗಂಟೆಯೂ ಸನ್ನದ್ಧರಾಗಿರಲು ಜಿಲ್ಲಾಡಳಿತ ಸೂಚಿಸಿತು. ಮಳೆಯಿಂದ ಉಂಟಾಗುವ ಪ್ರಕೃತಿ ವಿಕೋಪಗಳನ್ನು ನಿಭಾಯಿಸಲು ವಿಶೇಷ ತಂಡಗಳನ್ನು ರಚಿಸಲಾಯಿತು. ಪ್ರತಿವರ್ಷ ದಂತೆ ಕಡಲ್ಕೊರೆತ ಕಾಣಿಸಿಕೊಳ್ಳುವ ಉಳ್ಳಾಲದ ಕಡತತೀರದ ಪ್ರದೇಶಗಳಿಗೆ ಉಸ್ತುವಾರಿ ಸಚಿರಾದಿಯಾಗಿ ಜನಪ್ರತಿ ನಿಧಿಗಳು, ಅಧಿಕಾರಿಗಳು ಭೇಟಿಕೊಟ್ಟು ಮಾಧ್ಯಮಗಳಿಗೆ ಅದೇ ಹಳಸಲು ಹೇಳಿಕೆಗಳನ್ನು ನೀಡಲಾಯಿತು.

ಇಷ್ಟಕ್ಕೂ ಇಂತಹ ಮಳೆ ಯಾವತ್ತೂ ಕರಾವಳಿಗೆ ಬಂದೇ ಇಲ್ಲವೇ ಎಂಬ ಅನುಮಾನ ಎಲ್ಲರನ್ನೂ ಕಾಡುತ್ತಿದೆ. ಮಾಧ್ಯಮಗಳಲ್ಲಿ ಮಳೆಯು ಅಬ್ಬರ, ಆಸ್ತಿಪಾಸ್ತಿ ನಷ್ಟ, ಜೀವಹಾನಿಯುದ್ದೇ ಸುದ್ದಿಯಾಗುತ್ತಿರುವ ಮಧ್ಯೆಯೂ ವಾಸ್ತವ ಬೇರೆಯೇ ಕಥೆಯನ್ನು ಹೇಳುತ್ತಿದೆ. ಕರಾವಳಿ ಜಿಲ್ಲೆಗಳಿಗೆ ಇಂತಹ ಮಳೆ ಹೊಸದೇನು ಅಲ್ಲ. ಹಾಗೆ ನೋಡಿದರೆ ಈ ಬಾರಿ ಸುರಿದ ಮಳೆಯ ಪ್ರಮಾಣಕ್ಕೂ ಅಧಿಕ ಪ್ರಮಾಣದ ಮಳೆ ಈ ಜಿಲ್ಲೆಗಳಲ್ಲಿ ಹೆಚ್ಚು ಕಡಿಮೆ ಪ್ರತಿ ವರ್ಷವೂ ಸುರಿಯುತ್ತದೆ. ದಶಕಗಳ ಹಿಂದೆಯಂತೂ ಈ ಬಾರಿ ಸುರಿದ ಮಳೆಯ ನಾಲ್ಕೈದು ಪಟ್ಟು ಹೆಚ್ಚು ಮಳೆ ವಾರದ ಅವಧಿಯಲ್ಲಿ ಸುರಿದ ದಾಖಲೆಯಿದೆ. ಹಾಗಾದರೆ ಇಂತಹ ಸಾಧಾರಣ ಮಳೆಗೆ ಕರಾವಳಿ ತತ್ತರಿಸಿ ಹೋಗಲು ಕಾರಣವಾದರೂ ಏನು ಎಂದೂ ಪರಿಶೀಲಿಸಿದರೆ ಕಣ್ಣಿಗೆ ರಾಚುವುದು ಅಧಿಕಾರಸ್ಥರ ದೂರದೃಷ್ಟಿಯ ಕೊರತೆ, ಭ್ರಷ್ಟಾಚಾರ, ಕಮೀಷನ್ ದಂಧೆ, ಕಳಪೆ ಆಡಳಿತ ಶೈಲಿ ಹಾಗೂ ಯಾವುದನ್ನೂ ಗಟ್ಟಿಯಾಗಿ ಪ್ರಶ್ನಿಸದ ಜನರ ನಿರ್ಲಿಪ್ತತೆ.

ಗ್ರಾಮೀಣ ಪ್ರದೇಶದ ಕೆಲವೆಡೆ ಮಳೆಯ ಅಬ್ಬರದಿಂದಾಗಿಯೇ ನೆರೆ ಬಂದು ನಾಶ, ನಷ್ಟಗಳು ಉಂಟಾಗಿವೆ. ಆದರೆ ಹೆಚ್ಚಿನ ಅವಘಡಗಳು ಸಂಭವಿಸಿರುವುದು ಕೃತಕ ಕಾರಣಗಳಿಂದ ಎಂಬುದು ಮೇಲ್ನೋಟಕ್ಕೆ ಗೋಚರಿಸುತ್ತದೆ. ಮುಖ್ಯವಾಗಿ ಭೂ ಮಾಫಿಯಾಗಳ ಅಧಿಕಾರಸ್ಥರ ಅಪವಿತ್ರ ಮೈತ್ರಿಯಿಂದಾಗಿ ಕೃಷಿ ಭೂಮಿಗಳೆಲ್ಲಾ ಶ್ರೀಮಂತ ರಿಯಲ್ ಎಸ್ಟೇಟ್‌ದಾರರ ವಶವಾಗಿವೆ. ಇಂತಹ ಭೂಮಿಗಳಲ್ಲಿ ಅವೈಜ್ಞಾನಿಕವಾಗಿ ಮಣ್ಣು ತುಂಬಿ ಲೇಔಟ್‌ಗಳನ್ನು ನಿರ್ಮಿಸಿ ಬೇಕಾಬಿಟ್ಟಿ ಮನೆಗಳನ್ನು ಕಟ್ಟಲಾಗಿದೆ. ಮಳೆ ನೀರು ಹರಿದುಹೋಗುವ ತೋಡುಗಳನ್ನು ಮುಚ್ಚಿ ಇಂತಹ ಲೇಔಟ್‌ಗಳಿಗೆ ರಸ್ತೆಗಳನ್ನು ನಿರ್ಮಿಸಲಾಗಿದೆ. ಈ ರೀತಿಯ ಅರಿವುಗೇಡಿ ಕೃತ್ಯಗಳಿಂದಾಗಿ ಹೆಚ್ಚಿನ ಕಡೆ ನೀರು ಸರಾಗವಾಗಿ ಹರಿಯಲು ಜಾಗವಿಲ್ಲದೆ ಕೃತಕ ನೆರೆಯ ಪರಿಸ್ಥಿತಿ ನಿರ್ಮಾಣವಾಗಿ ಮನೆಗಳು ನೀರಿನಲ್ಲಿ ಮುಳುಗಿ ಜನತೆ ಪಾಡುಪಡುವಂತಾಯಿತು. ಅದರೊಂದಿಗೆ ಕುಂಟುತ್ತಾ ಸಾಗಿರುವ ಸುರತ್ಕಲ್, ಬೀಸಿರೋಡ್ ಚತುಷ್ಪತ ರಸ್ತೆ ಕಾಮಗಾರಿ, ರಸ್ತೆ ಕಾಮಗಾರಿ ನಡೆಸುತ್ತಿರುವ ಇರ್ಕಾನ್ ಕಂಪನಿಯ ಬೇಜವಾಬ್ದಾರಿತನ ಈ ಬಾರಿಯ ಮಳೆಗಾಲವನ್ನು ನರಕವನ್ನಾಗಿಸಲು ತನ್ನದೇ ಕೊಡುಗೆಯನ್ನು ನೀಡಿದೆ.

ಮುಖ್ಯವಾಗಿ ಮಂಗಳೂರು ನಗರದೊಳಗಡೆ ರಸ್ತೆಗಳ ಕಾಂಕ್ರೀಟೀಕರಣದಲ್ಲಿ ನಡೆಯುತ್ತಿರುವ ಅವೈಜ್ಞಾನಿಕ ಕೆಲಸ ಮಂಗಳೂರು ನಗರದ ಜನತೆಯನ್ನು ಮಳೆಗಾಲದಲ್ಲಿ ನಡುನೀರಿಗೆ ನೂಕಿದೆ. ಮುಖ್ಯಮಂತ್ರಿಗಳ ವಿಶೇಷ ಅನುದಾನದಿಂದ ಇಡೀ ಮಂಗಳೂರಿನ ಮುಖ್ಯರಸ್ತೆಗಳನ್ನು ಏಕಕಾಲದಲ್ಲಿ ಕಾಂಕ್ರೀಟೀಕರಣಗೊಳಿಸಲು ಮುಂದಾಗಿರುವ ಮಂಗಳೂರು ನಗರಪಾಲಿಕೆಯ ತುಘಲಕ್ ನಿರ್ಧಾರದಿಂದಾಗಿ ಬೇಸಗೆಯಲ್ಲೇ ಟ್ರಾಫಿಕ್ ಜಾಮ್‌ನ ಕೃತಕ ಸಮಸ್ಯೆಗೊಳಗಾಗಿದ್ದ ಜನತೆ ಈಗ ಮಳೆಗಾಲದಲ್ಲಿ ಕೃತಕ ನೆರೆ ಹಾವಳಿಯಿಂದ ಕಂಗಾಲಾಗುವಂತಾಗಿದೆ. ರಸ್ತೆಗಳನ್ನು ಸಿಕ್ಕಸಿಕ್ಕಲ್ಲಿ ಅಗೆದಿರುವುದು, ತೋಡುಗಳನ್ನು ಮುಚ್ಚಿರುವುದು, ಫುಟ್‌ಬಾತ್‌ಗಳನ್ನು ನಿರ್ಮಿಸದೆ ರಸ್ತೆಗಳನ್ನು ಎತ್ತರಿಸಿರುವುದು, ನೀರು ಹರಿದು ಹೋಗಲು ಸಾಕಾಗುವಷ್ಟು ಅಗಲದ ಸಂಕಗಳನ್ನು ನಿರ್ಮಿಸದಿರುವುದು ಈ ಬಾರಿ ಮಂಗಳೂರು ನಗರದಲ್ಲಿ ಜನತೆ ಮಳೆಯಿಂದ ಕಂಗೆಡುವಂತೆ ಮಾಡಿದ ಮುಖ್ಯ ಅಂಶ. ಪಕ್ಕದ ಕೇರಳದಲ್ಲಿ ಮರಳುಗಾರಿಕೆ ಮೇಲೆ ಅಲ್ಲಿನ ಸರ್ಕಾರ ನಿಷೇಧ ಹೇರಿದ ಮೇಲೆ ಮಾಫಿಯಾ ರೂಪತಾಳಿರುವ ಮಂಗಳೂರಿನ ಮರಳು ದಂಧೆಯು ಈ ಬಾರಿ ನೆರೆ ಹೆಚ್ಚಳದಲ್ಲಿ ತನ್ನದೇ ಕೊಡುಗೆ ನೀಡಿದೆ. ಆಡಳಿತ ಪಕ್ಷದ ರಾಜಕಾರಣಿಗಳು, ಕಳ್ಳ ಅಧಿಕಾರಿಗಳು, ಮರಳು ದಂಧೆಕೋರರು ಸೇರಿಕೊಂಡು ಇಲ್ಲಿನ ನದಿಗಳ ಮರಳನ್ನು ಬೃಹತ್ ಯಂತ್ರಗಳ ಮೂಲಕ ಹೊಳೆಯಿಂದ ಎತ್ತಿ ನೂರಾರು ಲಾರಿಗಳಲ್ಲಿ ಕೇರಳಕ್ಕೆ ಸಾಗಿಸುತ್ತಿರುವುದು ಸಹ ಪ್ರಾಕೃತಿಕ ಅಸಮತೋಲನಕ್ಕೆ ಕೊಡುಗೆಯನ್ನು ನೀಡಿದೆ.

ಕಡಲಿಗೆ ಕಲ್ಲು ಹಾಕುವ ಹರಕೆಯ ಕಾರ್ಯಕ್ರಮ

ಇನ್ನು ಪ್ರತಿವರ್ಷ ಉಳ್ಳಾಲದ ಕಡಲ ತೀರಗಳ ಕಡಲ್ಕೊರೆತ ಕಾಣಿಸಿಕೊಳ್ಳುವುದು ಹತ್ತೆಂಟು ಮನೆಗ ಸಮುದ್ರ ಪಾಲಾಗುವುದು, ಸಮುದ್ರದ ಅಬ್ಬರ, ಅ ಜನತೆಯ ಕಣ್ಣೀರು ಮಾಧ್ಯಮಗಳ ಸುದ್ದಿಯಾಗುವುದು, ಆನಂತರ ಉಸ್ತುವಾ ಸಚಿವರಾದಿಯಾಗಿ ರಾಜಕಾರಣಿಗಳು ಕಡಲ್ಕೊರೆತ ಪ್ರದೇಶಗಳಿಗೆ ಭೇಟಿ ನೀಡಿವುದು, ಚಿಲ್ಲರೆ ಪರಿಹಾ ಘೋಷಿಸುವುದು, ಕಡಲತೀರಕ್ಕೆ ಲೋಡ್‌ಗಟ್ಟ ಬಂಡೆಕಲ್ಲು ಸುರಿಯುವುದು, ಹಿಂಬದಿಯಲ್ಲಿ ಕಮಿಷ ಗಿಟ್ಟಿಸುವುದು, ಸಾಧ್ಯವಾದರೆ ಫ್ರಾನ್ಸ್, ಮತ್ತಿತ ಯುರೋಪ್ ದೇಶಗಳಿಗೆ ನಿಯೋಗ ಹೋಗಿ ಅಲ್ಲಿ ಸರ್ಕಾರಗಳು ಕಡಲ್ಕೊರೆತ ಸಮಸ್ಯೆಗಳ ಪರಿಹರಿಸಿರುವುದನ್ನು ಅಧ್ಯಯನ ಮಾಡುವ ನೆಪದ ಮಜಾ ಉಡಾಯಿಸಿ ವಾಪಾಸ್ಸಾಗಿ ಪತ್ರಿಕಾ ಗೋ ನಡೆಸಿ ಸಮಸ್ಯೆ ಪರಿಹರಿಸುವ ವಿಧಾನಗಳ, ಬ ಉಪನ್ಯಾಸ ಕೊಡುವುದು, ಇವರು ಹಾಕಿಸು ಬಂಡೆಕಲ್ಲುಗಳನ್ನು ಸಮುದ್ರ ಮುಲಾಜಿಲ್ಲದೆ ತ ಒಡಲು ಸೇರಿಸಿಕೊಳ್ಳುವುದು ಇಲ್ಲಿನ ಜನತೆ ಕಡ್ಡಾಯ ಹರಕೆಯ ಕಾರ್ಯಕ್ರಮದ ಅಭ್ಯಾಸವಾಗಿದೆ. ಇದು ಈ ಬಾರಿಯೂ ಯಾ ಬದಲಾವಣೆ ಇಲ್ಲದೆ ಪುನರಾವರ್ತನೆಯಾಗಿದೆ.

ಒಟ್ಟಾರೆ ಇಲ್ಲಿನ ಶಕ್ತಿ ರಾಜಕಾರಣ ಬಲಿಪಶುಗಳಾಗಿ ತಮ್ಮತನವನ್ನೇ ಕಳೆದುಕೊಂಡ ಬುದ್ಧಿವಂತರು ಎಂಬ ಮಾಯಕದ ಹಣೆಪ ಕಟ್ಟಿಕೊಂಡು ತಮಗರಿವಿಲ್ಲದೆ ತಮ್ಮ ಹೋರಾಟ ಪ್ರತಿಭಟಿಸುವ ಶಕ್ತಿಯನ್ನೇ ಕಳೆದುಕೊಂಡಿರುವ ಜ ಸಮುದ್ರದೊಂದಿಗೆ ಸೆಣಸಿ, ಪಾಳೇಗಾರರ ವಿರು ಹೋರಾಡಿ ಬದುಕು ಕಟ್ಟಿಕೊಂಡ ತಮ್ಮ ಶೌರ್ಯ ಇತಿಹಾಸವನ್ನು ಮರೆತು ಸಮಸ್ಯೆಗಳ ನಿಜವಾ ಕಾರಣವನ್ನು ಅರಿತು ಅರಿಯದಂತೆ ಈ ಸಾಧಾರ ಮಳೆಯನ್ನೇ ಶಪಿಸುತ್ತಾ ನೈಜ ಕಾರಣಗಳಿ ಕುರುಡಾಗಿರುವುದೇ ಮಳೆ ತಂದ ದುರಂತಗಳಿಗಿಂ ಭೀಕರವಾದದ್ದು.

ಬೃಹತ್ ಬೆಂಗಳೂರು.....

ಪುಟ 5 ರಿಂದ

ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಿದೆ. ಟ್ರಾಫಿಕ್ ನಿವಾರಣೆಗೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತಿರುವ ಸರ್ಕಾರ ಅದರ ಯಾವ ಮಟ್ಟಿನ ಪ್ರಯೋಜನ ಆಗಿದೆ ಎಂಬುದನ್ನು ಮಾತ್ರ ನೋಡುತ್ತಿಲ್ಲ ಎಂದರು.

ಈ ವಿಷಯಗಳ ಮೇಲಿನ ಪ್ರತಿಕ್ರಿಯೆಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ವೆಂಕಟಾಚಲಯ್ಯ ಸಿಐಟಿಯು ಜಿಲ್ಲಾ ಉಪಾಧ್ಯಕ್ಷ ಗೋಪಾಲ ಕೃಷ್ಣ ಅರಳಿಹಳ್ಳಿ, ಜಯಕುಮಾರ್ ಇತರರು ಪ್ರತಿಕ್ರಿಯಿಸಿ ಮಾತನಾಡಿದರು. ಜೆಎಂಎಸ್‌ನ ರಾಜ್ಯ ಉಪಾಧ್ಯಕ್ಷೆ ಕೆ.ಎಸ್.ವಿಮಲಾ ಅಧ್ಯಕ್ಷತೆ ವಹಿಸಿದರು.

ಆದಾಯ ಮೂಲ

ಎರಡನೇ ಗೋಷ್ಠಿಯಲ್ಲಿ **ತೆರಿಗೆ ಸಂಪನ್ಮೂಲ ನಿರ್ವಹಣೆ** ವಿಷಯವಾಗಿ ಮಾತನಾಡಿದ ಸಿವಿಕ್ ಫೋರಂ ಮುಕುಂದ ಬಿಬಿಎಂಪಿ ಅನುಸರಿಸುತ್ತಿರುವ ತೆರಿಗೆ ವಿಧಾನ ದೋಷಪೂರಿತವಾಗಿದ್ದು ಒಟ್ಟು ವಿಧಾನವೇ ಬದಲಾಗಿದೆ. ಬಿಬಿಎಂಪಿ ಕೇವಲ ಆಸ್ತಿ ತೆರಿಗೆಯನ್ನು ಸಂಗ್ರಹಿಸುತ್ತಿದ್ದು, ಜನಸಾಮಾನ್ಯರಿಗೆ ಹೊರೆಯಾಗದಂತೆ ಇತರ ಮೂಲಗಳಿಂದ ತೆರಿಗೆ ಸಂಗ್ರಹಿಸಲು ಸಾಧ್ಯವಿದೆ. ಬೆಂಗಳೂರಿನಲ್ಲಿ 20 ಲಕ್ಷ ಪ್ರಾಪರ್ಟಿ(ಆಸ್ತಿ)ಯಲ್ಲಿ ಈವರೆಗೆ 5 ಲಕ್ಷ ಪ್ರಾಪರ್ಟಿಗಳು ತೆರಿಗೆಯ ವ್ಯಾಪ್ತಿಗೆ ಒಳಪಡಿಸದಿರುವುದು ಆಶ್ಚರ್ಯವನ್ನುಂಟು ಮಾಡುತ್ತದೆ. 20 ಲಕ್ಷ ಪ್ರಾಪರ್ಟಿ ಗಳ ಮೇಲಿನ ಆಸ್ತಿ ತೆರಿಗೆಯನ್ನು ಸರಿಯಾಗಿ ಸಂಗ್ರಹಿಸಲು ಸಾಧ್ಯವಾದಲ್ಲಿ ಎರಡುವರೆ ಸಾವಿರ ಕೋಟಿ ಸಂಪನ್ಮೂಲ ಕ್ರೋಢೀಕರಿಸಬಹುದು. ಹೀಗಾಗಿ ವಿದೇಶಿ ಬ್ಯಾಂಕ್‌ಗಳಿಂದ ಸಾಲ ಪಡೆಯುವುದು ತಪ್ಪುತ್ತದೆ. ಆದರೆ ಈ ಬಗ್ಗೆ ಬಿಬಿಎಂಪಿಯಾಗಲಿ, ಸರ್ಕಾರವಾಗಲಿ, ಆಸಕ್ತಿ ವಹಿಸುತ್ತಿಲ್ಲ ಎಂದರು.

'ಪರ್ಯಾಯ-ನಾಗರೀಕರ ಪಾತ್ರ- ಚಳುವಳಿಗಳ ಪ್ರತಿಕ್ರಿಯೆ' ಎಂಬ ವಿಚಾರದ ಅಂತಿಮ ಗೋಷ್ಠಿಯಲ್ಲಿ ವಿವಿಧ ಜನ ಚಳುವಳಿಗಳ ಮುಖಂಡರಾದ ದಸಂಸ (ಅಂಬೇಡ್ಕರ್‌ವಾದ) ದ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್, ಪಿವಿಸಿ ರಾಜ್ಯಾಧ್ಯಕ್ಷ ಪಟಾಫಟ್ ನಾಗರಾಜ್, ಸಿಪಿಎಂನ ಕೆ.ಪ್ರಕಾಶ್ ಮಾತನಾಡಿದರು. ಪಿವಿಸಿಯ ಪಟಾಫಟ್ ನಾಗರಾಜ್ ಜನರು ಚಳುವಳಿಗಳಿಂದ ವಿಮುಖರಾಗದಂತೆ ಐಕ್ಯ ಚಳುವಳಿಯನ್ನು ಕಟ್ಟಿ ಅವರನ್ನು ಆಕರ್ಷಿಸಬೇಕಿದೆ ಎಂದರು. ಮಾವಳ್ಳಿ ಶಂಕರ್ ಮಾತನಾಡಿ ಜೆಎಂಎಸ್/ಡಿವೈಎಫ್ಐ ಕಾರ್ಯವನ್ನು ಶ್ಲಾಘಿಸಿ ಜನ ಚಳುವಳಿಗಳು ರಾಜಕೀಯವಾಗಿ ಒಂದು ಶಕ್ತಿಯಾಗಿ ಬೆಳೆಯದಿರುವುದೇ ಬೆಂಗಳೂರಿನ ಇಂದಿನ ಜ್ವಲಂತ ಸಮಸ್ಯೆಗಳು ಉಳಿದಿರಲು ಕಾರಣ ಎಂದು ವಿಶ್ಲೇಷಿಸಿದರು. ಈ ನಿಟ್ಟಿನಲ್ಲಿ ಎಲ್ಲಾ ಜನ ಚಳುವಳಿಗಳು ಒಟ್ಟಿಗೆ ಮುಂಬರುವ ಚುನಾವಣೆಯಲ್ಲಿ ಒಟ್ಟಿಗೆ ಚುನಾವಣೆ ಎದುರಿಸಬೇಕಾದ ಅಗತ್ಯವಿದೆ ಎಂದು ಒತ್ತಿ ಹೇಳಿದರು.

ಭಾಷಾಂಧನೆಯ ಅಪಾಯ

ಸಿಪಿಐ(ಎಂ)ನ ಕೆ.ಪ್ರಕಾಶ್ ಮಾತನಾಡಿ ಬೆಂಗಳೂರು ಸಾರ್ವಜನಿಕ ಉದ್ದಿಮೆಗಳ ನಗರವಾಗಿ ರೂಪುಗೊಳ್ಳಲು ಆರಂಭಿಸಿದ ಕಾಲದಲ್ಲಿ ಕರ್ನಾಟಕದ ಜನರು ಭೂ ಸಂಬಂಧಿತ ಚಟುವಟಿಕೆಗಳನ್ನು ಬಿಟ್ಟು ಕೈಗಾರಿಕೆಗಳಲ್ಲಿ ಕೆಲಸ ಮಾಡಲು ಹಿಂಜರಿದ ಪರಿಣಾಮ ತಮಿಳುನಾಡು ಹಾಗೂ ಆಂಧ್ರಪ್ರದೇಶದಿಂದ ಕಾರ್ಮಿಕರು ಬೆಂಗಳೂರಿಗೆ ವಲಸೆ ಬಂದು ದುಡಿಯುವಂತಹ ಒಂದು ವಿಶಿಷ್ಟ ಸನ್ನಿವೇಶ ನಿರ್ಮಾಣವಾಯಿತು. ಇಂದು ಆ ಪರಿಸ್ಥಿತಿ ಬದಲಾದ ಹಿನ್ನೆಲೆಯಲ್ಲಿ ದಕ್ಷಿಣ ಕರ್ನಾಟಕ ಹಾಗೂ ಉತ್ತರ ಕರ್ನಾಟಕಗಳಿಂದ ಗಣನೀಯ ಪ್ರಮಾಣದ ಉದ್ಯೋಗವನ್ನು ಅರಸಿ ಬರುವ ಜನರು ಹೆಚ್ಚ ಇಂಥ ಪರಿಸ್ಥಿತಿಯ ದುರ್ಲಾಭ ಪಡೆಯಲು ಕ ರಕ್ಷಣೆಯ ಹೆಸರಿನಲ್ಲಿ ಕೆಲಸ ಸಂಘಟನೆಗಳು ಭ ಅಂಧಾಭಿಮಾನ ಬೆಳೆಸಲು ವ್ಯವಸ್ಥಿತ ಪ್ರಯ ನಡೆಸುತ್ತಿವೆ. ದುಡಿಯುವ ಜನತೆಯನ್ನು ವಿಭಜಿಸು ಪ್ರಯತ್ನದ ವಿರುದ್ಧ ಸಂಘಟಿತ ಹೋರಾ ನಡೆಸಬೇಕಿದೆ. ಬೆಂಗಳೂರಿನ ಭೂಮಿ ದುಡ್ಡಿದ್ದವ ಪಾಲಾಗುತ್ತಿದ್ದು, ಇದರಿಂದ ಸಾಮಾನ್ಯ ಜನ ತೀ ಕಷ್ಟದ ಪರಿಸ್ಥಿತಿಯನ್ನು ಎದುರಿಸಬೇಕಿದೆ. ಹಿನ್ನೆಲೆಯಲ್ಲಿ ಎಲ್ಲಾ ಜನ ಚಳುವಳಿಗಳು ಒಟ್ಟ ಐಕ್ಯ ಚಳುವಳಿಯನ್ನು ನಡೆಸಿ ಬೆಂಗಳೂರು ನಗರವ ದುಡಿಯುವ ಜನರ ನಗರವಾಗಿ ಉಳಿಸಬೇಕಿ ಎಂದರು. ಅಧ್ಯಕ್ಷತೆಯನ್ನು ಬ್ಯಾಂಕ್ ನೌಕರರ ಸಂಘ ರಾಜ್ಯ ಕಾರ್ಯದರ್ಶಿ ರತ್ನಾಕರ ಶೆಣೈ ವಹಿಸಿದರು.

ವಿಚಾರ ಸಂಕಿರಣದಲ್ಲಿ ಪ್ರಸ್ತಾಪಿತಗೊಂ ವಿಚಾರಗಳು ಬೆಂಗಳೂರಿನ ಸಮಸ್ಯೆಗಳ ಕುರಿ ಒಂದು ಕಣ್ಣೋಟಕ್ಕೆ ಬರ ಯಶಸ್ವಿಯಾಗುವುದರೊಂದಿಗೆ ಈ ವಿಚಾರಗಳ ಕೆಳಹಂತಗಳಿಗೆ ಸಾಮಾನ್ಯ ಜನ ಭಾಗವಹಿಸುವ ರೀತಿಯಲ್ಲಿ ತೆಗೆದುಕೊಂಡು ಹೋಗಬೇ ಅಗತ್ಯವಿದೆ ಎಂಬ ಒಮ್ಮತಾಭಿಪ್ರಾಯ ಮೂಡಿತ

ಮೈಸೂರಿನಲ್ಲಿ ಭುಗಿಲೆದ್ದಿರುವ ಕೋಮುಗಲಭೆ ಆಕಸ್ಮಿಕವಲ್ಲ. ಅದರ ಹಿಂದೆ ವ್ಯವಸ್ಥಿತ ಯೋಜನೆ ಇದು. ಕೋಮು ಆಧಾರದಲ್ಲಿ ಸಮಾಜವನ್ನು [illegible]ಜಿಸುವ ತಂತ್ರಗಳಿವೆ.

ಮೈಸೂರು : ಯೋಜಿತ ಕೋಮುಗಲಭೆಗೆ ಅಮಾಯಕರ ಬಲಿ

ಮೈಸೂರಿನಲ್ಲಿ ಕೋಮು ಜ್ವಾಲೆ ಮತ್ತೊಮ್ಮೆ ಬುಗಿಲೆದ್ದಿದೆ. ಮೂರು ಜನ ಅಮಾಯಕರು ಹತ್ಯೆಗೀಡಾಗಿದ್ದಾರೆ. ಹತ್ತಾರು ಜನ ತೀವ್ರ ಗಾಯಗಳಿಂದ ಆಸ್ಪತ್ರೆ ಸೇರಿದ್ದಾರೆ. ಕ್ಷಿಪ್ರ ಕಾರ್ಯಾಚರಣೆ ಪಡೆ ಮತ್ತು ಪೋಲಿಸ್ ಪಡೆ ಗಲಭೆಗೀಡಾದ ಪ್ರದೇಶಗಳಲ್ಲಿ ಶಾಂತಿ ಕಾಪಾಡಲು ನಿಯೋಜಿತಗೊಂಡಿದ್ದರೂ ಅಲ್ಲೊಂದು ಇಲ್ಲೊಂದು [illegible]ದ ಪ್ರಕರಣಗಳು ವರದಿಯಾಗುತ್ತಿವೆ. ಜೀವ ಭಯದಿಂದ ನೂರಾರು ಕುಟುಂಬಗಳು ವಲಸೆ ಹೋಗುತ್ತಿವೆ. ಕಳೆದ ಕೆಲ ತಿಂಗಳುಗಳಲ್ಲಿ ಇದು ಮೂರನೇ ಗಲಭೆ. ಕಳೆದ ಬಾರಿ ಹೋಲಿಸಿದರೆ ಈ ಬಾರಿ ವ್ಯವಸ್ಥಿತವಾಗಿ ಗಲಭೆಗಳನ್ನು ಪ್ರಾಯೋಜಿಸಲಾಗಿದೆ ಎನ್ನುವುದುಗಲಭೆ ಉಂಟಾಗಲು ಕಾರಣವಾದ ಘಟನೆಗಳು, ಅನಂತರದಲ್ಲಿ ವ್ಯಕ್ತವಾದ ಹಿಂಸಾತ್ಮಕ ಪ್ರತಿಕ್ರಿಯೆಗಳು ಸ್ಪಷ್ಟಪಡಿಸುತ್ತವೆ.





ಜುಲೈ 2 ರಂದು ಉದಯಗಿರಿ ಠಾಣಾ ವ್ಯಾಪ್ತಿಯ ಸಮೀಹ ಅರೇಬಿಕ್ ಟ್ರಸ್ಟ್ ನಡೆಸುವ ಶಾಲೆಯ ನಿರ್ಮಾಣ ಹಂತದಲ್ಲಿರುವ ಕಟ್ಟಡದ ಮುಂದೆ ಹಂದಿ ಮಾಂಸವನ್ನು ಎಸೆಯಲಾಗಿದೆ ಎನ್ನುವ ಘಟನೆಯಿಂದ ಪ್ರಾರಂಭವಾದ ಗಲಭೆಗಳು ಇಡೀ ದಿನ ಅವ್ಯಾಹಿತವಾಗಿ ನಡೆದವು. ಸಂಜೆಯ ವೇಳೆಗೆ ಮೂರು ಜನ ಹತ್ಯೆಗೀಡಾದ ವರದಿ ಪ್ರಕಟಗೊಳ್ಳುತ್ತಿದ್ದಂತೆಯೇ ಇಡೀ ನಗರ ಆತಂಕಕ್ಕೀಡಾಯಿತು. ಕ್ಯಾತಮಾರನಹಳ್ಳಿ, ಉದಯಗಿರಿ, ಶಾಂತಿನಗರ, ರಾಜೀವನಗರ ಪ್ರದೇಶಗಳಲ್ಲಿ ಎರಡೂ ಕೋಮಿನ ಜನ ಮಾರಕಾಸ್ತ್ರಗಳನ್ನು ಹಿಡಿದು ಗುಂಪು ಗುಂಪಾಗಿ ಸುತ್ತುತ್ತಿರುವ, ಅಮಾಯಕರನ್ನು ಥಳಿಸುವ, ಮನೆಗಳಿಗೆ ನುಗ್ಗಿ ಲೂಟಿ ಮಾಡುವ, ವಾಹನಗಳಿಗೆ ಬೆಂಕಿ ಹಚ್ಚುವ ಕೆಲಸ ಅಂದು ನಡೆಯಿತು. ಕಾನೂನು ಸುವ್ಯವಸ್ಥೆ ಕಾಪಾಡಲು ಕೊಯಮುತ್ತೂರಿನಲ್ಲಿದ್ದ ಕ್ಷಿಪ್ರ ಕಾರ್ಯಾಚರಣೆ ಪಡೆಯನ್ನು ತರಿಸಿಕೊಳ್ಳಲಾಯಿತು. ಈ ಮಧ್ಯೆ ಬಿಜೆಪಿ ಯುವ ಮೋರ್ಚಾದ ನಗರಾಧ್ಯಕ್ಷ ಗಿರಿಧರ ಎನ್ನುವ ವ್ಯಕ್ತಿ ಅಪರಿಚಿತ ದುಷ್ಕರ್ಮಿಗಳಿಂದ ಮಾರಣಾಂತಿಕ ಹಲ್ಲೆಗೆ ಒಳಗಾದ. ಹಲ್ಲೆಯ ಕಾರಣಗಳು ಗಲಭೆಗೆ ಸಂಬಂಧಿಸಿದ್ದಲ್ಲ. ಲೇವಾದೇವಿ ವ್ಯವಹಾರ ನಡೆಸುತ್ತಿದ್ದ ಗಿರಿಧರನ ಹಳೆಯ ದ್ವೇಷದ ಕಾರಣವಾಗಿ ದಾಳಿ ಮಾಡಲಾಗಿದೆ ಎಂದು ಪೋಲೀಸ್ ಮೂಲಗಳು ಹೇಳುತ್ತಿವೆ. ಆತ ಸತ್ತು ಹೋದ 'ಎನ್ನುವ ವದಂತಿ ನಗರಾದ್ಯಂತ ಹರಡಿ ಮತ್ತೆ ಪ್ರಕ್ಷುಬ್ಧ ಪರಿಸ್ಥಿತಿ ಉಂಟಾಯಿತು. ಹಿಂದೂ ಜಾಗರಣ ವೇದಿಕೆಯು ಹಿಂದುಗಳ ಮೇಲಿನ ಹಲ್ಲೆಯನ್ನು ಖಂಡಿಸಿ ಮೈಸೂರು ಬಂದ್‌ಗೆ ನೀಡಿದ ಕರೆಗೆ ಭಯಗ್ರಸ್ತ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಗಲಭೆಗ್ರಸ್ತ ಪ್ರದೇಶದ ಸಮಾಜ ಆರ್ಥಿಕ ಪರಿಸ್ಥಿತಿ

ಸದಾ ಆತಂಕದ ಕ್ಷಣದಲ್ಲೇ ಬದುಕುವ ಕ್ಯಾತಮಾರನಹಳ್ಳಿ, ಶಾಂತಿನಗರ, ಉದಯಗಿರಿ, ಗೌಸಿಯಾನಗರ, ರಾಜೀವನಗರದ ಜನರು ತೀರಾ ಕೆಳಸ್ತರದಿಂದ ಬಂದವರು. ದಿನದ ದುಡಿಮೆಯ ಮೇಲೆಯೇ ಬದುಕು ಸಾಗಿಸುವ ಇವರು ಬಡತನವನ್ನೇ ಹಾಸಿ ಹೊದೆಯುತ್ತಾರೆ. ಇಲ್ಲಿ ಬಡತನ ಮಾತ್ರ ಧರ್ಮಾತೀತವಾಗಿದೆ. ಹಿಂದುಗಳಾಗಲಿ, ಮುಸ್ಲಿಮರಾಗಲಿ ಯಾರೂ ಇದರಿಂದ ಹೊರತಾಗಿಲ್ಲ. ಇಲ್ಲಿ ವೇಶ್ಯಾವೃತ್ತಿ ನಡೆಯುತ್ತದೆ. ಮಟ್ಕಾ ಅಡ್ಡೆಗಳಿವೆ, ಜೂಜು ಕೇಂದ್ರಗಳಿವೆ. ಕಡಿಮೆ ಖರ್ಚಿನ ಅಮಲು ಕೇಂದ್ರಗಳಿವೆ. ಹಾಗೆಯೇ ನೂರಕ್ಕೂ ಮಿಕ್ಕಿ ದೇವಸ್ಥಾನಗಳಿವೆ. ಪ್ರತಿ ತಿರುವಿನಲ್ಲೊಂದು ಮಸೀದಿ ಇದೆ. ಪ್ರತಿ ಮನೆಯಲ್ಲೂ ಕೆಲಸವಿಲ್ಲದ ನಿರುದ್ಯೋಗಿಗಳಿದ್ದಾರೆ. ಬಡತನದ ಕ್ಷೋಭೆಯಿಂದ ಏನು ಮಾಡಲೂ ಹೇಸದ ಸಮಾಜ ವಿರೋಧಿಗಳಿದ್ದಾರೆ. ಇವೆಲ್ಲವೂಗಳ ಜೊತೆ ರಾಜಕೀಯವೂ ಇದೆ.

ಏನಿದರ ರಾಜಕೀಯ?

ಗಲಭೆಗಳೀಡಾಗಿರುವ ಕ್ಯಾತಮಾರನಹಳ್ಳಿ ಉದಯಗಿರಿ ಹಾಗೂ ಇನ್ನಿತರ ಪ್ರದೇಶಗಳು ನರಸಿಂಹರಾಜ ಶಾಸನ ಸಭಾ ಕ್ಷೇತ್ರಕ್ಕೆ ಒಳಪಡುತ್ತವೆ. ಬಾಬ್ರಿ ಮಸೀದಿ ಧ್ವಂಸದ ನಂತರ ದೇಶಾದ್ಯಂತ ವಿಜೃಂಭಿಸಿದ ಹಿಂದೂ ಕೋಮುವಾದದ ಬೆಂಕಿಯಲ್ಲೇ ಒಂದು ಬಾರಿ ಈ ಕ್ಷೇತ್ರ ಬಿಜೆಪಿಗೆ ಬಂದಿತ್ತು. ಅದಕ್ಕೆ ಮೊದಲು, ಆ ನಂತರ ಅಲ್ಲಿ ಕಾಂಗ್ರೆಸ್‌ದೇ ಪ್ರಾಬಲ್ಯ. ಕಳೆದ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಅಲ್ಲಿ ಕೆ.ಎಫ್.ಡಿ. ಯ ಅಭ್ಯರ್ಥಿಯೂ ಸ್ಪರ್ಧಿಸಿ ಗಣನೀಯ ಮತಗಳನ್ನು ಪಡೆದಿದ್ದರು. ಇತ್ತೀಚಿಗೆ ನಡೆದ ಲೋಕಸಬಾ ಚುನಾವಣೆಗಳಲ್ಲೂ ಕಾಂಗ್ರೆಸ್ ಪಕ್ಷಕ್ಕೆ ಅತಿ ಹೆಚ್ಚಿನ ಲೀಡ್ ಸಿಕ್ಕಿದ್ದೂ ಇಲ್ಲಿಯೇ. ಬಿಜೆಪಿಗೆ ನೆಲೆಯೇ ಇಲ್ಲದಿದ್ದ ಇಂಥಲ್ಲಿ ಜಾತ್ಯಾತೀತ ಪಕ್ಷಗಳಿಂದ ಆಯ್ಕೆಯಾಗಿದ್ದ ನಗರ ಪಾಲಿಕೆ ಸದಸ್ಯರನ್ನು ಆಪರೇಷನ್ ಕಮಲದ ಮೂಲಕ ಖರೀದಿಸಲಾಯಿತು. ಇದೂ ಕೂಡ ಅಲ್ಲಿನ ನಾಗರೀಕರನ್ನು ಕೆರಳಿಸಿತ್ತು. ಕೋಮುಗಲಭೆ ಗಳನ್ನು ಸೃಷ್ಟಿಸಿ, ಜನರನ್ನು ಒಡೆದಿಡುವ ಮೂಲಕ ರಾಜಕೀಯ ಅಧಿಕಾರ ಗಳಿಸಿಕೊಳ್ಳುವ ಬಿಜೆಪಿಯ ಕಾರ್ಯತಂತ್ರದ ಭಾಗವಾಗಿಯೂ ಈ ಗಲಭೆಗಳನ್ನು ನೋಡಬೇಕಿದೆ. ಗಲಭೆಗಳು ರಾಜ್ಯದ ಯಾವುದೇ ಒಂದು ಪ್ರದೇಶದಲ್ಲಿ ನಡೆದರೂ ಧೃವೀಕರಣದ ಪ್ರಕ್ರಿಯೆ ಮಾತ್ರ ಎಲ್ಲೆಡೆ ನಡೆಯುತ್ತಿದೆ. ಹಾಗೆ ಮಾಡಲು ಸಂಘ ಪರಿವಾರ ಪೂರಕವಾಗಿ ಬಳಕೆಯಾಗುತ್ತವೆ. ರಾಜ್ಯವನ್ನು ಆಳುತ್ತಿರುವ ಬಿಜೆಪಿ ಸರ್ಕಾರವು ಎಲ್ಲಾ ರಂಗಗಳಲ್ಲೂ ವಿಫಲಗೊಂಡು ಜನರ ಆಕ್ರೋಶಕ್ಕೆ ಗುರಿಯಾಗಿವೆ. ತನ್ನ ವಿರುದ್ಧ ಸಂಘಟಿತಗೊಳ್ಳುತ್ತಿರುವ ಜನರ ಅತೃಪ್ತಿಯನ್ನು ವಿಮುಖಗೊಳಿಸಲು ಕೋಮುಗಲಭೆಗಳಿಗಿಂತ ಪ್ರಾಶಸ್ತ್ಯ ಪರಿಹಾರ ಬೇಕೆ? ಕರಾವಳಿಯ ನಂತರ, ದಕ್ಷಿಣ ಕರ್ನಾಟಕದ ಜಿಲ್ಲೆಗಳೀಗ ಕೋಮುವಾದದ ಪ್ರಯೋಗ ಶಾಲೆಗಳಾಗಿ ಬದಲಾಗುತ್ತಿವೆ. ಮೈಸೂರು ಗಲಭೆಗಳು ಈ ಪ್ರಯತ್ನದ ಒಂದು ಭಾಗ.

ಅಲ್ಪಸಂಖ್ಯಾತರ ಬಗೆಗಿನ ಬಿಜೆಪಿಯ ನಿಲುವುಗಳ ಬಗ್ಗೆ ಸಂಘ ಪರಿವಾರದ ದಾಳಿಗಳ ಬಗ್ಗೆ ಸದಾ ಆತಂಕದಲ್ಲಿರುವ ಅಲ್ಲಿನ ಬಡ ಮುಸ್ಲಿಮರನ್ನು ಅನಾಹುತಕಾರಿ ಸಂಘಟನೆಯಾದ ಕರ್ನಾಟಕ ಫೋರಂ ಫಾರ್ ಡಿಗ್ನಿಟಿ (ಕೆ.ಇ.ಡಿ) ತನ್ನ ತೆಕ್ಕೆಗೆ ತೆಗೆದುಕೊಂಡಿದೆ. ಅದೇ ರೀತಿ ಬಡ ಹಿಂದೂಗಳ ಮೇಲೆ ಬಜರಂಗದಳ, ಶ್ರೀರಾಮಸೇನೆಯಂಥ ಅಪಾಯಕಾರಿ ಸಂಘಟನೆಗಳ ನಿಯಂತ್ರಣವಿದೆ. ಹೀಗಾಗಿ ಇಡೀ ಪ್ರದೇಶ ಕೋಮುವಾದಿಶಕ್ತಿಗಳ ಅಡುಂಬೊಲವಾಗಿದೆ.

ಕೆ.ಎಫ್.ಡಿ.ಯೂ ಹಾಗೂ ಮುತಾಲಿಕನ ವಾನರ ಸೇನೆಯೂ

ಬಡತನಕ್ಕೆ ಬಾಂಧವ್ಯದ ಬೆಲೆ ಗೊತ್ತು, ಪರಸ್ಪರ ಆಡಿಕೊಳ್ಳುವ ಅನಿವಾರ್ಯತೆ ಒಡತನಕ್ಕಿದೆ. ಆದರೆ ಕೂಡಿ ಬದುಕುವ ಸಾಮರಸ್ಯದ ಮುಖ್ಯವಾಹಿನಿಯಿಂದ ಅಲ್ಪಸಂಖ್ಯಾಂತರನ್ನು ದೂರವಿಡುವ ಕೆ.ಎಫ್.ಡಿ.ಯಂತಹ ಸಂಘಟನೆಗಳು ಕೂಡ ಗಲಭೆಗಳಿಗೆ ಮುಖ್ಯ ಕಾರಣವಾಗಿವೆ.

ಪುಟ 11 ಕ್ಕೆ

ಗಲಭೆಕೋರರ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹ

ಮೈಸೂರು ನಗರದ ಕ್ಯಾತಮಾರನಹಳ್ಳಿ ಪ್ರದೇಶದಲ್ಲಿ ಮೂರು ಜನ ಅಮಾಯಕರನ್ನು ಬಲಿತೆಗೆದುಕೊಂಡ ಹಾಗೂ ಲಕ್ಷಾಂತರ ರೂ. ಆಸ್ತಿಪಾಸ್ತಿ ಹಾನಿಗೆ ಕಾರಣರಾದ ಗಲಭೆಕೋರರನ್ನು ನಿಷ್ಪಕ್ಷಪಾತವಾಗಿ ಬಂಧಿಸಿ ಅವರ ವಿರುದ್ಧ ಕಠಿಣಕ್ರಮ ಜರುಗಿಸಬೇಕೆಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿ ಒತ್ತಾಯಿಸಿದೆ. ಹಿಂದೆ ಬೆಂಗಳೂರಿನಲ್ಲಿ ಮಸೀದಿಯ ಆವರಣದಲ್ಲಿ ಸತ್ತ ಹಂದಿಯನ್ನು ಎಸೆದು ಗಲಭೆ ನಡೆಸಲು ಯತ್ನಿಸಿದ ದುಷ್ಕರ್ಮಿಗಳನ್ನು ಪತ್ತೆಹಚ್ಚಿ ಅವರ ವಿರುದ್ಧ ಕಠಿಣವಾದ ಕಾನೂನು ಕ್ರಮ ಜರಗಿಸಿದ್ದರೆ ಮೈಸೂರಿನಲ್ಲಿ ಅದೇ ರೀತಿಯ ತಂತ್ರ ಅನುಸರಿಸಿ ಕೋಮು ಗಲಭೆ ಉಂಟು ಮಾಡಲು ಪ್ರಯತ್ನಿಸುವುದು ಅಷ್ಟೊಂದು ಸುಲಭ ಆಗುತ್ತಿರಲಿಲ್ಲ. ಆದರೆ ರಾಜ್ಯ ಬಿಜೆಪಿ ಸರ್ಕಾರ [illegible]ೋಮುಗಲಭೆಗಳಲ್ಲಿ ಭಾಗವಹಿಸಿದ್ದ ಬಜರಂಗ ದಳದವರ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಕೇಸುಗಳನ್ನು ಹಿಂತೆಗೆದುಕೊಂಡಿರುವುದು ಗಲಭೆಕೋರ ಶಕ್ತಿಗಳಿಗೆ ಭಾರೀ ಕುಮ್ಮಕ್ಕು ನೀಡಿದೆ.

ರಾಜ್ಯ ಸರ್ಕಾರದ ಧೋರಣೆಯನ್ನು ಅರಿತಿರುವ ಪೋಲೀಸರು ಇಂತಹ ಗಲಭೆಗಳು ನಡೆದಾಗ ನಿಷ್ಪಕ್ಷಪಾತದಿಂದ ಕ್ರಮ ಜರುಗಿಸುವುದನ್ನೇ ಕೈಬಿಟ್ಟಿದ್ದಾರೆ 2 ತಿಂಗಳ ಹಿಂದೆ ಇದೇ ಕ್ಯಾತಮಾರನಹಳ್ಳಿ ಪ್ರದೇಶದಲ್ಲಿ ಕೋಮುಗಲಭೆ ಸಂಭವಿಸಿದಾಗ, ಪೋಲಿಸರು ಒಂದು ಕೋಮಿನ ವಿರುದ್ಧ ವರ್ತಿಸಿದ್ದರು. ಈ ಸಲ ಗಲಭೆ ನಡೆಯುತ್ತಿದ್ದಾಗ ಪೊಲೀಸರು ಮೂಕ ಪ್ರೇಕ್ಷಕರಾಗಿದ್ದರು. ಈ ಸಲವೂ ಪೋಲೀಸರು ಅಮಾಯಕರನ್ನು ಬಂಧಿಸಿ ಹಿಂಸಿಸುವ ಸಾಧ್ಯತೆಯೇ ಹೆಚ್ಚು. ಹಾಗಾಗಿ ಅಲ್ಲಿಯ ಜನ ಭಯಭೀತರಾಗಿ ತಮ್ಮ ಮನೆಗಳನ್ನು ತೆರವುಗೊಳಿಸಿ ಹೋಗುತ್ತಿದ್ದಾರೆ.

ಆದ್ದರಿಂದ ಜಿಲ್ಲಾಡಳಿತ ಕೂಡಲೇ ಮಧ್ಯಪ್ರವೇಶ ಮಾಡಿ, ಜನಸಾಮಾನ್ಯರಲ್ಲಿ ಧೈರ್ಯತುಂಬಿ, ಆ ಪ್ರದೇಶದಲ್ಲಿ ಶಾಂತಿ ನೆಲೆಸುವಂತೆ ಮಾಡಲು ಆಧ್ಯತೆ ನೀಡಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.

ಉಳ್ಳವರು ಮತ್ತು ಇಲ್ಲದವರ ನಡುವಿನ ಕಂದರವನ್ನು ಬೆಳೆಸುವ ಬಜೆಟ್

'ಜನಸಾಮಾನ್ಯರ ಬದುಕಿನ ರಕ್ಷಣೆಗಾಗಿ ಹೋರಾಟಗಳಿಗೆ ಸಿದ್ಧರಾಗಿರಿ' ಸಿಪಿಐ(ಎಂ) ಪೊಲಿಟ್‌ಬ್ಯೂರೋ

ಜುಲೈ 6ರಂದು ಹಣಕಾಸು ಮಂತ್ರಿಗಳು ಸಂಸತ್ತಿನಲ್ಲಿ ಮಂಡಿಸಿದ ಬಜೆಟ್ ಆರ್ಥಿಕ ಹಿಂಜರಿತ, ಹೆಚ್ಚುತ್ತಿರುವ ಉದ್ಯೋಗ ನಷ್ಟಗಳು ಮತ್ತು ಜನಸಮೂಹಗಳ ಕುಂಠಿತಗೊಳ್ಳುತ್ತಿರುವ ಕೊಳ್ಳುವ ಸಾಮರ್ಥ್ಯ ಮುಂತಾದ ಸವಾಲುಗಳನ್ನು ಎದುರಿಸಲು ಏನೇನೂ ಸಾಲದು. ಒಟ್ಟು ಖರ್ಚು ಜಿಡಿಪಿಯ 2 ಶೇ.ದಷ್ಟು ಮಾತ್ರವೇ ಹೆಚ್ಚುತ್ತದೆ. ಇದರಿಂದ ಸಾಲದ ಬಡ್ಡಿಗಳ ಪಾವತಿ ಮತ್ತು ಆರನೇ ವೇತನ ಆಯೋಗದ ಶಿಫಾರಸುಗಳ ಜಾರಿಯಂತಹ ಅಭಿವೃದ್ಧಿಯೇತರ ಖರ್ಚುಗಳನ್ನು ಭರಿಸಬಹುದಷ್ಟೇ. ಆದ್ದರಿಂದ ಈ ಬಜೆಟ್ ಬೆಳವಣಿಗೆಗೆ ಉತ್ತೇಜನೆಯನ್ನೂ ನೀಡುತ್ತಿಲ್ಲ, ಜನಸಾಮಾನ್ಯರನ್ನು 'ಒಳಗೊಳ್ಳುವ ಬೆಳವಣಿಗೆ' ಯ ಅಗತ್ಯಗಳನ್ನು ಕೂಡಾ ಪೂರೈಸುತ್ತಿಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೋ ವಿಶ್ಲೇಷಿಸಿದೆ.

ಒಂದೆಡೆ ಸರಕಾರ ಆರ್ಥಿಕಕ್ಕೆ ಉತ್ತೇಜನೆ ನೀಡಲು ಅಗತ್ಯವಾದ ಸಂಪನ್ಮೂಲಗಳನ್ನು ಒದಗಿಸುವಲ್ಲಿ ವಿಫಲವಾಗಿದ್ದರೆ, ಮತ್ತೊಂದೆಡೆ ಜನಸಮೂಹಗಳ ಬದುಕನ್ನು ಬಾಧಿಸುವ ವಲಯಗಳಿಗೆ ಹಣನೀಡಿಕೆಯಲ್ಲಿ ತನ್ನ ಪಾತ್ರವನ್ನು ಸರಕಾರ ನಿರ್ಲಕ್ಷಿಸಿರುವುದು ಇನ್ನಷ್ಟು ಗಂಭೀರ ಸಂಗತಿ. ದೀರ್ಘ ಕಾಲದ ಕೃಷಿ ಬಿಕ್ಕಟ್ಟು ಮತ್ತು 2008-09ರಲ್ಲಿ ಕೃಷಿ ಬೆಳವಣಿಗೆಯಲ್ಲಿ ನಿಧಾನ ಗತಿ ಬಹಳವಾಗಿ ತಟ್ಟಿರುವ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯಂತಹ ನಿರ್ಣಾಯಕ ವಲಯಗಳಿಗೆ ಯೋಜನಾ ವೆಚ್ಚದ ರೂಪದಲ್ಲಿ ನೀಡಿರುವ ಬೆಂಬಲ ಅತ್ಯಲ್ಪ. ಕೃಷಿ ಸಾಲಗಳ ಮೇಲೆ ಬಡ್ಡಿದರಗಳನ್ನು 4ಶೇ. ಕ್ಕೆ ಇಳಿಸಿಲ್ಲ, ಬದಲಿಗೆ ಸಾಲವನ್ನು ಅವಧಿಯೊಳಗೆ ತೀರಿಸಲು ಪ್ರೋತ್ಸಾಹವನ್ನು ಪ್ರಕಟಿಸಲಾಗಿದೆಯಷ್ಟೇ.

ಶಿಕ್ಷಣದ ಹಕ್ಕನ್ನು ಜಾರಿಗೊಳಿಸಲು ಬೇಕಾಗುವ ಹಣದ ಪ್ರಸ್ತಾವವೇ ಇಲ್ಲ. ಇದು ನಿಜಕ್ಕೂ ಆಘಾತಕಾರಿ ಪ್ರಾಥಮಿಕ ಶಿಕ್ಷಣಕ್ಕೆ ಹಣ ನೀಡಿಕೆಯಲ್ಲಿ 200ಕೋಟಿ ರೂ.ಗಳಷ್ಟು ಕೂಡಾ ಹೆಚ್ಚಳವಾಗಿಲ್ಲ. ಐಸಿಡಿಎಸ್ (ಅಂಗನವಾಡಿ ವ್ಯವಸ್ಥೆ)ನ್ನು ಸಾರ್ವತ್ರಿಕಗೊಳಿಸುವ ಬಗ್ಗೆ ಸರಕಾರ ಗಂಭೀರವಾಗಿ ಯೋಚಿಸುತ್ತಿಲ್ಲ. ಅದಕ್ಕೆ ಕೇವಲ 360 ಕೋಟಿ ರೂ.ಗಳನ್ನು ಹೆಚ್ಚಿಸಲಾಗಿದೆ. ಹಣಕಾಸು ಮಂತ್ರಿಗಳು ಅಸಂಘಟಿತ ವಲಯದ ಕಾರ್ಮಿಕರ ಸಾಮಾಜಿಕ ಸುರಕ್ಷಾ ಯೋಜನೆಗಳ ಬಗ್ಗೆ ಬಹಳ ಮಾತಾಡಿದರೂ ಅದಕ್ಕೆ ಕಳೆದ ವರ್ಷಕ್ಕಿಂತ ಕೇವಲ 100 ಕೋಟಿ ರೂ.ಗಳನ್ನು ಹೆಚ್ಚಿಸಲಾಗಿದೆ.

ಭದ್ರತೆಯ ಹೆಸರಿನಲ್ಲೂ ಕಡಿತವೇ

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕನಿಷ್ಠ ಕೂಲಿಯನ್ನು 100ರೂ.ಗೆ ಹೆಚ್ಚಿಸಿರುವುದು ಈ ಕೂಲಿ ಕಡಿಮೆಯಿರುವ ರಾಜ್ಯಗಳಲ್ಲಿ ಸ್ವಾಗತಾರ್ಹವಾದರೂ ಈ ಯೋಜನೆಗೆ 2008-09ರಲ್ಲಿ ಖರ್ಚು ಮಾಡಿದ್ದಕ್ಕಿಂತ 2350 ಕೋಟಿ ರೂ.ಗಳನ್ನಷ್ಟೇ ಹೆಚ್ಚಿಸಲಾಗಿದೆ. ಇನ್ನೂ ಬಹಳ ಹೆಚ್ಚಿನ ಮಟ್ಟದಲ್ಲಿ ಹಣ ನೀಡಬೇಕಾಗಿತ್ತು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೋ ಅಭಿಪ್ರಾಯಪಟ್ಟಿದೆ.

ಗ್ರಾಮೀಣ ಆರೋಗ್ಯ ಮಿಶನ್‌ಗೂ ಕಳೆದ ವರ್ಷ ಖರ್ಚು ಮಾಡಿದ್ದಕ್ಕಿಂತ 1730 ಕೋಟಿ ರೂ.ಗಳನ್ನಷ್ಟೇ ಹೆಚ್ಚಿಸಲಾಗಿದೆ. ಆಹಾರ ಭದ್ರತಾ ಕಾನೂನಿನ ಹೆಸರಿನಲ್ಲಿ ಅಂತ್ಯೋದಯ ಕುಟುಂಬಗಳಿಗೆ ಆಹಾರಧಾನ್ಯಗಳ ಬೆಲೆಯಲ್ಲಿ ಕೆ.ಜಿ.ಗೆ 1ರೂ. ಹೆಚ್ಚಳ ಮತ್ತು ಬಿಪಿಎಲ್ ಕುಟುಂಬಗಳಿಗೆ 10 ಕೆ.ಜಿ. ಕಡಿತಕ್ಕೆ ಹಣಕಾಸು ಮಂತ್ರಿಗಳು ಮಂಜೂರಾತಿಯ ಮುದ್ರೆಯೊತ್ತಿದ್ದಾರೆ. ಇದು ದುರದೃಷ್ಟಕರ. ಮಹಿಳೆಯರಿಗೆ ಕೊಟ್ಟ ಭರವಸೆಗಳಲ್ಲಿ ಯಾವುದಕ್ಕೂ, ವಿಧವಾ ಪೆನ್ಶನ್ ಯೋಜನೆಗೆ ಕೂಡಾ ಹೆಚ್ಚಿನ ಹಣ ಕೊಟ್ಟಿಲ್ಲ ಎಂಬುದರತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಗಮನ ಸೆಳೆದಿದೆ.

ಉಳ್ಳವರಿಂದ ವಸೂಲಿಯ ಬದಲು

ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಕೊಟ್ಟಿರುವ ಹಲವಾರು ನೇರ ಮತ್ತು ಪರೋಕ್ಷ ತೆರಿಗೆ ರಿಯಾಯ್ತಿಗಳ ಮೂಲಕ ಸರಕಾರ 2008-09ರಲ್ಲಿ 4.18 ಲಕ್ಷ ಕೋಟಿ ರೂ.ಗಳಷ್ಟು ತೆರಿಗೆ ಆದಾಯವನ್ನು ಬಿಟ್ಟು ಕೊಟ್ಟಿದೆಯಂತೆ. ಅತ್ಯಂತ ಅಗತ್ಯವಾದ ವಲಯಗಳಲ್ಲಿ ಬಳಸಲು ಹೆಚ್ಚಿನ ಸಂಪನ್ಮೂಲಗಳ ಕ್ರೋಡೀಕರಣಕ್ಕಾಗಿ ಈ ರಿಯಾಯ್ತಿಗಳನ್ನು ಹಿಂತೆಗೆದುಕೊಳ್ಳುವ ಬದಲು ಹಣಕಾಸು ಮಂತ್ರಿಗಳು ಈ ರಿಯಾಯ್ತಿಗಳನ್ನು ಇಡೀ 2009-10ಕ್ಕೆ ವಿಸ್ತರಿಸಿದ್ದಾರೆ. ಜತೆಗೆ ಹೆಚ್ಚಿನ ಸೌಲಭ್ಯಗಳ ಮೇಲಿನ ತೆರಿಗೆ ಮತ್ತು ಸರಕು ವ್ಯವಹಾರ ತೆರಿಗೆಗಳನ್ನು ರದ್ದು ಮಾಡಿರುವುದು ತೆರಿಗೆ ಸಂಗ್ರಹದ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ. ಕಂಪನಿಗಳ ಲಾಭಗಳ ಮೇಲೆ ಕನಿಷ್ಟ ಪರ್ಯಾಯ ತೆರಿಗೆಯನ್ನು 10ಶೇ. ದಿಂದ 15 ಶೇ.ಕ್ಕೆ ಏರಿಸಿರುವುದು ಸ್ವಾಗತಾರ್ಹವಾದರೂ ಈ ಬಜೆಟಿನಿಂದ ಸರಕಾರದ ನೇರ ತೆರಿಗೆ ಆದಾಯವೇನೂ ಹೆಚ್ಚುವುದಿಲ್ಲ. 2009-10ರಲ್ಲಿ ನೇರ ತೆರಿಗೆಗಳ ಆದಾಯ ಕೇವಲ 7ಶೇ.ದಷ್ಟು ಏರಬಹುದು ಎಂದು ನಿರೀಕ್ಷಿಸಲಾಗಿದೆ. ಇದು ಜಿಡಿಪಿಯ ನಿರೀಕ್ಷಿತ ಹೆಚ್ಚಳಕ್ಕೂ ಅನುಗುಣವಾಗಿಲ್ಲ.

ಈ ವರ್ಷ 3ಜಿ ಟೆಲಿಕಾಂ ಸ್ಪೆಕ್ಟ್ರಂ(ದೂರಸಂಪರ್ಕ ಪಟಲ) ಮಾರಾಟದಿಂದ 35000 ಕೊಟಿ ರೂ.ಗಳನ್ನು ಗಳಿಸ ಬಹುದು ಎಂದು ಸರಕಾರ ನಿರೀಕ್ಷಿಸುತ್ತಿದೆ. ಹಿಂದಿನ ಯುಪಿಎ ಸರಕಾರದ ಆಳ್ವಿಕೆಯಲ್ಲಿ 2ಜಿ ಪಟಲದ ನೀಡಿಕೆಯಲ್ಲಿ ಬೃಹತ್ ಪ್ರಮಾಣದ ಹಗರಣ ನಡೆದಿದೆ ಎಂಬುದನ್ನು ಇದು ದೃಢಪಡಿಸುತ್ತದೆ. ಆ ಹಗರಣದಲ್ಲಿ ಸರಕಾರದ ಖಜಾನೆಗೆ 60,000 ಕೋಟಿ ರೂ.ಗಳ ನಷ್ಟವಾಗಿತ್ತು.

ಒಟ್ಟಿನಲ್ಲಿ ಈ ಬಜೆಟ್ ಜನಗಳ ಅಗತ್ಯಗಳನ್ನು ಪೂರೈಸುವ ಬದಲು ಉಳ್ಳವರು ಮತ್ತು ಇಲ್ಲದವರ ನಡುವಿನ ಕಂದರವನ್ನು ಇನ್ನಷ್ಟು ಬೆಳೆಸುತ್ತದೆ ಎಂದಿರುವ ಸಿಪಿಐ(ಎಂ) ಜನಗಳು ತಮ್ಮ ಬದುಕನ್ನು ರಕ್ಷಿಸಿಕೊಳ್ಳಲು ಮತ್ತು ಉತ್ತಮ ಪಡಿಸಿಕೊಳ್ಳಲು ಹೋರಾಟಗಳಿಗೆ ಸಿದ್ಧವಾಗಬೇಕು ಎಂದು ಕರೆ ನೀಡಿದೆ.


○

ಯುಪಿಎ-2 ರ ಮೊದಲ ಬಜೆಟ್ ಎಂದಿನಂತೆ ಆಳುವ ವರ್ಗಗಳ ಹಿತಾಸಕ್ತಿಗಳೊಂದಿಗೆ ಈ ಸರಕಾರದ ಒಂದು ವೈರುಧ್ಯವನ್ನು ಕೂಡಾ ಬಿಂಬಿಸಿದೆ. ಈ ವೈರುಧ್ಯ ಮುಂದೆ ಹೇಗೆ ಪ್ರಕಟಗೊಳ್ಳುತ್ತದೆ? ಖಾಸಗಿ ಲಾಭಗಳನ್ನು ವಿಸ್ತರಿಸಲು 'ಸುಧಾರಣಾ' ಪ್ರಕ್ರಿಯೆಗೆ ಒತ್ತು ನೀಡುವ ರೀತಿಯಲ್ಲಿ ಇದು ಮೂಡಿ ಬರಲಿ, 'ಹೊಳೆಯುತ್ತಿರುವ ಭಾರತ'ವನ್ನು ಇನ್ನಷ್ಟು ಬಲಿಷ್ಟಗೊಳ್ಳಲಿ ಎಂಬುದು ದೊಡ್ಡ ಬಂಡವಾಳಿಗರ ಪ್ರಯತ್ನ. ಇನ್ನೊಂದೆಡೆ, ಈ ವೈರುಧ್ಯ ಲಾಭಗಳಿಗಿಂತ ಜನಗಳು ಮುಖ್ಯ ಎಂಬ ರೀತಿಯಲ್ಲಿ ಪ್ರಕಟಗೊಳ್ಳಬೇಕಾದರೆ ಅದು 'ನರಳುತ್ತಿರುವ' ಭಾರತದ ವಿಶಾಲ ಜನಸಮೂಹಗಳ ಹೋರಾಟಗಳ ಬಲದಿಂದಷ್ಟೇ ಸಾಧ್ಯ.

'ಹೊಳೆಯುತ್ತಿರುವ' ಮತ್ತು 'ನರಳುತ್ತಿರುವ' ಭಾರತಗಳ ನಡುವೆ

ಬಜೆಟ್ 2009 - 10

ಯುಪಿಎ ಎರಡನೇ ಆವೃತ್ತಿಯ(ಯುಪಿಎ-2) ಮೊದಲ ಬಜೆಟ್ ಪ್ರಕಟವಾಗಿದೆ. ಪ್ರತಿಯೊಂದು ಬಜೆಟ್ ಕೂಡಾ ಸಹಜವಾಗಿಯೇ ಆಳುವ ವರ್ಗಗಳ ಹಿತಾಸಕ್ತಿಗಳನ್ನು ಬಿಂಬಿಸುತ್ತದೆ ಮತ್ತು ಅವರು ತಮ್ಮ ವರ್ಗ ಆಳ್ವಿಕೆಯನ್ನು ಕ್ರೋಢೀಕರಿಸುವ ಹಾಗೂ ಹೆಚ್ಚೆಚ್ಚು ಲಾಭ ಗಿಟ್ಟಿಸುವ ಪ್ರಕ್ರಿಯೆಯ ರೂಪುರೇಷೆಯನ್ನು ಕೂಡಾ ಕೊಡುತ್ತದೆ. ಯುಪಿಎ-2 ರ ಮೊದಲ ಬಜೆಟ್ ಕೂಡ ಅದನ್ನೇ ಮಾಡಿದೆ. ಆದರೆ ಇದು ಯುಪಿಎ-2 ಸರಕಾರದ ಒಂದು ವೈರುಧ್ಯವನ್ನು ಕೂಡಾ ಬಿಂಬಿಸಿದೆ. ಅದು ತನ್ನ ಹುಟ್ಟಿನೊಂದಿಗೇ ಪಡೆದುಕೊಂಡು ಬಂದ ವೈರುಧ್ಯವಿದು. ಆ ವೈರುಧ್ಯ ಹೀಗಿದೆ: ಒಂದೆಡೆ ಅವರು ಅಧಿಕಾರಕ್ಕೆ ಮರಳಿ ಈ ಸರಕಾರ ರಚಿಸಲು ಸಾಧ್ಯವಾದದ್ದು "ಆಮ್ ಆದ್ಮಿ"(ಸಾಮಾನ್ಯ ಜನ)ಯ ಬಲದಿಂದ, ಆದ್ದರಿಂದ ಅವರ ಕಾಳಜಿಗಳನ್ನು ನಿರ್ಲಕ್ಷಿಸುವಂತಿಲ್ಲ. ಇನ್ನೊಂದೆಡೆ ನವ-ಉದಾರವಾದಿ ಸುಧಾರಣೆಗಳ ಪ್ರಕ್ರಿಯೆಯನ್ನು ಮುಂದೊತ್ತಬೇಕೆಂಬ ದೊಡ್ಡ ಬಂಡವಾಳಶಾಹಿಗಳ ಮೂಲಭೂತ ಆಕಾಂಕ್ಷೆ.



ಈಗಾಗಲೇ ಯುಪಿಎ-1ರ ನಾಲ್ಕು ವರ್ಷಗಳ ಉನ್ನತ ಬೆಳವಣಿಗೆಯ ಅವಧಿಯಲ್ಲಿ ಭಾರತೀಯ ಡಾಲರ್ ಶತಕೋಟ್ಯಾಧಿಪತಿಗಳ ಸಂಖ್ಯೆ 2004ರಲ್ಲಿ 9 ಇದ್ದದ್ದು 2008ರಲ್ಲಿ 53 ಕ್ಕೇರಿತು. ಅತೀ ದೊಡ್ಡ ಮೂರು ಕಾರ್ಪೊರೇಟ್ ಗುಂಪುಗಳ ಆಸ್ತಿ 3,54,000 ಕೋಟಿ ರೂಪಾಯಿಗಳಿಂದ ಮೂರು ಪಟ್ಟಾಗಿ 10,34,000ಕೋಟಿ ರೂ.ಗಳಿಗೇರಿತು. ಈ ಬಜೆಟಿನ ಮೂಲಕವೂ ಇದೇ ಪ್ರಕ್ರಿಯೆಯನ್ನು ಬಲಪಡಿಸಬೇಕೆಂಬುದು ಅವರ ಆಶಯ.


ಶ್ರೀಮಂತರಿಗಿದು ಬಕ್ಷೀಷು

ಅದನ್ನು ಹಲವು ತೆರಿಗೆ ಕ್ರಮಗಳ ಮೂಲಕ ಅವರು ಮಾಡಿದ್ದಾರೆ. ಆದಾಯ ತೆರಿಗೆಯ ವಿನಾಯ್ತಿ ಮಿತಿಯನ್ನು ಹೆಚ್ಚಿಸಿ, ಅದರ ಮೇಲಿನ ಅಧಿಭಾರ(ಸರ್ಚಾರ್ಜ್)ವನ್ನು ರದ್ದು ಮಾಡಿ ಶ್ರೀಮಂತರಿಗೆ 10000ಕೋಟಿ ರೂ.ಗಳ ಬಕ್ಷೀಷು ಕೊಡಮಾಡಲಾಗಿದೆ. 1 ಲಕ್ಷ ರೂ. ತಿಂಗಳ ಆದಾಯವಿರುವವರು ಈಗ ಒಂದು ವರ್ಷದಲ್ಲಿ ಸುಮಾರು 30000 ರೂ. ಕಡಿಮೆ ತೆರಿಗೆ ತೆರುತ್ತಾರೆ. ವರ್ಷಕ್ಕೆ 20 ಲಕ್ಷ ರೂ.ಗಿಂತ [illegible] ಆದಾಯವಿರುವವರು ಈಗ 53ಸಾವಿರ ರೂ. ಕಡಿಮೆ ತೆರುತ್ತಾರೆ. ಅಷ್ಟರ ಮಟ್ಟಿಗೆ ಸರಕಾರದ ಆದಾಯ 10000 ಕೋಟಿ ರೂ.ಗಳಷ್ಟು ಕಡಿಮೆಯಾಗುತ್ತದೆ. ಜತೆಗೆ ಕಳೆದ ವರ್ಷ ಸರಕಾರ ವಿವಿಧ ರಿಯಾಯ್ತಿಗಳ ಮೂಲಕ 4.18ಲಕ್ಷ ಕೋಟಿ ರೂ.ಗಳನ್ನು ಬಿಟ್ಟುಕೊಟ್ಟಿದೆ ಎಂದು ಈ ಬಜೆಟ್ ಹೊರಗೆಡಹಿದೆ. ಈ ರಿಯಾಯ್ತಿಗಳನ್ನು 2009-10ಕ್ಕೂ ಮುಂದುವರೆಸಲಾಗಿದೆ. ಫ್ರಿಂಜ್ ಬೆನಿಫಿಟ್ ಅಂದರೆ ಅಂಚಿನ ಸೌಲಭ್ಯಗಳು ಎಂಬ ಹೆಸರಲ್ಲಿ ಕೊಡುವ ಹಣದ ಮೇಲಿನ ತೆರಿಗೆ ಮತ್ತು ಸರಕು ವ್ಯವಹಾರ ತೆರಿಗೆ ಕೂಡಾ ರದ್ದಾಗಿದೆ. ಸರಕು ವ್ಯವಹಾರ ತೆರಿಗೆ ರದ್ದತಿಯಿಂದ ಸರಕುಗಳ ಮೇಲಿನ ಸಟ್ಟಾ ವ್ಯಾಪಾರಗಳು ಹೆಚ್ಚಿ ಜೀವನಾವಶ್ಯಕ ಸರಕುಗಳ ಬೆಲೆಗಳು ಏರುವುದು ಖಂಡಿತ. ಅಮೆರಿಕಾದಲ್ಲಿಯೇ ಅಧ್ಯಕ್ಷ ಒಬಾಮಾರ ಆಡಳಿತದಲ್ಲಿ ಸರಕುಗಳಲ್ಲಿ, ಮುಖ್ಯವಾಗಿ ತೈಲದಲ್ಲಿ ಸಟ್ಟಾ ವ್ಯವಹಾರಗಳ[illegible] ನಿಯಂತ್ರಿಸಲು, ಮಿತಿಗಳನ್ನು ಹಾಕಲು ಗಂಭೀರ

→

ಪರಿಶೀಲನೆ ನಡೆಸುತ್ತಿರುವಾಗ ಇಲ್ಲಿ ಅದನ್ನು ರದ್ದು ಮಾಡಿರುವುದು ಒಂದು ವ್ಯಂಗ್ಯವೇ ಸರಿ.

ಈ ಭಾರತೀಯ ಕಾರ್ಪೊರೇಟ್ ವಲಯದ ಲಾಭಗಳನ್ನು ವಿಸ್ತರಿಸಲು ದಾರಿಗಳನ್ನು ಕೂಡಾ ಒದಗಿಸಲಾಗಿದೆ. ಮೂಲರಚನೆಗಳ ಅಭಿವೃದ್ಧಿಯಲ್ಲಿ ಸಾರ್ವಜನಿಕ- ಖಾಸಗೀ-ಪಾಲುದಾರಿಕೆ(ಪಿಪಿಪಿ)ಗೆ ಹೆಚ್ಚಿನ ಒತ್ತು ಕೊಟ್ಟು ಈ ಅವಕಾಶ ಒದಗಿಸಲಾಗಿದೆ. ಇನ್ನು ಮುಂದೆ ಇಂಡಿಯಾ ಇನ್‌ಫ್ರಾಸ್ಟ್ರಕ್ಚರ್ ಫೈನಾನ್ಸ್ ಕಂಪನಿ ಲಿಮಿಟೆಡ್(ಭಾರತ ಮೂಲರಚನೆ ಹಣಕಾಸು ಕಂಪನಿ) ಪಿಪಿಪಿ ಪ್ರಾಜೆಕ್ಟುಗಳಿಗೆ ಕೊಡುವ ವಾಣಿಜ್ಯ ಸಾಲಗಳಲ್ಲಿ 60ಶೇಕಡಾವನ್ನು ಕೊಡುತ್ತದೆ. ಈ ಹಣಕಾಸು ಕಂಪನಿ ಮತ್ತು ಬ್ಯಾಂಕುಗಳು ಈಗ ಒಟ್ಟು ಒಂದು ಲಕ್ಷ ಕೋಟಿ ರೂ.ಗಳ ವರೆಗಿನ ಹೂಡಿಕೆಯ ಪ್ರಾಜೆಕ್ಟುಗಳನ್ನು ಬೆಂಬಲಿಸುವ ಸ್ಥಿತಿಯಲ್ಲಿವೆ ಎಂದು ಬಜೆಟ್ ಪ್ರಕಟಿಸಿದೆ. ಅಂದರೆ ಸರಕಾರದೊಡಗೂಡಿ ಮೂಲರಚನೆಗಳ ಪ್ರಾಜೆಕ್ಟುಗಳಲ್ಲಿ ಹೂಡಿಕೆ ಮಾಡಿ ಅದರಿಂದ ಒಳ್ಳೆಯ ಲಾಭ ಗಿಟ್ಟಿಸಲು ಖಾಸಗೀ ವಲಯಕ್ಕೆ ಸುಲಭ ಮತ್ತು ಹಗುರ ಶರತ್ತುಗಳ ಸಾಲ ಒದಗಿಸಲು ಹಣಕಾಸು ಸಂಸ್ಥೆಗಳ ಮೂಲಕ ಸಂಪನ್ಮೂಲಗಳನ್ನು ಕೂಡಾ ಸರಕಾರವೇ ಕೊಡಮಾಡುತ್ತದೆ. ಹೀಗಿವೆ ಬಂಡವಾಳಶಾಹೀ ವರ್ಗದ ವಿಭಿನ್ನ ಮಾರ್ಗಗಳು!



ಹಿಂಗದ 'ನಿರೀಕ್ಷೆ'!

ಈ ಬಜೆಟಿನಲ್ಲಿದ್ದ ಮೂಲಪ್ರಶ್ನೆಗಳೆಂದರೆ ಒಂದೆಡೆ ಜಾಗತಿಕ ಹಿಂಜರಿತ, ಹೆಚ್ಚುತ್ತಿರುವ ಉದ್ಯೋಗ ನಷ್ಟಗಳು ಮತ್ತು ಜನಗಳ ಕೊಳ್ಳುವ ಸಾಮರ್ಥ್ಯದಲ್ಲಿ ಇಳಿಕೆಯ ಹಿನ್ನೆಲೆಯಲ್ಲಿ ಬೆಳವಣಿಗೆಗೆ [illegible]ದು ಉತ್ತೇಜನೆ ಒದಗಿಸುವುದು ಮತ್ತು 'ಆಮ್ ಆದ್ಮಿ'ಯ 'ಒಳಗೊಳ್ಳುವ ಬೆಳವಣಿಗೆ'ಯ ಅಗತ್ಯಗಳನ್ನು ಪೂರೈಸುವುದು. ದುರದೃಷ್ಟವಶಾತ್, ಸಿಪಿಐ(ಎಂ) ಪೊಲಿಟ್ ಬ್ಯುರೋ ಹೇಳಿಕೆಯಲ್ಲಿ ಹೇಳಿರುವಂತೆ ಇವೆರಡರಲ್ಲಿ ಯಾವುದನ್ನೂ ಸರಿಯಾಗಿ ನಿಭಾಯಿಸಿಲ್ಲ. ಒಟ್ಟು ಖರ್ಚಿನಲ್ಲಿ ಹೆಚ್ಚಳ ಒಟ್ಟು ಜಿಡಿಪಿಯ ಕೇವಲ 2 ಶೇಕಡಾ ಮಾತ್ರ ಅಗತ್ಯವಾದ ಉತ್ತೇಜನೆ ನೀಡಲು ಇದು ಏನೇನೂ ಸಾಲದು. ಬಹಳಷ್ಟು ಪ್ರಚಾರ ಮಾಡಿರುವ ಈ ಸರಕಾರದ ಲಾಂಛನದಂತಿರುವ ಕಾರ್ಯಕ್ರಮಗಳಿಗೆ ಕೊಟ್ಟಿರುವ ಹಣ ಕೂಡಾ 'ಒಳಗೊಳ್ಳುವ ಬೆಳವಣಿಗೆ'ಗೆ ಅತ್ಯಲ್ಪ.

ಆಳುವ ವರ್ಗಗಳಿಗೆ ಈ ಬಜೆಟಿನಲ್ಲಿ ಸಾಕಷ್ಟು ಲಭ್ಯವಾದರೂ, ಅವುಗಳಿಗೆ ಇನ್ನಷ್ಟು ನಿರೀಕ್ಷೆಯಿದ್ದಂತಿದೆ; ವಿಶೇಷವಾಗಿ ಯುಪಿಎ-2 ಬದುಕುಳಿಯಲು ಈಗ ಎಡಪಕ್ಷಗಳ ಬೆಂಬಲವನ್ನು ಅವಲಂಬಿಸುವ ಅಗತ್ಯವಿಲ್ಲದಿರುವಾಗ ಇನ್ನಷ್ಟು ಕೊಡಬೇಕಾಗಿತ್ತು ಎಂದು ಅವರ ನಿರೀಕ್ಷೆಯಿದ್ದಿರಬೇಕು. ಬಜೆಟ್ ಮಂಡನೆಯಾಗುತ್ತಿದ್ದಂತೆ ಶೇರು ಸೂಚ್ಯಂಕಗಳು ಇಳಿಮುಖಗೊಂಡವು. ಅಂತರ್ರಾಷ್ಟ್ರೀಯ ಶೇರು ಮಾರುಕಟ್ಟೆಯ ವರ್ತನೆ ಇದನ್ನು ತಟ್ಟಿದ್ದಿರಬಹುದಾದರೂ ಕಾರ್ಪೊರೇಟ್ ಮಾಧ್ಯಮಗಳಲ್ಲಿ ಈ ಇಳಿಕೆ ಆರ್ಥಿಕ ಸಮೀಕ್ಷೆಯಲ್ಲಿ ಹೇಳಿದ ಹಣಕಾಸು ಸುಧಾರಣೆಗಳು ಮತ್ತು ಬಂಡವಾಳ ಹಿಂಪಡಿಕೆಯತ್ತ ಘಂಟಾಘೋಷವಾಗಿ ಮುಂದುವರೆಯದಿರುವುದು ಕಾರಣ ಎಂದು ವ್ಯಾಖ್ಯಾನ ಮಾಡಲಾಗಿದೆ. ಆರ್ಥಿಕ ಸಮೀಕ್ಷೆ ಈ ವರ್ಷ ಸಾರ್ವಜನಿಕ ವಲಯದ ಘಟಕಗಳ 25000ಕೋಟಿ ರೂ.ಗಳ ಹಿಂಪಡಿಕೆಯ ಗುರಿ ಇಟ್ಟಿದ್ದರೂ, ಬಜೆಟ್ ಶೇರು ಹಿಂಪಡಿಕೆಯ ವಿವರಗಳನ್ನಾಗಲೀ, ನಕಾಶೆಯನ್ನಾಗಲೀ ಮಂಡಿಸಿಲ್ಲ.

'ಹಣಕಾಸು ಶಿಸ್ತಿ'ನ ಹೆಸರಲ್ಲಿ

ಅದೇ ವೇಳೆಗೆ ಹಣಕಾಸು ಮಂತ್ರಿಗಳು ಹಣಕಾಸು ಕೊರತೆ ಬಹಳ ಹೆಚ್ಚಾಗಿದೆ ಎಂದು ಎಚ್ಚರಿಸುತ್ತಾ ಸರಕಾರ 'ಹಣಕಾಸು ಶಿಸ್ತಿ'ಗೆ ಮರಳುವ ಆಶಯ ಹೊಂದಿದೆಯೆಂದೂ ಸಾರಿದ್ದಾರೆ. ಇಂತಹ 'ಹಣಕಾಸು ಶಿಸ್ತಿ'ಗೆ ಮರಳಲು ಹೂಡಿಕೆ ಹಿಂಪಡಿಕೆ ಅಥವಾ ಸಾರ್ವಜನಿಕ ವಲಯದ ಘಟಕಗಳ ಶೇರುಗಳ ಮಾರಾಟದಿಂದ ಬಂದ ಹಣವನ್ನು ಬಳಸಲಾಗುವುದು ಎಂದು ಊಹಿಸಲು ಬಹಳೇನೂ ಕಲ್ಪನಾ ಶಕ್ತಿ ಬೇಕಿಲ್ಲ. ಆದರೆ ಇದು ಸಾಮಾನ್ಯಬುದ್ಧಿಗೂ, ಆರ್ಥಿಕ ದೃಷ್ಟಿಯಿಂದಲೂ ಸಲ್ಲದ ಕ್ರಮ. ಒಬ್ಬ ರೈತ ತನ್ನ ಸಾಲ ತೀರಿಸಲು ತನ್ನ ಭೂಮಿಯನ್ನೇ ಮಾರಿದಂತಾಗುತ್ತದೆ. ಇದರಿಂದ ವಿನಾಶ ಶತಸ್ಸಿದ್ಧ.

ಇದನ್ನು ಮಾಡಬಹುದೋ, ಅಥವ ಹೇಗೆ ಮಾಡಬಹುದು ಎಂಬುದು ನಾವು ಆರಂಭದಲ್ಲಿ ಪ್ರಸ್ತಾಪ ಮಾಡಿದ ವೈರುಧ್ಯ ಹೇಗೆ ಪ್ರಕಟಗೊಳ್ಳುತ್ತದೆ ಎಂಬುದರ ಮೂಲಕ ನಿರ್ಧಾರವಾಗುತ್ತದೆ. ಈ ವೈರುಧ್ಯ ಖಾಸಗಿ ಲಾಭಗಳನ್ನು ವಿಸ್ತರಿಸಲು ಸುಧಾರಣಾ ಪ್ರಕ್ರಿಯೆಗೆ ಒತ್ತು ನೀಡುವ ರೀತಿಯಲ್ಲಿ ಮೂಡಿ ಬರಲಿ ಎಂದು ಕಾರ್ಪೊರೇಟ್ ಭಾರತ, ದೊಡ್ಡ ಬಂಡವಾಳಿಗರು ಸಕ್ರಿಯವಾಗಿ ಆಶಿಸುತ್ತಿದ್ದಾರೆ. 'ಒಳಗೊಳ್ಳುವ ಬೆಳವಣಿಗೆ' ಮತ್ತು 'ಆಮ್ ಆದ್ಮಿ'ಯನ್ನು ಬಲಿಗೊಟ್ಟು 'ಹೊಳೆಯುತ್ತಿರುವ ಭಾರತ'ವನ್ನು ಇನ್ನಷ್ಟು ಬಲಿಷ್ಟಗೊಳಿಸುವ ಪ್ರಯತ್ನ ಅವರದ್ದು.

ಇನ್ನೊಂದೆಡೆ, ಈ ವೈರುಧ್ಯ ಪ್ರಕಟಗೊಳ್ಳುವ ರೀತಿ 'ನರಳುತ್ತಿರುವ' ಭಾರತದ ವಿಶಾಲ ಜನಸಮೂಹಗಳ ಬದುಕು ಹೇಗೆ ಉತ್ತಮಗೊಳ್ಳಬೇಕು ಎಂಬುದನ್ನು ಕೂಡ ನಿರೂಪಿಸಬಹುದು. ಈ ವೈರುಧ್ಯ ಲಾಭಗಳಿಗಿಂತ ಜನಗಳು ಮುಖ್ಯ ಎಂಬ ರೀತಿಯಲ್ಲಿ ಪ್ರಕಟಗೊಳ್ಳಬೇಕಾದರೆ ಅದು ಜನಗಳ ಹೋರಾಟಗಳ ಬಲದಿಂದಷ್ಟೇ ಸಾಧ್ಯ. ಹೀಗೆ ಭಾರತದ ಮತ್ತು ಇಲ್ಲಿಯ ಬಹುಪಾಲು ಜನಗಳ ಭವಿಷ್ಯವನ್ನು ಜನಗಳ ಹೋರಾಟಗಳ ಬಲವೇ ನಿರ್ಧರಿಸುತ್ತದೆ. □

ರೈಲ್ವೇ ಬಜೆಟ್ 2009-10 ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯೂರೊ

ಹಣಕಾಸು ಪರಿಸ್ಥಿತಿ ಹದಗೆಡುತ್ತಿರುವಾಗ ಖಾಸಗೀಕರಣಕ್ಕೇ ಹೆಚ್ಚಿನ ಪ್ರಾಧಾನ್ಯತೆ

ಹೊಸ ರೈಲ್ವೇ ಮಂತ್ರಿಗಳ ಬಜೆಟ್ ಜನಸಾಮಾನ್ಯರ ಪರವಾಗಿರುವ ಬಜೆಟ್ ಎಂದೆಲ್ಲಾ ಹಾಡಿಹೊಗಳಲಾಗುತ್ತಿದೆ. ನಿಜ, ಇದರಲ್ಲಿ ಕೆಲವು ಸಕಾರಾತ್ಮಕ ಕ್ರಮಗಳಿವೆ. ಆದರೆ ಇವು ಆದಾಯ ಕುಸಿತವನ್ನು ತಡೆಯಲು ಹೊಸ ವಿಚಾರಗಳನ್ನು ಮುಂದಿಡದೆ ಹಳೆಯ ಖಾಸಗೀಕರಣದ ತಪ್ಪು ಜಾಡಿನಲ್ಲೇ ಸಾಗಿರುವ ಹೊಸ ಮಂತ್ರಿಗಳ ವೈರುಧ್ಯಮಯ ನಿಲುವಿನಲ್ಲಿ ಮುಚ್ಚಿ ಹೋಗುತ್ತವೆ.

ರೈಲ್ವೇ ವಿಭಾಗದ ಹಣಕಾಸು ಪರಿಸ್ಥಿತಿ ಹದಗೆಡುತ್ತಿದೆಯೇ? ಜುಲೈ 3 ರಂದು ರೈಲ್ವೇ ಮಂತ್ರಿಗಳು ಸಂಸತ್ತಿನಲ್ಲಿ ಮಂಡಿಸಿದ 2009-10ರ ರೈಲ್ವೇ ಬಜೆಟ್ ನೋಡಿದರೆ ಹಾಗನಿಸುತ್ತದೆ. 2008-09ರ ಬಜೆಟ್ 20000ಕೋಟಿ ರೂ.ಗಳ ನಗದು ಮಿಗುತೆ ಇದೆ ಎಂದು ವರದಿ ಮಾಡಿತ್ತು. ಫೆಬ್ರುವರಿ 2009ರಲ್ಲಿ ಮಂಡಿಸಿದ ಮಧ್ಯಂತರ ಬಜೆಟ್‌ನಲ್ಲಿ ಇದು 13,500 ಕೋಟಿ ರೂ.ಗಳಿಗೆ ಇಳಿಯಿತು. ಈಗ 2009-10ರ ಪೂರ್ಣ ಪ್ರಮಾಣದ ಬಜೆಟಿನಲ್ಲಿ ಇದು 8,700 ಕೋಟಿ ರೂ.ಗಳಿಗೆ ಇಳಿದಿದೆ. ಇದೇಕೆ ಹೀಗೆ, ಇಷ್ಟೊಂದು ಅಲ್ಪ ಅವಧಿಯಲ್ಲಿ ಇಷ್ಟು ತೀವ್ರವಾಗಿ ಪರಿಸ್ಥಿತಿ



ಏಕೆ ಹದಗೆಟ್ಟಿದೆ ಎಂದು ಯುಪಿಎ ಸರಕಾರ ವಿವರಣೆ ಕೊಡಬೇಕಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೋ ಹೇಳಿದೆ.

ಆರ್ಥಿಕ ನಿಧಾನಗತಿ ರೈಲ್ವೆಯ ಆದಾಯದ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆಯೆಂಬುದು ಸ್ಪಷ್ಟ. ವಿಶೇಷವಾಗಿ ಸರಕು ಸಾಗಾಣಿಕೆಯಲ್ಲಿ ಈ ಇಳಿಕೆ ಕಾಣುತ್ತಿದೆ. ಯುಪಿಎ ಸರಕಾರ ಈ ಹಿಂದೆ ಮಂಡಿಸಿದ ಮಧ್ಯಂತರ ಬಜೆಟಿನಲ್ಲಿದ್ದ ಆದಾಯಗಳ ಅಂದಾಜನ್ನು ಪರಿಷ್ಕರಿಸಿ ಇನ್ನಷ್ಟು ಕಡಿಮೆ ಮಾಡಲಾಗಿದೆ. ಹಿಂದಿನ ಅಂದಾಜುಗಳು ಅಷ್ಟೊಂದು ಹೆಚ್ಚಿರಲು ಸಾಧ್ಯವಿಲ್ಲ ಎಂದಿದ್ದಾರೆ ಪ್ರಸಕ್ತ ರೈಲ್ವೇ ಮಂತ್ರಿಗಳು.

ಆದರೆ ಈ ಆದಾಯ ಇಳಿಕೆಯನ್ನು ಎದುರಿಸಲು, ಅದನ್ನು ಸರಿಪಡಿಸಲು ಹೊಸ ಮಂತ್ರಿಗಳ ಬಳಿ ಹೊಸ ವಿಚಾರಗಳೇನೂ ಇದ್ದಂತಿಲ್ಲ. ಬದಲಾಗಿ ಅವರು ಅದೇ ಹಳೆಯ ಜಾಡನ್ನೇ ಹಿಡಿದಿದ್ದಾರೆ, ಅಂದರೆ ಹಲವಾರು ಕ್ಷೇತ್ರಗಳಲ್ಲಿ ಖಾಸಗಿ-ಸಾರ್ವಜನಿಕ ಪಾಲುದಾರಿಕೆ(ಪಿಪಿಪಿ)ಯ ಹೆಸರಿನಲ್ಲಿ ಇನ್ನಷ್ಟು ಖಾಸಗೀಕರಣದ ತಪ್ಪು ಹಾದಿ. 50 'ವಿಶ್ವ ಮಟ್ಟದ ರೈಲುನಿಲ್ದಾಣಗಳ' ಅಭಿವೃದ್ಧಿ, ಹೊಸ ಸರಕು ಸಾಗಾಣಿಕೆ ಮತ್ತು ಕೋಚ್ ತಾಣಗಳು, ಸಾಗಾಣಿಕೆ ಪಾರ್ಕುಗಳು, ವಿಶೇಷ ಉದ್ದೇಶದ ರೈಲ್ವೇ ಸಾಮಗ್ರಿಗಳ ದಾಸ್ತಾನುಗಳು, ಬೇಗನೇ ಹಾಳಾಗುವ ಸರಕುಗಳ ಸಾಗಾಣಿಕೆ ಕೇಂದ್ರಗಳು ಇವೆಲ್ಲವನ್ನೂ ಈ ಸರ್ಕಾರ ಮತ್ತು ಖಾಸಗಿ ಪಾಲುದಾರಿಕೆ(ಪಿಪಿಪಿ)ಯ ಹೆಸರಿನಲ್ಲಿ ಖಾಸಗಿಯವರಿಗೆ ಒಪ್ಪಿಸಲಾಗುತ್ತದೆ. ಈ ನಿರೀಕ್ಷೆ ಎಷ್ಟು ವಾಸ್ತವ 'ಆರ್ಥಿಕ ಹಿಂಜರಿತದ ಸನ್ನಿವೇಶದಲ್ಲಿ ಖಾಸಗೀ ಹೂಡಿಕೆಗಳು ಬರಬಹುದೇ' ಈ ಎಲ್ಲಾ ಪ್ರಶ್ನೆಗಳು ಏಳುವುದು ಸಹಜ. ಪಿಪಿಪಿ ಮೂಲಕ 2009-10ರಲ್ಲಿ 3400ಕೋಟಿ ರೂ.ಗಳನ್ನು ಸಂಗ್ರಹಿಸುವ ಯೋಜನೆಯಿದ್ದು ಇದರಲ್ಲಿ '330ಕೋಟಿ ರೂ. ಬಹುಶಃ ಬರಲಿಕ್ಕೇ ಇಲ್ಲ' ಎಂದು ಸ್ವತಃ ರೈಲ್ವೇ ಮಂತ್ರಿಗಳೇ ತಮ್ಮ ಭಾಷಣದಲ್ಲಿ ಒಪ್ಪಿಕೊಂಡಿದ್ದಾರೆ.

ಇದೊಂದು ವೈರುಧ್ಯಮಯ ನಿಲುವು. ರೈಲ್ವೇ ಬಜೆಟ್ 2009-10ರಲ್ಲಿ ಕೆಲವು ಸಕಾರಾತ್ಮಕ ಕ್ರಮಗಳನ್ನು ಪ್ರಕಟಿಸಲಾಗಿದೆ. ಪ್ರಯಾಣ ದರಗಳಲ್ಲಿ ಏರಿಕೆ ಮಾಡದಿರುವುದು, 1500ರೂ.ಗಿಂತ ಕಡಿಮೆ ಆದಾಯದ ಜನಗಳಿಗೆ 25 ರೂ.ಗಳ ಮಾಸಿಕ ಪಾಸು ಅಥವಾ ರೈಲ್ವೇ ಉದ್ಯೋಗಗಳಲ್ಲಿ ಪರಿಶಿಷ್ಟ ಜಾತಿಗಳು/ಬುಡಕಟ್ಟುಗಳು, ಅಲ್ಪ ಸಂಖ್ಯಾತರು, ಅಂಗನ್ಯೂನ್ಯತೆ ಇರುವವರು ಮತ್ತು ಮಹಿಳೆಯರ ವಿಶೇಷ ನೇಮಕಾತಿ ಪ್ರಯತ್ನ ಇತ್ಯಾದಿಗಳು ರೈಲ್ವೇ ಮಂತ್ರಿಗಳ ಈ ವೈರುಧ್ಯಮಯ ನಿಲುವಿನಲ್ಲಿ ಮುಚ್ಚಿ ಹೋಗುತ್ತವೆ.

ರೈಲ್ವೆಯ ಆಧುನೀಕರಣ, ಸುರಕ್ಷಿತತೆ, ವಿದ್ಯುದೀಕರಣ ಪ್ರಮುಖ ವಲಯಗಳಿಗೆ ನೀಡಿರುವ ಹಣ ಏನೇನೂ ಸಾಲದು ಎಂದು ವಿಶ್ಲೇಷಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೋ ಈ ಬಜೆಟನಲ್ಲಿ ಖಾಸಗೀಕರಣಕ್ಕೆ ಮತ್ತು ಕೆಲಸಗಳನ್ನು ಹೊರಗಿನಿಂದ ಮಾಡಿಸಿಕೊಳ್ಳುವುದಕ್ಕೆ ಪ್ರಧಾನ ಒತ್ತು ನೀಡಿರುವುದನ್ನು ಹಿಂದೆಗೆದುಕೊಳ್ಳಬೇಕು ಎಂದು ಆಗ್ರಹಿಸಿದೆ.

ಸಂದರ್ಶನ



ಬಳ್ಳಾರಿ ವಿಮಾನ ನಿಲ್ದಾಣ
ಸತ್ಯ - ಮಿಥ್ಯ

ಬಳ್ಳಾರಿ ವಿಮಾನ ನಿಲ್ದಾಣದ ವಿವಾದದ ಕೇಂದ್ರ ಪ್ರಶ್ನೆ ಏನು? ಯಾಕೆ ಸರ್ಕಾರದ ಹಠ. ಈ ಕುರಿತು ಪ್ರಾಂತ ರೈತ ಸಂಘಟನೆಯ ಬಳ್ಳಾರಿ ಅಧ್ಯಕ್ಷರಾದ ಯು.ಬಸವರಾಜು ಅವರ ಸಂದರ್ಶನ

ಅಂತರಾಷ್ಟ್ರೀಯ ಗುಣಮಟ್ಟದ ವಿಮಾನ ನಿಲ್ದಾಣದ ಹೆಸರಿನಲ್ಲಿ ಬಳ್ಳಾರಿ ಮತ್ತೊಮ್ಮೆ ಸುದ್ದಿ ಮಾಡಿದೆ. ಮುಖ್ಯಮಂತ್ರಿ ಯಡಿಯೂರಪ್ಪನವರು, ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರಾದ ಜನಾರ್ಧನರೆಡ್ಡಿಯವರು, ಸರ್ಕಾರ ಯೋಜಿಸಿದಲ್ಲಿಯೇ ವಿಮಾನ ನಿಲ್ದಾಣ ನಿರ್ಮಾಣ ಮಾಡಿಯೇ ಮಾಡುತ್ತೇವೆಂದು ಪದೇ ಪದೇ ಒತ್ತಿ ಒತ್ತಿ ಹೇಳುತ್ತಿದ್ದಾರೆ.

ಚಾಗನೂರು-ಶಿರಿವಾರ ಗ್ರಾಮಗಳ ನೀರಾವರಿ ಜಮೀನುಗಳಲ್ಲಿ ಈ ವಿಮಾನ ನಿಲ್ದಾಣ ನಿರ್ಮಾಣ ಬೇಡವೇ ಬೇಡವೆಂದು, ಬಳ್ಳಾರಿ ತಾಲ್ಲೂಕಿನ ಶಿರಿವಾರ-ಚಾಗನೂರು ಗ್ರಾಮಗಳ ರೈತರು, ವಿವಿಧ ಪಕ್ಷ ಹಾಗೂ ಜನಪರ ಸಂಘಟನೆಗಳು ಒತ್ತಾಯಿಸುತ್ತಿವೆ.

ಈ ಹೋರಾಟದಲ್ಲಿ ಯಾವುದೇ ಹುರುಳಿಲ್ಲ, ಜಿಲ್ಲೆಯ ಅಭಿವೃದ್ಧಿಗೆ ತೊಡರು ಕಾಲು ಹಾಕುವುದೇ ವಿರೋಧ ಪಕ್ಷಗಳ ಕೆಲಸ, ಇವರು ರಾಜಕೀಯ ದ್ವೇಷದಿಂದ ವಿರೋಧಿಸುತ್ತಿದ್ದಾರೆ. ರೈತರೆಲ್ಲಾ ನಮ್ಮ ಜೊತೆ ಇದ್ದಾರೆಂದು, ಚಳುವಳಿಯ ಹಾಗೂ ಅವರ ಬೆಂಬಲದ ಕುರಿತು ಜಿಲ್ಲಾ ಬಿಜೆಪಿ ಹೇಳುತ್ತಿದೆ.

ನಿಜಾಂಶವೇನು? ಈ ಕುರಿತೇ ಈ ಪ್ರಶ್ನೆ ಉತ್ತರಗಳು.

ಪ್ರಶ್ನೆ: ಕರ್ನಾಟಕ ರಾಜ್ಯ ಸರ್ಕಾರ, ಬಳ್ಳಾರಿ-ಕೊಪ್ಪಳ, ಗದಗ ಜಿಲ್ಲಾ ಕೇಂದ್ರಗಳ ನಡುವೆ ಭಾರಿ ಉಕ್ಕುವಲಯವನ್ನು ನಿರ್ಮಿಸುವ ಯೋಜನೆಯನ್ನು ಹೊಂದಿದೆ ಎಂದೂ ಇದರಿಂದಾಗಿ ಈ ಪ್ರದೇಶದಲ್ಲಿ ಭಾರೀ ಕೈಗಾರಿಕೆಗಳ ಜಾಲವೇ ನಿರ್ಮಾಣಗೊಳ್ಳಲಿದೆ ಎಂದೂ ಮಾತ್ರವಲ್ಲ ಬೃಹತ್ ಮಹಾನಗರ, ಭಾರಿ ಪಟ್ಟಣಗಳು ತಲೆ ಎತ್ತಲಿವೆ. ಇದರ ಮುನ್ಸೂಚಿಯಾಗಿ ರಾಷ್ಟ್ರೀಯ ಹೆದ್ದಾರಿ-53ನ್ನು ಆರು ರಸ್ತೆ ಹೊಂದಿದ ಎಕ್ಸ್‌ಪ್ರೆಸ್ ಹೈವೇಯಾಗಿ ಪರಿವರ್ತಿಸಲಾಗುವುದು. ಅದೇ ರೀತಿ ಪ್ರವಾಸೋದ್ಯಮದ ತ್ರಿಕೋನ ಪ್ರದೇಶವಾದ ಹಂಪಿ, ಬಾದಾಮಿ, ಐಹೊಳೆ, ಪಟ್ಟದಕಲ್ಲು, ಕೂಡಲಸಂಗಮ ಮತ್ತು ಬಿಜಾಪುರ, ಗೋಳಗುಮ್ಮಟವು ವಿದೇಶಿ ಪ್ರವಾಸಿಗರನ್ನೂ ಸೂಜಿಗಲ್ಲಿನಂತೆ ಸೆಳೆಯುತ್ತಾ, ಆ ಮೂಲಕ ಪ್ರವಾಸೋದ್ಯಮ ಬೆಳೆಯುತ್ತಿದೆ. ಹೀಗೆ ಒಂದೆಡೆ ಉಕ್ಕು ವಲಯಕ್ಕಾಗಿ ಹರಿದು ಬರುವ ಅಪಾರ ಪ್ರಮಾಣದ ಬಂಡವಾಳಕ್ಕೆ ಮತ್ತು ಬೆಳೆಯುತ್ತಿರುವ ಪ್ರವಾಸೋದ್ಯಮದ ವಿದೇಶಿ ಪ್ರವಾಸಿಗರಿಗೆ ಇನ್ನೊಂದೆಡೆ ಈ ಪ್ರದೇಶದಲ್ಲೊಂದು ಅಂತರಾಷ್ಟ್ರೀಯ ಗುಣಮಟ್ಟದ ವಿಮಾನ ನಿಲ್ದಾಣ ಅಭಿವೃದ್ಧಿಯ ಹಿನ್ನೆಲೆಯಲ್ಲಿ ಬರುವುದು ಸಮಂಜಸವಲ್ಲವೇ? ಉದ್ದೇಶಿತ ವಿಮಾನ ನಿಲ್ದಾಣವನ್ನು ನೀವೇಕೆ ವಿರೋಧಿಸುವಿರಿ?

ಯು.ಬಿ: ಹೌದು, ಉದ್ದೇಶಿತ ವಿಮಾನ ನಿಲ್ದಾಣವನ್ನು ಬಳ್ಳಾರಿ ಜಿಲ್ಲೆಯ ಬಳ್ಳಾರಿ ತಾಲ್ಲೂಕಿನ ಚಾಗನೂರು ಶಿರಿವಾರ ಗ್ರಾಮಗಳ ನೀರಾವರಿ ಪ್ರದೇಶದಲ್ಲಿ ನಿರ್ಮಾಣ ಮಾಡಬಾರದೆಂದು, ಈ 2 ಗ್ರಾಮಗಳ ರೈತರು, ಕರ್ನಾಟಕ ಪ್ರಾಂತ ರೈತ ಸಂಘ, ಫಲವತ್ತಾದ ಕೃಷಿ ಭೂಮಿ ವಶದ ವಿರುದ್ಧ ಹೋರಾಟ



ರಾಜ್ಯ ರೈತ ಸಂಘ, ಕಾಂಗ್ರೆಸ್, ಜನತಾದಳ(ಎಸ್), ಸಿಪಿಐ(ಎಂ) ಹಾಗೂ ಸಿಪಿಐ ಪಕ್ಷಗಳು, ಸೂಸಿ ಹಾಗೂ ಹಲವು ದಲಿತ ಮತ್ತಿತರ ಸಂಘ ಸಂಸ್ಥೆಗಳು ವಿರೋಧಿಸಿವೆ.

ಚಾಗನೂರು, ಶಿರಿವಾರ ರೈತರ ಈ ಬೇಡಿಕೆಯನ್ನು ಸರಿಯಾಗಿ ಗಮನಿಸಿ ನಿಭಾಯಿಸದ ಜಿಲ್ಲಾ ಆಡಳಿತ ಹಾಗೂ ರಾಜ್ಯ ಸರ್ಕಾರದ ಕ್ರಮವು ರಾಜ್ಯದ ಗಮನ ಸೆಳೆದ ಗೋಲಿಬಾರ್‌ಗೆ ಕಾರಣವಾಯಿತು. ಈ ಸಂದರ್ಭದಲ್ಲಿ ಮೇಲೆ ತಿಳಿಸಲಾದ ಎಲ್ಲಾ ಸಂಘ ಸಂಸ್ಥೆಗಳು ರಾಜಕೀಯ ಪಕ್ಷಗಳು ಕರೆ ನೀಡಿದ ಬಳ್ಳಾರಿ ಜಿಲ್ಲೆ ಬಂದ್‌ಗೆ ಪೋಲೀಸರ ಅತಿರೇಕದ ವರ್ತನೆಯ ನಡುವೆಯೂ ಜಿಲ್ಲೆಯ ಎಲ್ಲಾ ಜನತೆ ಸ್ವಯಂಸ್ಫೂರ್ತಿಯಿಂದ ಬಂದ್‌ನಲ್ಲಿ ಭಾಗಿಯಾಗಿ ಅಭೂತಪೂರ್ವವಾಗಿ ಯಶಸ್ವಿ ಮಾಡುವ ಮೂಲಕ ತನ್ನ ಸಂಪೂರ್ಣ ಬೆಂಬಲವನ್ನು ಈ ಹೋರಾಟಕ್ಕೆ ನೀಡಿತಲ್ಲದೇ.. ಬಲವಂತವಾಗಿ ನೀರಾವರಿ ಪ್ರದೇಶದಲ್ಲಿ ವಿಮಾನನಿಲ್ದಾಣ ಸ್ಥಾಪನೆಯನ್ನು ವಿರೋಧಿಸಿತು. ಮುಖ್ಯವಾಗಿ 2 ಕಾರಣಕ್ಕಾಗಿ ಈ ವಿರೋಧ ವ್ಯಕ್ತವಾಗಿದೆ. ಒಂದನೇಯದು, ನೀರಾವರಿ ಜಮೀನನ್ನು ಕೃಷಿಯೇತರ ಕಾರ್ಯಕ್ರಮಗಳಿಗಾಗಿ ಕರ್ನಾಟಕದ ಪ್ರಸ್ತುತ ಸಂದರ್ಭದಲ್ಲಿ ಬಳಸಬಾರದು. ಎರಡನೇಯದು, ಜನರ ಪ್ರಜಾಸತ್ತಾತ್ಮಕ ಅಭಿಪ್ರಾಯವನ್ನೂ, ಬೇಡಿಕೆಯನ್ನೂ ಸಹಾನೂಭೂತಿಯಿಂದ ಪರಿಶೀಲಿಸದೆ, ಜನರ ಬಗ್ಗೆ ಕಾಳಜಿ ತೋರದೆ, ಅಧಿಕಾರ ದುರುಪಯೋಗಪಡಿಸಿಕೊಂಡು, ಸರ್ವಾಧಿಕಾರಿಯಂತೆ ಪೋಲೀಸ್ ದೌರ್ಜನ್ಯದ ಮೂಲಕ ಅದನ್ನು ಹತ್ತಿಕ್ಕಲು ಪ್ರಯತ್ನಿಸಿದ್ದು.

ಖಂಡಿತಾ! ಮುಂದಿನ ಒಂದು ದಶಕದಲ್ಲಿ ನೀವು ತಿಳಿಸಿದ ಹಾಗೆ ಈ ಪ್ರದೇಶದಲ್ಲಿ ಭಾರೀ ಅಭಿವೃದ್ಧಿಯಾಗಲಿದೆಯೆಂದು, ಕರ್ನಾಟಕ ರಾಜ್ಯ ಸರ್ಕಾರ ಹಾಗೂ ಜಿಲ್ಲಾ ಆಡಳಿತ ಅಪಾರ ವಿಶ್ವಾಸದಿಂದ ನುಡಿಯುತ್ತಿದೆ. ಈ ಬೆಳವಣಿಗೆಗಳು ಅಂದುಕೊಂಡಂತೆ ನಡೆದಲ್ಲಿ ಈ ಪ್ರದೇಶದಲ್ಲಿ ಭಾರೀ ಬದಲಾವಣೆ, ಹೊಸ ಪರಿಸ್ಥಿತಿ, ಬೃಹತ್ ನಗರ-ಪಟ್ಟಣಗಳು ರೂಪುಗೊಳ್ಳುವುದರಲ್ಲಿ ಸಂಶಯವಿಲ್ಲ. ಜಾಗತಿಕ ಆರ್ಥಿಕ ಬಿಕ್ಕಟ್ಟು ಅಡ್ಡಿಯಾಗಬಾರದಷ್ಟೇ, ಖಂಡಿತಾ ಇದನ್ನೆಲ್ಲಾ ನಾವು ಸ್ವಾಗತಿಸುತ್ತೇವೆ. ಅದೇ ರೀತಿ ಅಭಿವೃದ್ಧಿಗೆ ಹಾಗೂ ವಿಮಾನ ನಿಲ್ದಾಣಕ್ಕೆ ನಾವು ವಿರೋಧಿಗಳಲ್ಲ. ವಿಮಾನ ನಿಲ್ದಾಣಕ್ಕೆ ನಮ್ಮ ಬೆಂಬಲವಿದೆ. ಆದರೆ ಅದನ್ನು ಫಲವತ್ತಾದ ನೀರಾವರಿ ಪ್ರದೇಶದಲ್ಲಿ ನಿರ್ಮಾಣ ಮಾಡುವುದಕ್ಕಷ್ಟೇ ನಮ್ಮ ವಿರೋಧವಿದೆ. ನೀರಾವರಿ ಪ್ರದೇಶ ಬಿಟ್ಟು, ಒಣಭೂಮಿ ಪ್ರದೇಶದಲ್ಲಿ ಮಾಡಿದಲ್ಲಿ ಖಂಡಿತಾ ನಮ್ಮ ಬೆಂಬಲವಿದೆ.

ಪ್ರಶ್ನೆ 2: ರೈತರೇ ತಮ್ಮ ಜಮೀನುಗಳನ್ನು ಉದ್ದೇಶಿತ ವಿಮಾನ ನಿಲ್ದಾಣಕ್ಕೆ ಬಿಟ್ಟುಕೊಡಲು ಸಿದ್ಧರಿರುವಾಗ ವಿರೋಧಿಸುವುದು ಸರಿಯೇ? ನೀರಾವರಿ ಪ್ರದೇಶದಲ್ಲಿ ವಿಮಾನ ನಿಲ್ದಾಣ ಸಾಧುವಲ್ಲವೇ ಯಾಕೆ?

ಯು.ಬಿ: ಹೌದು ಸಚಿವ ಜನಾರ್ಧನರೆಡ್ಡಿಯವರು ಹೇಳುವ ಹಾಗೆ ಕೆಲವು ರೈತರು ತಮ್ಮ ಜಮೀನಗಳನ್ನು ಸರ್ಕಾರಕ್ಕೆ ಬಿಟ್ಟುಕೊಡಲು ಸಿದ್ಧರಿರಬಹುದು, ಇಲ್ಲವೆನ್ನಲಾಗದು, ಯಾಕೆ ಹೀಗೆ? ನಿಮಗೆಲ್ಲಾ ತಿಳಿದಿದೆ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅನುಸರಿಸಿದ ಜಾಗತೀಕರಣ, ಉದಾರೀಕರಣ ಹಾಗೂ ಖಾಸಗೀಕರಣ ನೀತಿಗಳಿಂದಾಗಿ ವ್ಯವಸಾಯ ರಂಗ ಬಿಕ್ಕಟ್ಟಿಗೊಳಗಾಗಿರುವುದು ತಿಳಿದ ವಿಷಯವೇ ಆಗಿದೆ. ರೈತರು ಭಾರಿ ಪ್ರಮಾಣದಲ್ಲಿ ಸಾಲಗಾರರಾಗಿದ್ದಾರೆ. ಎಲ್ಲೆಡೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇದನ್ನು ಮನಗಂಡ ಕೇಂದ್ರ ರಾಜ್ಯ ಸರ್ಕಾರಗಳು ಜನರ ಒತ್ತಾಯಕ್ಕೆ ಮಣಿದು ಸಾಲ ಹಾಗೂ ಬಡ್ಡಿ ಮನ್ನಾ ಜಾರಿಗೆ ತಂದಿದ್ದರೂ ಆದಾಗಲೂ ವ್ಯವಸಾಯ ಬಿಕ್ಕಟ್ಟು ನಿವಾರಣೆಗೊಂಡಿಲ್ಲ. ಈಗಲೂ ಮುಂದುವರೆದು ಇನ್ನಷ್ಟು ಆಳಗೊಳ್ಳುತ್ತಿದೆ. ಸಾಲಮನ್ನಾ ಕಾರ್ಯಕ್ರಮವು, ಸಮರ್ಪಕವಾಗಿಲ್ಲ, ವೈಜ್ಞಾನಿಕವಾಗಿಲ್ಲ. ಈಗಲೂ ರೈತರ ಆತ್ಮಹತ್ಯೆಗಳು ಮುಂದುವರೆದಿವೆ. ಒಟ್ಟಾರೇ, ರೈತರಿಗೀಗ ವ್ಯವಸಾಯ ಒಂದು ಲಾಭದಾಯಕ ಉದ್ಯಮವೆಂದು ಅನ್ನಿಸುತ್ತಿಲ್ಲ. ಕೇಂದ್ರ ಸರ್ಕಾರ ಕೈಗೊಂಡ ಸ್ಯಾಂಪಲ್ ಸರ್ವೆಯೊಂದಲ್ಲಿ 'ಶೇ.50ರಷ್ಟು ರೈತರು ತಮಗೆ ಬೇರೊಂದು ಉದ್ಯೋಗ ಮಾಡಲು ಸಾಧ್ಯವಾದಲ್ಲಿ ವ್ಯವಸಾಯದಾಚೆ ಬರುವ ಇಂಗಿತ ವ್ಯಕ್ತಪಡಿಸಿದ್ದಾರೆ'. ಪರಿಸ್ಥಿತಿ ಹೀಗಿರುವಾಗ, ಕೆಲವು ರೈತರು ವ್ಯವಸಾಯ ಲಾಭದಾಯಕವಾಗಿಲ್ಲದ ಕಾರಣ,' ವರ್ಷವಿಡೀ ದುಡಿದರೂ ಬರುವ ಲಾಭ ಅಷ್ಟೇ ಇದೆ. 'ಭೂಮಿಗೆ ಒಳ್ಳೆಯ ಬೆಲೆ ಸಿಕ್ಕು, ಸಾಲ ತೀರಿಸಿ, ಮನೆ ಕಟ್ಟಿ ಒಂದಿಷ್ಟು ಬ್ಯಾಂಕ್‌ಲ್ಲಿ ಠೇವಣಿ ಇಟ್ಟು ಬದುಕಬಹುದು. ಹಾಗೂ ಬ್ಯಾಂಕ್‌ಲ್ಲಿ ಠೇವಣಿ ಇಟ್ಟ ಹಣಕ್ಕೆ ಬರುವ ಬಡ್ಡಿಯೂ ಖಂಡಿತಾ ವ್ಯವಸಾಯದಲ್ಲಿ ಬರುವ ಲಾಭದ ಖಂಡಿತ 20 ಪಟ್ಟಿಗಿಂತಲೂ ಹೆಚ್ಚಿರುತ್ತದೆ ಎಂಬುದನ್ನೂ ಲೆಕ್ಕ ಹಾಕುತ್ತಿದ್ದಾರೆ. ಕಷ್ಟಪಟ್ಟು ದುಡಿದರೂ ಸಾಲ ಮಾಡಿ ತೊಂದರೆ ಅನುಭವಿಸುವ ಬದಲು, ಮನೆಯಲ್ಲಿ ಕೂತು ಒಳ್ಳೆಯ ಜೀವನ ನಡೆಸಬಹುದಲ್ಲಾ ಎಂಬ ಅಭಿಪ್ರಾಯವನ್ನು ರೈತರು

→

ಬಳ್ಳಾರಿ ಭೂಸ್ವಾಧೀನ ಅಧಿಸೂಚನೆ ಹಿಂತೆಗೆದುಕೊಳ್ಳಿ

ವಿಮಾನ ನಿಲ್ದಾಣಕ್ಕಾಗಿ ಬಳ್ಳಾರಿ ತಾಲೂಕಿನ ಸಿರಿವಾರದ ಸಮೀಪ ರೈತರ ಕೃಷಿ ಭೂಮಿಯನ್ನು ಬಲವಂತವಾಗಿ ಸ್ವಾಧೀನಪಡಿಸಿಕೊಳ್ಳುವ ಅಧಿಸೂಚನೆಯನ್ನು ಹಿಂದಕ್ಕೆ ಪಡೆಯಬೇಕೆಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸರ್ಕಾರವನ್ನು ಒತ್ತಾಯಿಸಿದೆ.

ರೈತರ ನೀರಾವರಿ ಭೂಮಿಯನ್ನು ಖುಷ್ಕಿ ಭೂಮಿ ಎಂದು ಸುಳ್ಳು ಮಾಹಿತಿ ನೀಡಿ ಹೊರಡಿಸಿರುವ ಅಧಿಸೂಚನೆಯನ್ನು ವಾಪಸ್ ಪಡೆಯಲು ಆಗ್ರಹಿಸಿ ರೈತರು ನಡೆಸುವ ಚಳುವಳಿಯನ್ನು ಸಿಪಿಐ(ಎಂ) ಸಂಪೂರ್ಣವಾಗಿ ಬೆಂಬಲಿಸಲು ನಿರ್ಧರಿಸಿದ್ದು ವಿಮಾನ ನಿಲ್ದಾಣವನ್ನು ಕೃಷಿಯೋಗ್ಯವಲ್ಲದ ಪರ್ಯಾಯ ಸ್ಥಳದಲ್ಲಿ ನಿರ್ಮಿಸಬೇಕೆಂದು ಸಿಪಿಐ(ಎಂ) ಒತ್ತಾಯಿ ಸುತ್ತದೆ.

→

ಹೊಂದಿದ್ದಾರೆ. ಅದು ಅವರ ತಪ್ಪಲ್ಲ. ಅದು ಆ ರೀತಿ ಜೀವನ ಸುಧಾರಣೆಗಾಗಿ ಆಲೋಚಿಸುವುದು ಕ್ರಮಕೊಳ್ಳುವುದು ಅವರ ಹಕ್ಕಾಗಿದೆ. ಇಂತಹ ಆಲೋಚನೆ ಇರುವ ರೈತರು ಕೇವಲ ತಮ್ಮ ವೈಯಕ್ತಿಕ ಜೀವನದ ಬಗ್ಗೆ ಆಲೋಚಿಸುತ್ತಾರೆಂಬುದನ್ನು ಗಮನಿಸಬೇಕು. ಅದು ಸಹಜ. ಆದರೆ ಅದರಿಂದಾಗಿ ರಾಜ್ಯದ-ದೇಶದ ಒಟ್ಟು ಜೀವನದ ಮೇಲೆ ಏನು ಪರಿಣಾಮ ಬೀರಬಹುದೆಂದು ಅವರು ಆಲೋಚಿಸಲು ಕಷ್ಟ ಸಾಧ್ಯವಾಗುತ್ತದೆ.

ಆದರೆ ರಾಜ್ಯದ ಜನತೆಯ ಹಿತ ಕಾಪಾಡುವ ಭಾರಿ ಅಭಿವೃದ್ಧಿ ಸಾಧಿಸಬೇಕೆನ್ನುವ ರಾಜ್ಯ ಸರ್ಕಾರ ಈ ಬಗ್ಗೆ ಚಿಂತಿಸಬೇಕಾಗುತ್ತದೆ. ಕೃಷಿಯೇತರ ಕಾರ್ಯಕ್ರಮಗಳಿಗೆ ಎಂತಹ ಭೂಮಿಯನ್ನು ಪಡೆಯಬೇಕು ಎಂಬ ಬಗ್ಗೆ ಮಂತ್ರಿಗಳಿಗೆ ಜಿಲ್ಲಾಡಳಿತಕ್ಕೆ ಸರ್ಕಾರಕ್ಕೆ ಸ್ಪಷ್ಟತೆ ಇರಬೇಕಾಗುತ್ತದೆ. ಸರಿಯಾದ ಭೂ ನೀತಿ ಹೊಂದಿರಬೇಕಾಗುತ್ತದೆ.

ಇಂತಹ ಭೂ ನೀತಿ ರಾಜ್ಯದ ಬಿಜೆಪಿ ಸರ್ಕಾರಕ್ಕೆ ಇಲ್ಲವಾಗಿದೆ. ಯಾವುದೇ ಒಂದು ಸರ್ಕಾರ ಕೃಷಿಯೇತರ ಕಾರ್ಯಕ್ರಮಗಳಿಗೆ ನೀರಾವರಿ ಜಮೀನುಗಳಲ್ಲಿ ಬಳಸುವ ಮುಂಚೆ, ತನ್ನ ರಾಜ್ಯದ ಜನಸಂಖ್ಯೆಗೆ ಬೇಕಾದ ಆಹಾರ ಧಾನ್ಯದ ಉತ್ಪಾದನೆಯ ಪ್ರಮಾಣ ಎಷ್ಟು ಎಂಬುದನ್ನು ಗಮನಿಸಬೇಕಾಗುತ್ತದೆ. ಒಣಭೂಮಿ, ಮಳೆಯಾಶ್ರಯದ ಪ್ರದೇಶಕ್ಕಿಂತ ನೀರಾವರಿ ಭೂಮಿಯಿಂದ ಬರುವ ಆಹಾರದ ಬೆಳೆಯು ರಾಜ್ಯದ ಜನಸಂಖ್ಯೆಗೆ ಸಾಲುವುದೇ, ಅದೇ ರೀತಿ ಕೃಷಿಯಾಧಾರಿತ ಕೈಗಾರಿಕೆಗಳಿಗೆ ಕಚ್ಚಾಮಾಲು ಒದಗಿಸಲು ಸಾಧ್ಯವಾಗುವುದೇ ಎಂಬುದನ್ನು ಗಮನಿಸಿ ಅದರಲ್ಲಿ ರಾಜ್ಯ ಸ್ವಾವಲಂಬಿಯೇ ಪರಾವಲಂಬಿಯೇ ಎಂಬುದನ್ನು ಗಮನಿಸಿ ಕೃಷಿಯೇತರ ಕಾರ್ಯಕ್ರಮಗಳಿಗೆ ಎಂತಹ ಜಮೀನು ಬಳಸಬೇಕೆಂಬ ತೀರ್ಮಾನಕ್ಕೆ ಬಂದು 'ಭೂ ನೀತಿ' ರೂಪಿಸಬೇಕಾಗುತ್ತದೆ.

ಈ ದಿನಗಳಲ್ಲಿ ದೇಶದ ಒಟ್ಟು ಕೃಷಿ ಭೂಮಿಯಲ್ಲಿ ನೀರಾವರಿ ಜಮೀನು ಶೇ.30ರಷ್ಟಿದ್ದು, ಇಲ್ಲಿನ ಉತ್ಪಾದನೆ ಈ ದಿನದ 120 ಕೋಟಿಗೆ ಸಾಲುತ್ತಿಲ್ಲ. ಈಗಿನ ಉತ್ಪಾದನೆ ಕೇವಲ 1960 ರಲ್ಲಿದ್ದ ಜನಸಂಖ್ಯೆಗೆ ಸಾಲುತ್ತಿದೆ. ಇದು ದೇಶದ ಪರಿಸ್ಥಿತಿ. ಆಹಾರ ಧಾನ್ಯದ ಉತ್ಪಾದನೆಯಲ್ಲಿ ದೇಶ ಪರಾವಲಂಬಿಯಾಗಿದೆ. ಅದೇ ರೀತಿ ಕರ್ನಾಟಕ ರಾಜ್ಯದ ನೀರಾವರಿ ಪ್ರದೇಶವು ಕೇವಲ ಶೇ.30 ಮಾತ್ರವೇ ಆಗಿದೆ. ಇಲ್ಲಿನ ಆಹಾರದ ಉತ್ಪಾದನೆಯು ರಾಜ್ಯದ 6 ಕೋಟಿ ಜನಸಂಖ್ಯೆಯ ಶೇ.60 ರಷ್ಟು ಜನತೆಗೆ ಮಾತ್ರವೇ ಸಾಲುತ್ತದೆ. ಉಳಿದ ಜನಸಂಖ್ಯೆಗೆ ಸರ್ಕಾರ ಪರವಾಲಂಬಿಯಾಗಿದೆ. ಶೇ.70 ರಷ್ಟು ಮಳೆಯಾಶ್ರಯದ ಪ್ರದೇಶವಿದ್ದರೂ ಮಳೆಯ ಅನಿಶ್ಚಿತತೆ ಕಾರಣದಿಂದಾಗಿ ಅದನ್ನು ನೆಚ್ಚಿಕೊಳ್ಳಲಾಗದು. ಆಹಾರಧಾನ್ಯದ ವಿಚಾರದಲ್ಲಿ ಸ್ವಾವಲಂಬನೆಯನ್ನು ಸಾಧಿಸಲು ಇನ್ನಷ್ಟು ನೀರಾವರಿಗೆ, ಅದೇ ರೀತಿ ಅತಿ ಹೆಚ್ಚು ಇಳುವರಿ ಪಡೆಯುವ ತಂತ್ರಜ್ಞಾನಕ್ಕೆ ಸರ್ಕಾರ ಮುಂದಾಗಬೇಕಾಗುತ್ತದೆ. ಈ ಎರಡರ ವಿಚಾರದಲ್ಲೂ ಬಿಜೆಪಿ ಸರ್ಕಾರ ಗಂಭೀರವಾಗಿಲ್ಲ.

ಆದ್ದರಿಂದ ಸರ್ಕಾರದ ಈ ಜನವಿರೋಧಿ ಭೂ ನೀತಿಯನ್ನು ಅಭಿವೃದ್ಧಿ ವಿರೋಧಿ ಭೂ ನೀತಿಯನ್ನು ವಿರೋಧಿಸಬೇಕಾಗಿದೆ. ಈ ಪ್ರತಿರೋಧ ಪ್ರಾಮಾಣಿಕ ಹಾಗೂ ಕಳಕಳಿಯಿಂದ ಕೂಡಿದ್ದಾಗಿದೆ. ಕೇವಲ ಜನಾರ್ಧನರೆಡ್ಡಿಯವರನ್ನು ಹಾಗೂ ಬಿಜೆಪಿಯನ್ನು ದ್ವೇಷಿಸುವ ಉದ್ದೇಶದಿಂದಲೋ ಅವಮಾನ ಗೊಳಿಸುವ ಉದ್ದೇಶ ದಿಂದಲೋ ಅಥವಾ ರಾಜಕೀಯ ದುರುದ್ದೇಶದಿಂದಲೋ ಈ ವಿರೋಧ ಬಂದಿಲ್ಲವೆಂಬುದು ಸ್ಪಷ್ಟವಿದೆ.

ಹೋರಾಟಕ್ಕೆ ಸರ್ಕಾರದ ಸ್ಪಂದನ



ಪ್ರಶ್ನೆ 3: ಚಾಗನೂರು-ಸಿರಿವಾರ ಗ್ರಾಮಗಳ ಸ್ಥಿತಿ ಏನಿದೆ?

ಯುಬಿ: ಈಗ ವಿಮಾನ ನಿಲ್ದಾಣ ಮಾಡಬೇಕೆನ್ನುವ ಪ್ರದೇಶವು ಬಳ್ಳಾರಿ ತಾಲ್ಲೂಕಿನ ಸಿರಿವಾರ ಹಾಗೂ ಚಾಗನೂರು ಗ್ರಾಮಗಳಿಗೆ ಸೇರಿದ ಭೂಮಿಯಿಂದ ಕೂಡಿದೆ. ಹೆಚ್ಚು ಕಡಿಮೆ ಎಲ್ಲಾ ಪ್ರದೇಶವು ನೀರಾವರಿಯಿಂದ ತುಳುಕಾಡುತ್ತಿದೆ. ಈ ಪ್ರದೇಶವು ತುಂಗಭದ್ರಾ ಬಲದಂಡೆಯ ಮೇಲ್ಪಟ್ಟದ ಹಾಗೂ ಕೆಳಮಟ್ಟದ ಎರಡೂ ಕಾಲುವೆಗಳಿಂದ ನೀರಾವರಿ ಹೊಂದಿದೆ. ಚಾಗನೂರು ಗ್ರಾಮಗಳಲ್ಲಿ ಏತ ನೀರಾವರಿ ಮೂಲಕವೂ ನೀರಾವರಿ ಪ್ರದೇಶ ವಿಸ್ತರಿಸಲಾಗಿದೆ. ಈಗ ಜಮೀನು ಕಳೆದು ಕೊಳ್ಳುವವರಲ್ಲಿ ಮತ್ತು ನೇರವಾಗಿ ಅಪ್ರತ್ಯಕ್ಷವಾಗಿ ತಮ್ಮ ದುಡಿಮೆ ಬದುಕು ಕಳೆದುಕೊಳ್ಳುವವರಲ್ಲಿ ಎಸ್‌ಸಿ/ಎಸ್‌ಟಿಗಳೇ ಹೆಚ್ಚಾಗಿರುವುದು ವಿಶೇಷ. ಯಾಕೆಂದರೆ ಈ ಎರಡು ಗ್ರಾಮಗಳಲ್ಲಿನ ಶೇ.50 ರಷ್ಟು ಜನರು ಎಸ್‌ಸಿ/ಎಸ್‌ಟಿ ಜನ ಸಮುದಾಯವರಾಗಿದ್ದಾರೆ. ಈ ನೀರಾವರಿ ಪ್ರದೇಶವು ಈ ಎರಡು ಗ್ರಾಮಗಳ ಸಾವಿರಾರು ಕೂಲಿಕಾರರಿಗೆ ಮಾತ್ರವಲ್ಲ, ಒಣಭೂಮಿ ಪ್ರದೇಶ ಹೊಂದಿದ ಶಿಡಿಗಿನಮೊಳ ಕಾರೈಕಲ್, ವಿಧಿರಾಪುರ, ಹಣ ಮತ್ತಿತರೆ ಗ್ರಾಮಗಳ ಸಾವಿರಾರು ಕೂಲಿಕಾರರಿಗೆ ಉದ್ಯೋಗ ನೀಡುವ ಆಶ್ರಯದಾತನಾಗಿದೆ. ವಿಮಾನನಿಲ್ದಾಣಕ್ಕಾಗಿ ಪಡೆಯುವ ಜಮೀನಿನಲ್ಲಿ ಕನಿಷ್ಠವಾದರೂ 4000 ಕುಟುಂಬಗಳು ಆಶ್ರಯಪಡೆದಿವೆ. 2 ಗ್ರಾಮಗಳ ನೂರಾರು ಕಿರಾಣಿ ಅಂಗಡಿಗಳು, ಹೋಟೆಲ್‌ಗಳು, ಕಸುಬುದಾರರ ಕುಟುಂಬಗಳಿಗೆ ಇದು ಆಶ್ರಯ ನೀಡಿದೆ. ಸಾವಿರಾರು ಜಾನುವಾರುಗಳಿಗೆ ಮೇವಿನ ಆಶ್ರಯವಾಗಿದೆ. ಅರ್ಧ ಲಕ್ಷ ಕ್ವಿಂಟಾಲ್‌ಗಿಂತಲೂ ಹೆಚ್ಚು ಭತ್ತವನ್ನು ಅಕ್ಕಿಗಿರಣಿಗೆ ಒದಗಿಸುತ್ತಿದೆ. ವಿಮಾನ ನಿಲ್ದಾಣ ಈ ಜನರಿಗೆ ಉದ್ಯೋಗ ನೀಡಬಲ್ಲದೇ?

ಬಳ್ಳಾರಿ ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರಗಳು(ಒಂದೆರಡು ಬಿಟ್ಟರೆ) ಮತ್ತು ಲೋಕಸಭಾ ಕ್ಷೇತ್ರವು ಎಸ್‌ಸಿ/ಎಸ್‌ಟಿ ಗಳಿಗೆ ಮೀಸಲಾಗಿದೆ. ಈ ನೀರಾವರಿ ಜಮೀನು ಈ ಪ್ರದೇಶದ ಎಲ್ಲಾ ಎಸ್‌ಸಿ/ಎಸ್‌ಟಿ ಗಳಿಗೆ ಆಧಾರವಾಗಿದೆ ಯೆಂದು ಹೇಳಬಹುದಾಗಿದೆ. ಎಲ್ಲಾ ಮೀಸಲು ಕ್ಷೇತ್ರಗಳನ್ನು (ಸಂಡೂರುಬಿಟ್ಟು) ಬಿಜೆಪಿ ಗೆದ್ದುಕೊಂಡಿದೆ. ಇವರೆಲ್ಲರೂ ನಿರಾಶ್ರಿತರಾಗುವಾಗ ಇದೇನಾ ಬಿಜೆಪಿ ದಲಿತ ಪರ ನೀತಿ, ಸಚಿವ ಶ್ರೀರಾಮುಲು ಅವರ ದಲಿತ ಪರನೀತಿ? ಎಂದೆನಿಸುತ್ತದೆ.

ವಿಧಾನಸಭೆಯಲ್ಲಿ ಸಚಿವ ಜನಾರ್ಧನರೆಡ್ಡಿಯವರು ಈ ಭೂಮಿಯಲ್ಲಿ ಒಂದೇ ಒಂದು ನೀರಾವರಿ ಕಾಲುವೆ ಇಲ್ಲ. ನೈಸರ್ಗಿಕ ಚರಂಡಿ ಇಲ್ಲ ಎಂದಿರುವುದು, ವಿಧಾನಸಭೆಯನ್ನು ಹಾಗೂ ರಾಜ್ಯವನ್ನು ದಾರಿತಪ್ಪಿಸುವ ಹೇಳಿಕೆಯಾಗಿದೆ. ಯಾವುದೇ ನೈಸರ್ಗಿಕ ಚರಂಡಿ ಇಲ್ಲದ ಪ್ರದೇಶದಲ್ಲಿ ಗ್ರಾಮಗಳನ್ನಾದರೂ ಕಟ್ಟಲು ಹೇಗೆ ಸಾಧ್ಯ. ಸಚಿವರು, ಸರ್ಕಾರ ಹಠವನ್ನು ಬಿಡಬೇಕು, ವಿಮಾನ ನಿಲ್ದಾಣ ನಿರ್ಮಾಣವನ್ನು ಒಣಭೂಮಿ ಪ್ರದೇಶಕ್ಕೆ ವರ್ಗಾಯಿಸಬೇಕು.

ಪ್ರಶ್ನೆ 4 : ಅಲ್ಲಿಯೇ ವಿಮಾನನಿಲ್ದಾಣ ಮಾಡುವ ಹಿಂದೆ ಏನಾದರೂ ಸ್ವಾರ್ಥವಿದೆಯೇ?

ಯು.ಬಿ.: ಈ ಮೇಲಿನೆಲ್ಲ ವಿವರಣೆಯಿಂದ ಅಲ್ಲಿಯೇ ವಿಮಾನ ನಿಲ್ದಾಣ ಮಾಡಬೇಕಿಲ್ಲ ಎಂಬುದಕ್ಕೆ ಬೇಕಾದ ಆಧಾರ ದೊರೆಯುತ್ತದೆ. ಆದಾಗಲೂ ಅಲ್ಲಿಯೇ ಆಗಬೇಕೆನ್ನುತ್ತಾರೆಂದರೆ ಏನರ್ಥ? ಏನಾದರೂ ಹಿತಾಸಕ್ತಿ ಇರಬೇಕು. 'ಬ್ರಾಹ್ಮಿಣಿ ಸ್ಟೀಲ್ಸ್' ಆಂಧ್ರಗಡಿಯಾಚೆ ನಿರ್ಮಿಸಲಾಗುತ್ತಿದೆ. ಇಲ್ಲೇ ವಿಮಾನ ನಿಲ್ದಾಣವಾದಲ್ಲಿ ಹಾಗೂ ಅವರ ಖನಿಜ ಸಂಪನ್ಮೂಲದ ಡಂಪಿಂಗ್ ಯಾರ್ಡ್ ಇದೇ ಪ್ರದೇಶದಲ್ಲಿ ನಿರ್ಮಾಣಗೊಳ್ಳಲಿದೆ ಎನ್ನಲಾಗಿದೆ. ಅದೇರೀತಿ ಸಚಿವರುಗಳು ಬೇನಾಮಿ ಹೆಸರಿನಲ್ಲಿ ಸುಮಾರು 200-300 ಎಕರೆ ಹೊಂದಿದ್ದಾರೆ. ಅದಕ್ಕೆ ವಿಮಾನನಿಲ್ದಾಣ ನಿರ್ಮಾಣವಾದಲ್ಲಿ ಒಳ್ಳೆಯ ಬೆಲೆ ಬರಲಿದೆ. ಹೀಗಾಗಿ ವಿಮಾನ ನಿಲ್ದಾಣವು ಒಟ್ಟಾರೆ ಸಾರ್ವಜನಿಕ ವೆಚ್ಚದಲ್ಲಿ ನಿರ್ಮಾಣಗೊಳ್ಳುವುದು ತಮ್ಮ ವ್ಯವಹಾರಕ್ಕೆ ಅನುಕೂಲವಾಗಲಿದೆ ಎಂದು ಮಾಡುತ್ತಿದ್ದಾರೆಂಬ ಅಭಿಪ್ರಾಯ ಜನಗಳಲ್ಲಿ ದಟ್ಟವಾಗಿದೆ. ಅದಿಲ್ಲದೇ ಹೋದಲ್ಲಿ ಅವರಿಗೇಕೆ ಇಲ್ಲಿಯೇ ಸ್ಥಾಪಿಸಬೇಕೆಂಬ ಹಠವಿದೆ ಎಂದು ಜನರು ಪ್ರಶ್ನಿಸುತ್ತಿದ್ದಾರೆ. ನಿಜಾಂಶ ಹೊರ ಬರಬೇಕಿದೆ. ●

ತಿಮ್ಮಪ್ಪ ಕೇಳು

ಬಡವರಿಗೆ ಸಿಗದಿಲ್ಲಿ ಸರಿಯಾಗಿ ಊಟ
ನೀ ಧರಿಸಿ ಮೆರೆಯುತಿಹೆ ವಜ್ರ ಕಿರೀಟ
ಇತ್ತಿನ್ನು ನೀನಂತೆ ಎಲ್ಲರಿಗೆ ಅಪ್ಪ
ಕಳ್ಳರಿಗೆ ಸುಳ್ಳರಿಗೆ ಮಾತ್ರವೇ ನಪ್ಪ!

- ವಿಡಂಬಾರಿ

ಯೋಜಿತ ಕೋಮುಗಲಭೆಗೆ...

ಪುಟ 7 ರಿಂದ

ಕೋಮುದ್ವೇಷದ ದುಷ್ಪ್ರಚಾರದ ಮೂಲಕ ಕ್ಷಣಾರ್ಧದಲ್ಲಿ ಸಾವಿರಾರು ಜನರನ್ನು ಸಂಘಟಿಸುವ ಶಕ್ತಿಯಿರುವ ಕೆ.ಎಫ್.ಡಿ.ಯು ಹಿಂಸೆಯ ಮೂಲಕ ಪ್ರತಿಕ್ರಿಯೆ ನೀಡುವಂತೆ ಪ್ರಚೋದಿಸುತ್ತದೆ. ಇಡೀ ಮುಸ್ಲಿಂ ಸಮುದಾಯ ಇನ್ನೂ ಹೆಚ್ಚು ಪ್ರತ್ಯೇಕಗೊಳ್ಳುತ್ತಾ ಹೋಗುವಂತೆ ಮಾಡುತ್ತಿದೆ. ಬಡ ಮುಸ್ಲಿಮರನ್ನು ಪ್ರಚೋದಿಸಲು ತಾನೇ ಕಳೆದ ಬಾರಿ ನಡೆದ ಗಲಭೆಗಳಲ್ಲಿ ದೇವಸ್ಥಾನಗಳನ್ನು ಭಗ್ನಗೊಳಿಸಲಾಗಿದೆ ಎಂದು ಪ್ರಲಾಪಿಸುತ್ತ ಮೈಸೂರಿಗೆ ಬಂದಿದ್ದ ಶ್ರೀರಾಮಸೇನೆಯ ಪ್ರಮೋದ್ ಮುತಾಲಿಕ್‌ನಿಗೆ ಅಲ್ಲಿ ಪ್ರವೇಶ ನಿರಾಕರಿಸಲಾಗಿತ್ತು. ವಿಷವನ್ನು ಕಾರಿ ಹೋಗಿದ್ದ ಮುತಾಲಿಕ್ ಕಳೆದ ತಿಂಗಳು ಮತ್ತೆ ಪ್ರತ್ಯಕ್ಷನಾಗಿ ಕ್ಯಾತಮಾರನಹಳ್ಳಿ ಪ್ರದೇಶದಲ್ಲಿ ದೇವಸ್ಥಾನಗಳಿಗೆ ಭೇಟಿ ನೀಡಿ ಹೋಗಿದ್ದಾನೆ. ಈಗ ಅರೆಬಿಕ್ ಶಾಲೆಯ ಮುಂದೆ ಸತ್ತ ಹಂದಿಯನ್ನು ಎಸೆಯಲಾಗಿದೆ. ಕುರಾನ್ ಗ್ರಂಥವನ್ನು ಸುಡುವ ಮಟ್ಟಕ್ಕೂ ಈ ಸಂಘಟನೆ ಹೋಗಿದೆ ಏನಾಗಬೇಕು:


ಕ್ಯಾತಮಾರನಹಳ್ಳಿ ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ವಾಸಿಸುವ ಬಡ ಜನರ ಮೂಲಭೂತ ಸಮಸ್ಯೆಗಳನ್ನು ಪರಿಹರಿಸಬೇಕು. ಅವರ ಆರ್ಥಿಕ ಮಟ್ಟ ಹೆಚ್ಚಿಸಲು ಸರ್ಕಾರವು ಕ್ರಿಯಾ ಯೋಜನೆಗಳನ್ನು ಕಾಲಮಿತಿಯಲ್ಲಿ ಜಾರಿಗೊಳಿಸಬೇಕು. ಪಡಿತರ ಚೀಟಿ, ಆರೋಗ್ಯ, ನೈರ್ಮಲ್ಯ, ಶಿಕ್ಷಣ ಅಲ್ಲಿನ ಜನರ ಕೈಗೆಟುಕವಂತಾಗಬೇಕು. ಆ ಪ್ರದೇಶದ ದುಡಿಯುವ ಜನರ ಮಹಿಳೆಯರ, ಯುವಜನ, ವಿದ್ಯಾರ್ಥಿಗಳನ್ನು ಬದುಕಿನ ಸಮಸ್ಯೆಗಳ ಆಧಾರದಲ್ಲಿ ಸಂಘಟಿಸಬೇಕು. ಕೋಮುವಾದಿ ಶಕ್ತಿಗಳ ವಿರುದ್ಧ ನಿರಂತರವಾದ ಸೈದ್ಧಾಂತಿಕ, ಸಾಂಸ್ಕೃತಿಕ ಪ್ರತಿ ದಾಳಿ ನಡೆಯುತ್ತಲೇ ಇರಬೇಕು. ಇದು ಈಗಲೇ ಆಗಬೇಕು. ಇನ್ನೊಮ್ಮೆ ಮೈಸೂರು ಹೊತ್ತಿ ಉರಿಯುವ ಮುನ್ನ. ಇದು ಮಾತ್ರವೇ ಸಮಸ್ಯೆಗೆ ಪರಿಹಾರ.

ಎನ್.ವಿಜಯಕುಮಾರ್, ಮೈಸೂರು

ಇದು ನಿಮಗೆ ಗೊತ್ತೆ?

ಪಶ್ಚಿಮ ಬಂಗಾಳದ ಎಡರಂಗ ಸರ್ಕಾರವು ಆಹಾರಧಾನ್ಯಗಳನ್ನು ವ್ಯಾಟ್ ವ್ಯಾಪ್ತಿಯಿಂದ ಹೊರಗಿಟ್ಟು ಆಹಾರಧಾನ್ಯಗಳ ಬೆಲೆ ದುಬಾರಿಯಾಗದಂತೆ ಮಾಡಲು ಶ್ರಮಿಸುತ್ತಿದೆ.

ಸಂಗ್ರಹ : ವೀರಣ್ಣ ಕಲ್ಲೂರಿ
ಬಾಚಿಗೊಂಡನಹಳ್ಳಿ




ಇಡೀ ಜಗತ್ತನ್ನು ಆವರಿಸುತ್ತಿರುವ ಜಾಗತಿಕ ಆರ್ಥಿಕ ಬಿಕ್ಕಟ್ಟು ಉದ್ಯೋಗ ನಾಶ, ಆದಾಯ ಕುಸಿತಗಳನ್ನು ಪರಿಗಣಿಸದೇ ಕೇಂದ್ರ ಸರ್ಕಾರ ಆಶಾವಾದದ ಮಾತನಾಡುತ್ತಿದೆ. ಆದರೆ ವಾಸ್ತವ ಚಿತ್ರ ಬೇರೆಯೇ ಇದೆ. ಇದು ಯುಪಿಎ ಸರ್ಕಾರದ ಹೊಣೆಗೇಡಿತನವಲ್ಲವೇ?

ಸರ್ಕಾರ ಕಣ್ಣುಮುಚ್ಚಿಕೊಂಡರೆ ಬಿಕ್ಕಟ್ಟು ಮಾಯವಾಗುತ್ತದೆಯೇ?

ನಾಲ್ಕೇ ತಿಂಗಳಲ್ಲಿ ಆರುಲಕ್ಷ ಕಾರ್ಮಿಕರು ಉದ್ಯೋಗ ಕಳೆದುಕೊಂಡಿದ್ದಾರೆ

ಹೀಗೆಂದು ಈಗ ಮನಮೋಹನ ಸಿಂಗ್ ಸರಕಾರವೇ ಒಪ್ಪಿಕೊಳ್ಳುತ್ತಿದೆ. ಸಂಸತ್ತಿನಲ್ಲಿ ಜುಲೈ 1ರಂದು ಮಂಡಿಸಿದ 2008-09ರ ಆರ್ಥಿಕ ಸಮೀಕ್ಷೆ ಭಾರತದ ಆರ್ಥಿಕದ ಮೇಲೆ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಪ್ರತಿಕೂಲ ಪರಿಣಾಮಗಳನ್ನು ಕೊನೆಗೂ ಒಪ್ಪಿಕೊಂಡಿದೆ. ಅದರ ಪ್ರಕಾರವೇ ಒಟ್ಟಾರೆ ಬೆಳವಣಿಗೆ ದರ 2008-09ರಲ್ಲಿ 6.7ಶೇ.ಕ್ಕೆ ಇಳಿದಿದೆ. ಕೃಷಿ ಬೆಳವಣಿಗೆ 3.3 ಶೇ. ದಷ್ಟು ಇಳಿದಿದೆ, ಕೈಗಾರಿಕಾ ಉತ್ಪನ್ನಗಳ ತಯಾರಿಕೆಯ ಬೆಳವಣಿಗೆ ದರವೂ 5.8ಶೇ.ದಷ್ಟು ಇಳಿದಿದೆ. ತಲಾ ಬಳಕೆ ದರವೂ 2007-08ರಲ್ಲಿ 6.9ಶೆ. ದರದಲ್ಲಿ ಬೆಳೆದಿದ್ದರೆ, 2008-09ರಲ್ಲಿ 1.4ಶೇ. ಕ್ಕೆ ಇಳಿದಿದೆ. ಅಂದರೆ ಬಹುಪಾಲು ಜನಗಳ ಕೊಳ್ಳುವ ಸಾಮರ್ಥ್ಯ ಅಷ್ಟೊಂದು ಕುಗ್ಗಿದೆ. ಇವೆಲ್ಲ ಸರಕಾರದ ಆರ್ಥಿಕ ಸಮೀಕ್ಷೆಯ ಅಂಕಿ-ಅಂಶಗಳೇ. ಆದರೂ ಇವನ್ನು ಎದುರಿಸಲು ಆ ಸಮೀಕ್ಷೆ ಸೂಚಿಸುವ ಪರಿಹಾರಗಳು ಬಂಡವಾಳಶಾಹಿ ಜಗತ್ತಿನಲ್ಲಿ ಈ ಬಿಕ್ಕಟ್ಟನ್ನು ತಂದವುಗಳೇ. ಈ ವರ್ಷದ ಕೊನೆಗೆ ಜಾಗತಿಕ ಬಿಕ್ಕಟ್ಟು ಶಮನಗೊಂಡು ಮತ್ತೆ ದೇಶ 9ಶೇ. ಬೆಳವಣಿಗೆಯ ಹಾದಿಯಲ್ಲಿ ಸಾಗುತ್ತದೆ ಎಂಬುದು ಸರಕಾರದ ನಿರೀಕ್ಷೆ. ಆದರೆ ಈ ನಿರೀಕ್ಷೆಗೆ ಏನಾದರೂ ಆಧಾರವಿದೆಯೇ? ಕಳೆದ ಸಂಚಿಕೆಯಲ್ಲಿ ಜಗತ್ತಿನ ಅತಿ ಶ್ರೀಮಂತ ಎಂಟು ದೇಶಗಳ ಮುಖಂಡರು ಕೂಡಾ ಈ ಬಗ್ಗೆ ಖಡಾಖಂಡಿತವಾಗಿ ಹೇಳುವ ಸ್ಥಿತಿಯಲ್ಲಿಲ್ಲ ಎಂದು ನೋಡಿದ್ದೇವೆ. ನಂತರ ಬಿಕ್ಕಟ್ಟಿನ ತವರು ಅಮೆರಿಕ ಮತ್ತು ಯುರೋಪಿನ ಪ್ರಮುಖ ದೇಶ ಫ್ರಾನ್ಸಿನಿಂದ ಬಂದಿರುವ ಸುದ್ದಿಗಳು ಇಂತಹ ನಿರೀಕ್ಷೆಗೆ ಸದ್ಯಕ್ಕಂತೂ ಅವಕಾಶವಿಲ್ಲ ಎಂದು ತೋರಿಸುತ್ತಿವೆ. ಅಮೆರಿಕಾದಲ್ಲಿ ಒಂದೇ ತಿಂಗಳಲ್ಲಿ 4.67 ಲಕ್ಷ ಉದ್ಯೋಗ ಕಡಿತ ಈ ಜೂನ್ ತಿಂಗಳಲ್ಲಿ ಅಮೆರಿಕನ್ ಮಾಲಕರು 4,67,000 ಉದ್ಯೋಗಗಳನ್ನು ಕಡಿತ ಮಾಡಿದ್ದಾರೆ ಎಂದು ರಾಯ್ಟರ್ ಸುದ್ದಿ ಸಂಸ್ಥೆ ಹೇಳಿದೆ. ಅಮೆರಿಕಾದಲ್ಲಿ ನಿರುದ್ಯೋಗ 9.5ಶೇ.ಕ್ಕೇರಿದೆ ಎಂದು ಅಲ್ಲಿನ ಸರಕಾರೀ ಪ್ರಕಟಣೆ ತಿಳಿಸಿದೆ. ಅಮೆರಿಕಾದ ಷೇರು ಮಾರುಕಟ್ಟೆ ಆರ್ಥಿಕ ತಜ್ಞರು ಅಂದಾಜು ಮಾಡಿದ್ದು 3,63,000. ಅದಕ್ಕಿಂತ ಲಕ್ಷ ಹೆಚ್ಚು ಉದ್ಯೋಗ ಕಡಿತವಾಗಿರುವುದು ಅಧ್ಯಕ್ಷ ಒಬಾಮಾ ಸೇರಿದಂತೆ ಎಲ್ಲರನ್ನೂ ಕಳವಳಕ್ಕೀಡು ಮಾಡಿದೆ. ಹಿಂದಿನ ನಾಲ್ಕು ತಿಂಗಳಲ್ಲಿ ಉದ್ಯೋಗ ಕಡಿತದ ಪ್ರಮಾಣ ಇಳಿದಿತ್ತು. ಆದರೆ ಈಗ ಅದು ಮತ್ತೆ ಏರಿದೆ ಎಂದು ಹೇಳಲಾಗುತ್ತಿದೆ. ಅಮೆರಿಕಾದಲ್ಲಿ ಆರ್ಥಿಕ ಹಿಂಜರಿತ ಆರಂಭವಾದಂದಿನಿಂದ 65 ಲಕ್ಷ ಮಂದಿ ಉದ್ಯೋಗ ಕಳೆಕೊಂಡಿದ್ದಾರೆ. ಜನಸಂಖ್ಯೆಯ ಏರಿಕೆಗೆ ಅನುಗುಣವಾಗಿ ಪ್ರತಿತಿಂಗಳು ಇನ್ನೂ 1ಲಕ್ಷ ಉದ್ಯೋಗಗಳ್ ಸೃಷ್ಟಿಯಾಗಬೇಕು ಎಂಬುದನ್ನು ಗಮನಕ್ಕೆ ತಗೊಂಡರೆ ವಾಸ್ತವವಾಗಿ ಅಮೆರಿಕಾದಲ್ಲಿ ಈಗ 85 ಲಕ್ಷ ಮಂದಿಗೆ ಉದ್ಯೋಗ ಗಳಿಲ್ಲ ಎಂದು ನೊಬೆಲ್ ಪ್ರಶಸ್ತಿ ವಿಜೇತ ಪೌಲ್ ಕ್ರುಗ್‌ಮನ್ ಹೇಳುತ್ತಾರೆ.



ಒಬಾಮ ಒಪ್ಪಿಗೆ

ತನ್ನ ಆಡಳಿತ ಮಸಿತಿ ಮತ್ತು ಹಣಕಾಸು ಮಾರುಕಟ್ಟೆಗಳಲ್ಲಿ ಸ್ಥಿರತೆ ತಂದಿದೆ, ಆದರೆ ಉದ್ಯೋಗ ಮಾರುಕಟ್ಟೆಯಲ್ಲಿ ಇನ್ನೂ ಬಹಳಷ್ಟು ಕೆಲಸವಾಗಬೇಕಾಗಿದೆ, ಉದ್ಯೋಗ ಕಳಕೊಳ್ಳುವ ಮುಂದಿನ ಸರದಿ ತಮ್ಮದೇ ಇರಬಹುದು ಎಂದು ಜನ ಭಾವಿಸುವಂತಾಗಿದೆ ಎಂದು ಅಧ್ಯಕ್ಷ ಒಬಾಮ ಒಂದು ಸಂದರ್ಶನದಲ್ಲಿ ಒಪ್ಪಿಕೊಂಡಿದ್ದಾರೆ. ಫ್ರಾನ್ಸಿನಲ್ಲೂ ನಿರುದ್ಯೋಗ ಹದಗೆಡುವ ಭೀತಿ ಈ ದೇಶದಲ್ಲೂ ಉದ್ಯೋಗ ಮಾರುಕಟ್ಟೆ ಸ್ಥಿರಗೊಳ್ಳುವ ಲಕ್ಷಣಗಳಿಲ್ಲ ಎಂದು ಜಗತ್ತಿನ ಅತಿ ದೊಡ್ಡ ಸಿಬ್ಬಂದಿ ನೇಮಕ ಸಂಸ್ಥೆ ಅಡೆಕ್ಕೊ ಹೇಳಿದೆ. ಉದ್ಯೋಗಾವಕಾಶಗಳು ಅತಿ ಹೆಚ್ಚಾಗಿ ಕಡಿತಗೊಳ್ಳುತ್ತಿರುವುದು ಕಾರು ಕಂಪನಿಗಳಲ್ಲಿ(80ಶೇ.), ಇತರ ಭಾರೀ ಉದ್ದಿಮೆಗಳಲ್ಲಿ ಮತ್ತು ಕಟ್ಟಡ ಉದ್ದಿಮೆಯಲ್ಲಿ(30ಶೇ.) ಎಂದು ಅದು ಹೇಳಿದೆ. ಈ ವರ್ಷದ ದ್ವಿತೀಯಾರ್ಧದಲ್ಲಿ ಉದ್ಯೋಗ ಕಡಿತ ಇನ್ನೂ ಹೆಚ್ಚಿ ಈ ವರ್ಷದ ಕೊನೆಯ ವೇಳೆಗೆ ಇಲ್ಲಿ ನಿರುದ್ಯೋಗ ದರ 10.6 ಶೇ.ಕ್ಕೇರಬಹುದು, ಮುಂದೆ ಅದು 11.3ಶೇ. ಕ್ಕೆ ಏರಬಹುದು ಎಂದು ಅದು ಹೇಳಿದೆ. ಮೇ 2009ರಲ್ಲಿ ಅದು 9.3ಶೇ. ಇತ್ತು. ಫ್ರಾನ್ಸಿನ ಒಟ್ಟು ಆಂತರಿಕ ಉತ್ಪನ್ನ 3ಶೇ.ದಷ್ಟು ಕುಂಠಿತಗೊಳ್ಳಬಹುದು ಎಂದೂ ಹೇಳಲಾಗುತ್ತಿದೆ. ಕೆಲವು ತಿಂಗಳ ಹಿಂದೆ ಫ್ರಾನ್ಸಿನಾದ್ಯಂತ ಉದ್ಯೋಗ ಕಡಿತಗಳ ವಿರುದ್ಧ ವ್ಯಾಪಕ ಪ್ರತಿಭಟನೆಗಳು ನಡೆದಿದ್ದವು. ಕಂಪನಿಗಳ ಮ್ಯಾನೇಜರುಗಳನ್ನು ಹತಾಶ ಕಾರ್ಮಿಕರು 'ಬಂಧನ' ದಲ್ಲಿಟ್ಟಿದ್ದರು. ಪ್ರತಿ ಅಮೆರಿಕನ್ನನ ತಲೆಯ ಮೇಲೆ 37000 ಡಾಲರ್ ಸಾಲ ಅಮೆರಿಕದಲ್ಲಿ ರಾಷ್ಟ್ರೀಯ ಸಾಲದ ಮೊತ್ತ ವಿಪರೀತವಾಗಿ ಏರುತ್ತಿದೆ. ಅದು ಅಲ್ಲಿ ಮುಂದಿನ ದೊಡ್ಡ ಬಿಕ್ಕಟ್ಟಾಗಿ ಪರಿಣಮಿಸಬಹುದು ಎಂಬ ಭೀತಿ ಹಲವರನ್ನು ಕಾಡುತ್ತಿದೆ. 37ಸಾವಿರ ಡಾಲರ್ ಎಂದರೆ ಸುಮಾರು 15 ರಿಂದ 20ಲಕ್ಷ ರೂಪಾಯಿಗಳು. ಸತತ ಎಂಟನೇ ತಿಂಗಳಲ್ಲೂ ರಫ್ತು ಇಳಿಕೆ ಮೇ2009ರಲ್ಲೂ ರಫ್ತು ಪ್ರಮಾಣ 29.2ಶೇ.ದಷ್ಟು ಇಳಿದಿದೆ. ಆಮದು ಕೂಡಾ 39.2ಶೇ.ದಷ್ಟು ಇಳಿದಿದೆ. ಅಂದರೆ ದೇಶದೊಳಗೆ ಬಳಕೆಯ ಸಾಮರ್ಥ್ಯ ಮತ್ತಷ್ಟು ಕುಸಿಯುತ್ತಿದೆ. ಕಳೆದ ಎಂಟು ತಿಂಗಳಿಂದ ಸತತವಾಗಿ ಈ ರಫ್ತು ಇಳಿಕೆ ಸಂಭವಿಸುತ್ತಿರುವುದು ಆತಂಕ ಮೂಡಿಸಿದೆ. ಜಾಗತಿಕ ಬೇಡಿಕೆಗಳಲ್ಲಿನ ಕುಸಿತ ಮತ್ತು ಜನಗಳ ಕೊಳ್ಳುವ ಸಾಮರ್ಥ್ಯ ಕುಸಿಯುತ್ತಿರುವುದು ಇದಕ್ಕೆ ಕಾರಣ ಎನ್ನಲಾಗುತ್ತಿದೆ. ಸಹಜವಾಗಿಯೇ ಇನ್ನಷ್ಟು ಉದ್ಯೋಗಗಳ ಕಡಿತದ ಭಯ ದೇಶದ ಕಾರ್ಮಿಕರನ್ನು ಬಾಧಿಸುತ್ತಿದೆ.

ವಿಶ್ವಬ್ಯಾಂಕ್ ಅಂದಾಜು

ಜಾಗತಿಕ ಆರ್ಥಿಕದಲ್ಲಿ 2.9ಶೇ. ಮುದುಡಿಕೆ-ವಿಶ್ವಬ್ಯಾಂಕಿನ ಅಂದಾಜು 2007ರಲ್ಲಿ 8.1ಶೇ. ಮತ್ತು 2008ರಲ್ಲಿ 5.9ಶೇ. ದರದಲ್ಲಿ ಬೆಳೆದ ಅಭಿವೃದ್ಧಿಶೀಲ ದೇಶಗಳ ಆರ್ಥಿಕ 2009ರಲ್ಲಿ ಕೇವಲ 1.2ಶೇ. ದರದಲ್ಲಿ ಬೆಳೆಯಬಹುದು ಎಂದು ವಿಶ್ವಬ್ಯಾಂಕ್ ಅಂದಾಜು ಮಾಡಿದೆ. ಅದರಲ್ಲಿ ಭಾರತ ಮತ್ತು ಚೀನಾವನ್ನು ಬಿಟ್ಟರೆ ಉಳಿದ ಅಭಿವೃದ್ಧಿಶೀಲ ದೇಶಗಳ ಆರ್ಥಿಕ ವಾಸ್ತವವಾಗಿ 1.6ಶೇ.ದಷ್ಟು ಇಳಿಕೆ ಕಾಣಬಹುದು ಎಂದಿರುವ ಈ ಅಂದಾಜು ಒಟ್ಟಾರೆಯಾಗಿ ಜಾಗತಿಕ ಆರ್ಥಿಕವು 2.9ಶೇ.ದಷ್ಟು ಮುದುಡಲಿದೆ ಎಂದಿದೆ. ಈ ಹಿಂದೆ ಅದು 1.7ಶೇ.ದಷ್ಟು ಮುದುಡಲಿದೆ ಎಂದಿತ್ತು. ಭಾರತ ಮತ್ತು ಚೀನಾದಲ್ಲಿ ಈ ನಿಧಾನಗತಿಯ ದುಷ್ಪರಿಣಾಮ ಇತರರಿಗೆ ಹೋಲಿಸಿದರೆ ಕಡಿಮೆಯಿರಲು ಅವುಗಳ ಆರ್ಥಿಕದ ಮೇಲೆ ಸರ್ಕಾರದ ಒಡೆತನದ ಉದ್ದಿಮೆಗಳ ಪ್ರಮಾಣ ಹೆಚ್ಚಿರುವುದೇ ಕಾರಣವಿರಬೇಕು. 2010ರ ವೇಳೆಗೆ ಆರ್ಥಿಕ ಹಿಂಜರಿತ ಇಲ್ಲವಾಗಿ ಆರ್ಥಿಕ ಬೆಳವಣಿಗೆ ಮತ್ತೆ ಏರುಮುಖಿಗೊಳ್ಳುತ್ತದೆ ಎಂಬುದು ವಿಶ್ವಬ್ಯಾಂಕ್ ನಿರೀಕ್ಷೆ. ಪಿಂಕ್ ಸ್ಲಿಪ್‌ಗಳ ಭಯದಲ್ಲಿ ಐಟಿ(ಮಾಹಿತಿ ತಂತ್ರಜ್ಞಾನ) ಕೇಂದ್ರವೆನಿಸಿದ ಬೆಂಗಳೂರಿನಲ್ಲಿ ಐಟಿ ತಜ್ಞರು ಈಗ ಪ್ರತಿದಿನ ತಮ್ಮ ಜೊತೆಗಾರರು ಒಬ್ಬೊಬ್ಬರಾಗಿ ಪಕ್ಕದಲ್ಲಿ ಕೆಲಸವಿಲ್ಲದೆ 'ಬೆಂಚಿ'ನಲ್ಲಿ ಕೂರುವ ಅಥವಾ ಕೆಲಸ ಕಳಕೊಳ್ಳುತ್ತಿರುವ ವಾತಾವರಣದಲ್ಲಿ ಕೆಲಸ ಮಾಡಬೇಕಾಗಿದೆ. ಜೊತೆಗಾರರ ಕಳಕೊಳ್ಳುತ್ತಿದ್ದೇವಲ್ಲಾ ಎಂಬ ನೋವು ಒಂದೆಡೆಯಾದರೆ, ತಮ್ಮ ಸರದಿಯೂ ಬರಬಹುದೆಂಬ ಭೀತಿ ಇನ್ನೊಂದೆಡೆ. ಇದು ಅವರಲ್ಲಿ ಒಂದು ರೀತಿಯ ಮಾನಸಿಕ ಅಸ್ವಸ್ಥತೆಯನ್ನುಂಟು ಮಾಡುತ್ತಿದೆ. ಇದರ ಪರಿಣಾಮ ಅವರ ಕೆಲಸದ ಮೇಲೂ ಆಗುತ್ತಿದೆ. ಈಗ ಇದರಿಂದಾಗಿ ಅವರಲ್ಲಿ ಹೆಚ್ಚೆಚ್ಚು ಮಂದಿ ಮನಶ್ಶಾಸ್ತ್ರಜ್ಞರ ನೆರವು ಪಡೆಯಬೇಕಾಗುತ್ತಿದೆಯಂತೆ. ಬೆಂಗಳೂರಿನ ಆಸ್ಪತ್ರೆಗಳಲ್ಲಿ ಸಲಹೆಗಾಗಿ ಬರುವ ಐಟಿ ವಲಯದ ಉದ್ಯೋಗಿಗಳ ಸಂಖ್ಯೆ ಹೆಚ್ಚುತ್ತಿದೆಯಂತೆ. ದೇಶದಲ್ಲಿ ಮಾಹಿತಿ ತಂತ್ರಜ್ಞಾನ ವಲಯದಲ್ಲಿ ಸುಮಾರು 20 ಲಕ್ಷ ಹಾಗೂ ಐಟಿ ಆಧಾರಿತ ಬಿಪಿಒಗಳಲ್ಲಿ ಸುಮಾರು 7 ಲಕ್ಷ ಮಂದಿ ದುಡಿಯುತ್ತಿದ್ದಾರೆ. ಎಷ್ಟು ಮಂದಿ ಕೆಲಸ ಕಳಕೊಂಡಿದ್ದಾರೆ ಎಂಬ ಬಗ್ಗೆ ಖಚಿತ ಮಾಹಿತಿಯಿಲ್ಲ. ಇವರೆಲ್ಲರೂ ಕೂಡಾ ಪರಿಸ್ಥಿತಿ ಬೇಗನೇ ಸುಧಾರಿಸಬಹುದು, ಆದರ ಮೊದಲು ತನಗೆ 'ಇದು ಈ ಕಂಪನಿಯಲ್ಲಿ ಕೊನೆಯ ಸಂಬಳ' ಎಂದು ಸಂಕೇತಿಸುವ ಪಿಂಕ್ ಸ್ಲಿಪ್ ಬರಲಿಕ್ಕಿಲ್ಲ ಎಂಬ ನಿರೀಕ್ಷೆಯೊಂದಿಗೆ ಕೆಲಸ ಮಾಡುತ್ತಿದ್ದಾರೆ.

ಪಿಂಕ್ ಸ್ಲಿಪ್‌ಗಳ ಭಯದಲ್ಲಿ

ಐಟಿ(ಮಾಹಿತಿ ತಂತ್ರಜ್ಞಾನ) ಕೇಂದ್ರವೆನಿಸಿದ ಬೆಂಗಳೂರಿನಲ್ಲಿ ಐಟಿ ತಜ್ಞರು ಈಗ ಪ್ರತಿದಿನ ತಮ್ಮ ಜೊತೆಗಾರರು ಒಬ್ಬೊಬ್ಬರಾಗಿ ಪಕ್ಕದಲ್ಲಿ ಕೆಲಸವಿಲ್ಲದೆ 'ಬೆಂಚಿ'ನಲ್ಲಿ ಕೂರುವ ಅಥವಾ ಕೆಲಸ ಕಳಕೊಳ್ಳುತ್ತಿರುವ ವಾತಾವರಣದಲ್ಲಿ ಕೆಲಸ ಮಾಡಬೇಕಾಗಿದೆ. ಜೊತೆಗಾರರನ್ನು ಕಳಕೊಳ್ಳುತ್ತಿದ್ದೇವಲ್ಲಾ ಎಂಬ ನೋವು ಒಂದೆಡೆಯಾದರೆ, ತಮ್ಮ ಸರದಿಯೂ ಬರಬಹುದೆಂಬ ಭೀತಿ ಇನ್ನೊಂದೆಡೆ. ಇದು ಅವರಲ್ಲಿ ಒಂದು ರೀತಿಯ ಮಾನಸಿಕ ಅಸ್ವಸ್ಥತೆಯನ್ನುಂಟು ಮಾಡುತ್ತಿದೆ. ಇದರ ಪರಿಣಾಮ ಅವರ ಕೆಲಸದ ಮೇಲೂ ಆಗುತ್ತಿದೆ. ಈಗ ಇದರಿಂದಾಗಿ ಅವರಲ್ಲಿ ಹೆಚ್ಚೆಚ್ಚು ಮಂದಿ ಮನಶ್ಶಾಸ್ತ್ರಜ್ಞರ ನೆರವು ಪಡೆಯಬೇಕಾಗುತ್ತಿದೆಯಂತೆ. ಬೆಂಗಳೂರಿನ ಆಸ್ಪತ್ರೆಗಳಲ್ಲಿ ಸಲಹೆಗಾಗಿ ಬರುವ ಐಟಿ ವಲಯದ ಉದ್ಯೋಗಿಗಳ ಸಂಖ್ಯೆ ಹೆಚ್ಚುತ್ತಿದೆಯಂತೆ.

ದೇಶದಲ್ಲಿ ಮಾಹಿತಿ ತಂತ್ರಜ್ಞಾನ ವಲಯದಲ್ಲಿ ಸುಮಾರು 20 ಲಕ್ಷ ಹಾಗೂ ಐಟಿ ಆಧಾರಿತ ಬಿಪಿಒಗಳಲ್ಲಿ ಸುಮಾರು 7 ಲಕ್ಷ ಮಂದಿ ದುಡಿಯುತ್ತಿದ್ದಾರೆ. ಎಷ್ಟು ಮಂದಿ ಕೆಲಸ ಕಳಕೊಂಡಿದ್ದಾರೆ ಎಂಬ ಬಗ್ಗೆ ಖಚಿತ ಮಾಹಿತಿಯಿಲ್ಲ.

ಇವರೆಲ್ಲರೂ ಕೂಡಾ ಪರಿಸ್ಥಿತಿ ಬೇಗನೇ ಸುಧಾರಿಸಬಹುದು, ಆದರ ಮೊದಲು ತನಗೆ 'ಇದು ಈ ಕಂಪನಿಯಲ್ಲಿ ಕೊನೆಯ ಸಂಬಳ' ಎಂದು ಸಂಕೇತಿಸುವ ಪಿಂಕ್ ಸ್ಲಿಪ್ ಬರಲಿಕ್ಕಿಲ್ಲ ಎಂಬ ನಿರೀಕ್ಷೆಯೊಂದಿಗೆ ಕೆಲಸ ಮಾಡುತ್ತಿದ್ದಾರೆ.

ಕೃಪೆ: ದಿ ಹಿಂದೂ

ಕಟ್ಟಿದ ಕಾಲೇಜು ಹಸ್ತಾಂತರ ವಿಳಂಬ

ವಿದ್ಯಾರ್ಥಿಗಳಿಂದ ಬೀಗ ಮುರಿದು ಉದ್ಘಾಟನೆ

ಎಸ್‌ಎಫ್‌ಐ ಹೋರಾಟಕ್ಕೆ ಜಯ

ಹಮೀದ್, ಹಾಸನ

ಮೂರು ಸಾವಿರಕ್ಕೂ ಮಿಕ್ಕ ವಿದ್ಯಾರ್ಥಿನಿಯರ ಮುಖದಲ್ಲಿ ನಗು ಸಂತೋಷ ಎದ್ದು ತೋರುತ್ತಿತ್ತು. ಪಕ್ಷಿಗಳು ಪಂಜರದಿಂದ ಹೊರಗೆ ಬಂದು ನಲಿದಾಡಿದಂತೆ ವಿದ್ಯಾರ್ಥಿನಿಯರು ಹೊಸ ಕಟ್ಟಡದ ತುಂಬಾ ಓಡಾಡಿ ಸಂಭ್ರಮಿಸುತ್ತಿದ್ದರು. ಹೊಸ ಕಟ್ಟಡದ ನಾಲ್ಕು ಮಹಡಿಗಳಲ್ಲೂ ಕುಣಿದಾಡುತ್ತಿದ್ದ ವಿದ್ಯಾರ್ಥಿನಿಯರು,

ನಿಜ.. ಈ ದೃಶ್ಯ ಕಂಡದ್ದು ಹಾಸನ ನಗರದಲ್ಲಿ. ಘೋಷಣೆ ಮೊಳಗಿದ್ದು ಭಾರತ ವಿದ್ಯಾರ್ಥಿ ಫೆಡರೇಷನ್ ಸಂಘಟನೆಯು ಪರವಾಗಿ ಹೋರಾಟದಲ್ಲಿದ್ದವರು ನಾಲ್ಕಾರು ಕಡೆ ದಿಕ್ಕಾಪಾಲಾಗಿದ್ದ ಸುಮಾರು ಮೂರುವರೆ ಸಾವಿರದಷ್ಟು ವಿದ್ಯಾರ್ಥಿನಿಯರು. ಛಲ ಬಿಡದೆ ಹೋರಾಟ ನಡೆಸಿದ್ದು ಭಾರತ ವಿದ್ಯಾರ್ಥಿ ಫೆಡರೇಷನ್ ಸಂಘಟನೆ ನೇತೃತ್ವದಲ್ಲಿ.

ಕಟ್ಟಿದ್ದು ಒಡೆದರು, ಬೇಗ ಕಟ್ಟಲಿಲ್ಲ

ಹಾಸನ ನಗರದ ಹೃದಯ ಭಾಗದಲ್ಲಿ ವೈದ್ಯಕೀಯ ಕಾಲೇಜು ನಿರ್ಮಾಣ ಮಾಡುವುದಕ್ಕಾಗಿ ಹೊಸದಾಗಿ ಕೇವಲ ಮೂರು ತಿಂಗಳಾಗಿದ್ದ ವಿದ್ಯಾರ್ಥಿನಿಯರ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜಿನ ಸುಮಾರು 16 ಕೊಠಡಿಗಳ ಕಟ್ಟಡವನ್ನು ನೆಲಕ್ಕುರುಳಿಸಲು ಯೋಜನೆ ಸಿದ್ಧಪಡಿಸಲಾಗಿತ್ತು. ಈ ಹಿಂದೆ ವಿದ್ಯಾರ್ಥಿನಿಯರಿಗೆ ಸರಿಯಾದ ಕಟ್ಟಡವಿಲ್ಲವೆಂದು ಎಸ್‌ಎಫ್‌ಐ ಸಂಘಟನೆಯು ನಡೆಸಿದ ಹೋರಾಟದ ಫಲವಾಗಿ ಹೊಸ ಕಟ್ಟಡ ರಚನೆಯಾಗಿತ್ತು. ಆದರೆ ಇದನ್ನು ಧ್ವಂಸ ಮಾಡುವುದನ್ನು ವಿರೋಧಿಸಿದ ಎಸ್‌ಎಫ್‌ಐ ಸಂಘಟನೆ ಕಟ್ಟಡ ಉಳಿವಿಗಾಗಿ ಹೋರಾಟ ಮಾಡಿತ್ತು. ಆದರೆ ಕೇವಲ ಆರು ತಿಂಗಳಿನಲ್ಲಿ ಹೊಸ ಕಟ್ಟಡ ನಿರ್ಮಿಸಿ ಕೊಡುವುದಾಗಿ ಭರವಸೆ ನೀಡಿದ ನಂತರ




ಹೋರಾಟವನ್ನು ಕೈ ಬಿಡಲಾಗಿತ್ತು. ಕಟ್ಟಡ ಧ್ವಂಸ ಮಾಡಿದ ನಂತರ ಇಲ್ಲಿ ಕಲಿಯುತ್ತಿದ್ದ ಸುಮಾರು ಮೂರುವರೆ ಸಾವಿರದಷ್ಟು ವಿದ್ಯಾರ್ಥಿನಿಯರಿಗೆ ನೆಲೆ ಇಲ್ಲದಂತಾಯಿತು. ಸಮುದಾಯ ಭವನ, ಕಲ್ಯಾಣ ಮಂಟಪ, ದೇವಸ್ಥಾನದ ಆವರಣ, ಇನ್ನಿತರೆ ಕಟ್ಟಡಗಳಲ್ಲಿ ಪಾಠ ಕೇಳುವ ಸ್ಥಿತಿ ಇಲ್ಲಿನ ವಿದ್ಯಾರ್ಥಿನಿಯರದಾಯಿತು.

ಬಿಸಿಲು, ಮಳೆ, ಗಾಳಿಯಲ್ಲಿ ಪಾಠ

ಸರ್ಕಾರಿ ಶಾಲೆ, ಕಾಲೇಜೆಂದರೆ ಬಡ-ಮಕ್ಕಳು ಓದುವ ಶಾಲೆ, ಸಾವಿರಾರು ರೂಪಾಯಿ ಡೊನೇಷನ್ ಕೊಟ್ಟು ಕಲಿಯುವ ಸಾಮರ್ಥ್ಯ ಕಲಿಸುವ ಪಾಲಕರಿಗಿರಲಿಲ್ಲ. ಓದಲು ಕಷ್ಟ ಏನೇ ಇದ್ದರೂ ಬದುಕುವ ಮಾರ್ಗಕ್ಕೆ ವಿದ್ಯೆಯೇ ಮುಖ್ಯ ಕಾರಣ ಎಂದೇ ವಿದ್ಯಾರ್ಥಿನಿಯರು ಜಿಲ್ಲಾಡಳಿತ ತಿಳಿಸಿದ ಕಟ್ಟಡದಲ್ಲಿ ಹೊಸ ಕಟ್ಟಡದ ಕನಸು ಕಾಣುತ್ತಾ ಓದುತ್ತಿದ್ದರು. ಮಳೆಗಾಲದಲ್ಲಿ ಖಾಸಗಿ ಕಟ್ಟಡ ಸೋರುತ್ತಿದ್ದರೂ 80ರಿಂದ 120 ವಿದ್ಯಾರ್ಥಿನಿಯರು ಒಂದೇ ಕೊಠಡಿಯಲ್ಲಿ ಕುಳಿತಿರಬೇಕಾಗಿತ್ತು. ಕಟ್ಟಡ ಸೋರುತ್ತಿದ್ದರೂ, ಬಿಸಿಲು ನೇರವಾಗಿ ನೆತ್ತಿಯ ಮೇಲೆ ಬೀಳುತ್ತಿದ್ದರೂ ಓದಬೇಕಾದ್ದು ಅನಿವಾರ್ಯ, ಆದರೆ ಬೆಳಿಗ್ಗೆ ತರಗತಿಗೆ ಹೋಗಿ ಸಂಜೆವರೆಗೂ ಶೌಚಾಲಯಕ್ಕೆ ಹೋಗಬೇಕಾದರೆ ತುಂಬಾ ಕಷ್ಟ ಪಡಬೇಕಾಗಿತ್ತು. ಇರುವ ಒಂದೆರೆಡು ಶೌಚಾಲಯದಲ್ಲಿ ಎಲ್ಲರೂ ಬಳಸಲು ಸಾಧ್ಯವಿಲ್ಲ. ಅಲ್ಲದೆ ಕನಿಷ್ಟ ವಾರಕ್ಕೊಮ್ಮೆ ಸ್ವಚ್ಛ ಮಾಡುವ ವ್ಯವಸ್ಥೆಯೂ ಇರಲಿಲ್ಲ. ಬಡ ವಿದ್ಯಾರ್ಥಿಗಳು ಹೇಗಾದರೂ ಇರಲಿ ಎನ್ನುವ ಕಾರಣಕ್ಕಾಗಿ ಸರಕಾರ ಬಾಡಿಗೆ ಕಟ್ಟಡ ಪಡೆದುಕೊಂಡದ್ದೇನೋ ನಿಜ, ಆದರೆ ಅಲ್ಲೂ ಬಾಡಿಗೆ ನೀಡದ ಸರ್ಕಾರ ತನ್ನ ಬಡತನ ದಿವಾಳಿತನ ಪ್ರದರ್ಶಿಸಿದೆ.

ಮನವಿ ದೂರಿಗೆ ಬೆಲೆ ಇಲ್ಲ

ಶೈಕ್ಷಣಿಕ ವಾತಾವರಣ ಇಲ್ಲದ, ಮೂಲಭೂತ ಸೌಲಭ್ಯವಿಲ್ಲದಿರುವ ಬಗ್ಗೆ ಎಸ್‌ಎಫ್‌ಐ ಸಂಘಟನೆ ಹಲವಾರು ಬಾರಿ ಸಂಬಂಧಪಟ್ಟವರಿಗೆ ಮನವಿ ಮಾಡಿದರೂ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಈ ಮಧ್ಯೆ ಹೊಸದಾಗಿ ಗಂಧದ ಕೋಠಿಯಲ್ಲಿ ನಿರ್ಮಾಣವಾಗುತ್ತಿದ್ದ ಬೃಹತ್ ಕಟ್ಟಡ ಬಹುತೇಕ ಪೂರ್ಣಗೊಂಡಿತ್ತು. ಇಲ್ಲಿಗೆ ವಿದ್ಯಾರ್ಥಿನಿಯರನ್ನು ವರ್ಗಾಯಿಸುವಂತೆ ಎಸ್‌ಎಫ್‌ಐ ಸಂಘಟನೆ ದಿಕ್ಕಾಪಾಲಾಗಿದ್ದ ವಿದ್ಯಾರ್ಥಿನಿಯರನ್ನು ಒಂದೆಡೆ ಸೇರಿಸಿ ಜಿಲ್ಲೆಯಲ್ಲಿ ಬೃಹತ್ ಎನ್ನಬಹುದಾದ ಸುಮಾರು 3500 ವಿದ್ಯಾರ್ಥಿನಿಯರ ಮೆರವಣಿಗೆ, ರಸ್ತೆ ತಡೆ, ಮಾನವ ಸರಪಳಿ ನಡೆಸಿ ಜಿಲ್ಲಾಡಳಿತಕ್ಕೆ ಮನವಿ ನೀಡಿ ಒಂದು ವಾರದ ಗಡುವು ನೀಡಿತು, ಆದರೆ ಈ ಜನ ಪ್ರತಿನಿಧಿಗಳಾಗಲಿ, ಜಿಲ್ಲಾಡಳಿತವಾಗಲಿ, ಪದವಿಪೂರ್ವ ಶಿಕ್ಷಣದ ನಿರ್ದೇಶಕರಾಗಲಿ ಯಾವುದೇ ಗಮನ ಹರಿಸದೇ ಇದ್ದುದು ಹೋರಾಟಕ್ಕೆ ಹೊಸ ರೂಪ ಬರಲು ಕಾರಣವಾಯಿತು. ಈ ಗಡುವು ಮುಗಿಯುವ ಮುನ್ನಾ ದಿನ ಮತ್ತೆ ಸಂಬಂಧ ಪಟ್ಟ



ಅಧಿಕಾರಿಗಳನ್ನು ಭೇಟಿ ಮಾಡಿದರೆ, ಗುತ್ತಿಗೆದಾರರಿಗೆ ಸುಮಾರು ಎರಡು ಕೋಟಿ ಬಾಕಿ ಪಾವತಿ ಮಾಡಿದರೆ ಮಾತ್ರ ಕಟ್ಟಡ ಹಸ್ತಾಂತರಿಸುತ್ತಾರೆ ಎನ್ನುವ ಉತ್ತರ ಬಂತು. ಈ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇದ್ದರೂ ಕೇವಲ ರಾಜಕೀಯ ದ್ವೇಷದಿಂದ ಹಣ ಪಾವತಿ ಮಾಡದೆ ವಿದ್ಯಾರ್ಥಿನಿಯರು ತೊಂದರೆ ಅನುಭವಿಸುವಂತಾಯಿತು.

ಬೀಗ ಒಡೆದದ್ದೇ ಉದ್ಘಾಟನೆ

ಎಲ್ಲ ಸಮಸ್ಯೆಗಳಿಗೆ ಇತಿಶ್ರೀ ಹಾಡಲು ಎಸ್‌ಎಫ್‌ಐ ನಡೆಸಿದ ದಿಟ್ಟ ನಿರ್ಧಾರವೇ ಜಿಲ್ಲೆಯಾದ್ಯಂತ ಮಾಧ್ಯಮಗಳಲ್ಲಿ ವ್ಯಾಪಕ ಪ್ರಚಾರಕ್ಕೆ ಕಾರಣವಾಯಿತಲ್ಲದೇ, ವಿದ್ಯಾರ್ಥಿನಿಯರ



ಪೋಷಕರು ಬೆಂಬಲಕ್ಕೆ ನಿಂತರು, ಗಡುವು ಮುಗಿಯುವ ಮುನ್ನಾ ದಿನವೇ ಜಿಲ್ಲೆಗೆ ಆಗಮಿಸಿದ ಎಸ್‌ಎಫ್‌ಐ ರಾಜ್ಯಾಧ್ಯಕ್ಷ ಹೆಚ್. ಆರ್. ನವೀನ್ ಕುಮಾರ್‌ರವರು ಜಿಲ್ಲೆಯ ಎಸ್‌ಎಫ್‌ಐ ಮುಖಂಡರೊಂದಿಗೆ ಚರ್ಚಿಸಿ ಅಂತಿಮ ಹೋರಾಟದ ರೂಪುರೇಖೆಯನ್ನು ಸಿದ್ಧಪಡಿಸಿ ನೂತನ ಕಟ್ಟಡಕ್ಕೆ ನೇರ ಪ್ರವೇಶಿಸಲು ನಿರ್ಧರಿಸಿದರು. ಪೂರ್ವ ತಯಾರಿಯಂತೆ ಕಲ್ಯಾಣ ಮಂಟಪ, ರಾಮಮಂದಿರ, ಇತರೆ ಖಾಸಗಿ ಕಟ್ಟಡ ಎಂದು ಒಂದೊಂದು ದಿಕ್ಕಿನಲ್ಲಿ ಓದುತ್ತಿದ್ದ ವಿದ್ಯಾರ್ಥಿನಿಯರು ಅಲ್ಲಿಂದಲೇ ಎಸ್‌ಎಫ್‌ಐಯ ಶ್ವೇತ ಪತಾಕೆಯೊಂದಿಗೆ ಬೃಹತ್ ಮೆರವಣಿಗೆ ಮುಖಾಂತರ ಆಗಮಿಸಿ ನೂತನ ಕಟ್ಟಡದ ಬಳಿ ಸೇರಿದರು. ಎಂದಿನಂತೆ ಬೀಗ ಹಾಕಿರುವುದನ್ನು ನೋಡಿ ಸಾವಿರಾರು ವಿದ್ಯಾರ್ಥಿನಿಯರ ಸಮ್ಮುಖದಲ್ಲಿ ಬೀಗವನ್ನು ಒಡೆಯಲಾಯಿತು, ಕಟ್ಟಡದೊಳಕ್ಕೆ ಪ್ರವೇಶಿಸಿದಾಕ್ಷಣ ಎಲ್ಲವೂ ಮುಗಿಯಲಿಲ್ಲ. ತತ್‌ಕ್ಷಣವೇ ಶಿಕ್ಷಕರು ಪಾಠ ಮಾಡಲು ಬರಲಿಲ್ಲ. ವಿದ್ಯಾರ್ಥಿಗಳು ಹೆದರಲಿಲ್ಲ. ಹಲವು ದಿನ ಎಸ್‌ಎಫ್‌ಐ, ಡಿವೈಎಫ್‌ಐ ಮುಖಂಡರಿಂದಲೇ ಪಾಠ.., ಜಿಲ್ಲಾಡಳಿತದಿಂದ ನಿರ್ಲಕ್ಷ್ಯ ಅದಕ್ಕೂ ಸಂಘಟನೆಗಳ ಎಚ್ಚರಿಕೆ ಹೀಗೆ ಹಲವು ಹಂತಗಳ ಸೆಣಸಾಟದ ನಂತರ ಈಗ ಕಟ್ಟಡಕ್ಕೆ ಶಿಕ್ಷಕರು ಬರುತ್ತಿದ್ದಾರೆ. ಕುರ್ಚಿ, ಬೆಂಚು, ಸಿಬ್ಬಂದಿ ಬಂದು ಹೋರಾಟ ಯಶಸ್ಸಿನ ದಡವನ್ನು ಮುಟ್ಟಿದೆ.

ಈ ಯಶಸ್ವೀ ಹೋರಾಟದಲ್ಲಿ ಎಸ್‌ಎಫ್‌ಐನ ರಾಜ್ಯಾಧ್ಯಕ್ಷರಾದ ಹೆಚ್. ಆರ್. ನವೀನ್ ಕುಮಾರ್, ಜಿಲ್ಲಾಧ್ಯಕ್ಷ ಎಂ.ಜಿ. ಪೃಥ್ವಿ, ಕಾರ್ಯದರ್ಶಿ ವಾಸುದೇವ್ ಕಲ್ಕೆರೆ, ಕೆ.ಎಸ್. ಮಂಜು, ಉಷಾ, ರಾಘವೇಂದ್ರ, ದಿವ್ಯ, ಪ್ರಕಾಶ್, ಪ್ರದೀಪ್ ಡಿವೈಎಫ್‌ಐನ ಪ್ರಶಾವೆಲ್ ಹಮೀದ್, ವಸಂತ್ ಕುಮಾರ್, ಅರವಿಂದ, ಸಿಐಟಿಯುನ ಧರ್ಮೇಶ್, ಸತ್ಯನಾರಾಯಣ ಕೆ.ಬಿ. ಮಂಜುನಾಥ್ ಇದ್ದರು.

ಹೊಸ ಕಟ್ಟಡದ ಬೀಗ ಒಡೆದ ಪ್ರಕರಣಕ್ಕೆ ಯಾರೂ ದೂರು ನೀಡಿಲ್ಲವಾದರೂ ಜಿಲ್ಲಾಡಳಿತ ಎಸ್‌ಎಫ್‌ಐನ ಮುಖಂಡರ ಮೇಲೆ ಮೊಕದ್ದಮೆ ದಾಖಲಿಸಲು ನಿರ್ಧರಿಸಿರುವುದು ಸರಕಾರದ ಶಿಕ್ಷಣ ವಿರೋಧಿ ನೀತಿಯು ಇನ್ನೊಂದು ಉದಾಹರಣೆಯಾಗಿದೆ. ಎಸ್‌ಎಫ್‌ಐ ಸಂಘಟನೆಯ ಜೊತೆ ಸಾವಿರಾರು ವಿದ್ಯಾರ್ಥಿನಿಯರು ಪೋಷಕರು ಇರುವಾಗ ಜಿಲ್ಲಾಡಳಿತ ಈ ದುಸ್ಸಾಹಸಕ್ಕೆ ಕೈ ಹಾಕಲಾರದು ಎಂದು ಹಾಸನ ಜನತೆಯ ನಂಬಿಕೆ. ○

ಇದು ನಿಮಗೆ ಗೊತ್ತೇ?

ನಾಗರೀಕರ ಮೇಲೆ ಅಣ್ವಸ್ತ್ರ ಪ್ರಯೋಗಿಸಿದ ಜಗತ್ತಿನ ಏಕೈಕ ಶಕ್ತಿ ಅಮೇರಿಕಾ

ಜಗದಗಲ


ಶರತ್‌ಚಂದ್ರ

ಒಬಮಾರ ಮೊದಲ 'ಪದಚ್ಯುತಿ ರಾಜಕೀಯ' ಹೊಂಡುರಸ್‌ನಲ್ಲಿ

ತನಗಾಗದ, ತನ್ನ ಇಚ್ಛೆಗೆ ವಿರುದ್ಧವಾದ ದಾರಿಯಲ್ಲಿ ಹೋಗುವ ಯಾವುದೇ ದೇಶವನ್ನು ತಾನು ಹಾಗೆ ಮಾಡಲು ಬಿಡುವುದಿಲ್ಲ ಎಂಬುದು ಸುಲಿಗೆಕೋರ ಅಮೆರಿಕದ ನೀತಿ. ಒಬಾಮ ಬಂದ ಮೇಲೆ ಈ ನೀತಿ ಬದಲಾಗಿದೆಯೇ? ಇಲ್ಲ ಎಂದು ಸಾರುತ್ತಿದೆ ಹೊಂಡುರಾಸ್ ದೇಶದ ಚುನಾಯಿತ ಅಧ್ಯಕ್ಷರ ಪದಚ್ಯುತಿ ರಾಜಕೀಯ.

ಹೊಂಡುರಸ್ ದಕ್ಷಿಣ ಅಮೆರಿಕದ ಪುಟ್ಟ ದೇಶ. ಅಲ್ಲಿ ಕಳೆದ ಭಾನುವಾರ (ಜೂನ್ 28) ಒಂದು ಜನಮತ ಸಂಗ್ರಹ ನಡೆಯುವುದಿತ್ತು. ಅದರ ಬದಲು ನಡೆದಿದ್ದು ಚುನಾಯಿತ ಅಧ್ಯಕ್ಷ ಮೇನುಯಲ್ ಜುಲಯ ಅವರನ್ನು ಪದಚ್ಯುತಗೊಳಿಸಿದ ಮಿಲಿಟರಿ ಅಧಿಕಾರ ಕಬಳಿಕೆ. 50 ಸೈನಿಕರ ತುಕಡಿಯೊಂದು ಅಧ್ಯಕ್ಷರ ಭವನಕ್ಕೆ ದಾಳಿ ಮಾಡಿ ಅವರನ್ನು ಬಂಧಿಸಿ ನೆರೆಯ ದೇಶ ಕೊಸ್ಟಾರಿಕಾಕ್ಕೆ ಒಯ್ದಿದ್ದಾರೆ. 50 ಸೈನಿಕರ ತುಕಡಿಯೊಂದು ಬೇಕಾಬಿಟ್ಟಿ ಗುಂಡು ಹಾರಿಸುತ್ತಾ ತಮ್ಮ ಭವನಕ್ಕೆ ನುಗ್ಗುವುದನ್ನು ಸ್ವತಃ ಅವರೇ ನೋಡಿ ಟೆಲಿಸುರ್ ಎಂಬ ಟಿವಿ ವರದಿಗಾರರಿಗೆ ಹೇಳಿದ್ದಾರೆ. ಅದೇ ಸಾಯಂಕಾಲದ ಒಳಗೆ ಹೊಂಡುರಸ್ ಪಾರ್ಲಿಮೆಂಟು ಸ್ಪೀಕರ್ ಅವರು ಅಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ.

ಹೊಂಡುರಾಸ್ 'ಪದಚ್ಯುತಿ'ಯ ಪರಿಸ್ಥಿತಿ



ಹೊಂಡುರಸ್‌ನ ಶ್ರೀಮಂತರ ಆಳುವ ವರ್ಗ ಮತ್ತು ಅವರ ಮಿಲಿಟರಿ ಅಧಿಕಾರಿಗಳಿಗೆ ಚುನಾಯಿತ ಅಧ್ಯಕ್ಷ ಜುಲಯ ಬಗ್ಗೆ ಇಷ್ಟವಾಗದ್ದು ಎರಡು ವಿಷಯಗಳ ಬಗ್ಗೆ. ಅವರು ಅಮೆರಿಕದ ಅಧಿಪತ್ಯದ ಮುಕ್ತ ವಾಣಿಜ್ಯ ಒಪ್ಪಂದದಿಂದ ಹೊರಬಂದು ವೆನೆಜುವೆಲಾ ನಾಯಕತ್ವದ ಬೊಲಿವಾರಿಯನ್ ಕೂಟ 'ಅಲ್ಬಾ' ಸೇರಿದ್ದು ಒಂದು. ಸಂವಿಧಾನದಲ್ಲಿ ಬದಲಾವಣೆ ತರುವ ಮತ್ತು ಅದರ ವಿಧಾನದ ಬಗ್ಗೆ ಅಭಿಪ್ರಾಯ ಸಂಗ್ರಹದ ಮತದಾನಕ್ಕೆ ಆಜ್ಞೆ ಮಾಡಿದ್ದು. ಎರಡನೇ ವಿಷಯದ ಬಗ್ಗೆ ಅಧ್ಯಕ್ಷರು ಮತ್ತು ಆಳುವ ವರ್ಗಗಳ ನಡುವೆ ಜಟಾಪಟಿ ನಡೆದಿತ್ತು. 2005 ರಲ್ಲಿ ಚುನಾಯಿತರಾದ ಜುಲಯ ಅವರ ಲಿಬರಲ್ ಪಕ್ಷಕ್ಕೆ ಪಾರ್ಲಿಮೆಂಟಿನಲ್ಲಿ ಬಹುಮತ ಇಲ್ಲ.

ಬಲಪಂಥೀಯ ವಿರೋಧ ಪಕ್ಷದ ಬಹುಮತ ಇರುವ ಪಾರ್ಲಿಮೆಂಟು ಈ ವಿಷಯವನ್ನು ಸುಪ್ರೀಂ ಕೋರ್ಟಿಗೆ ತೆಗೆದುಕೊಂಡು ಹೋಗಿ, ಅದು ಮತದಾನ ಕಾನೂನು ಬಾಹಿರ ಎಂದು ತೀರ್ಪು ನೀಡಿತ್ತು. 1982 ರಲ್ಲಿ ಬರೆಯಲಾದ ಸಂವಿದಾನ ಅಮೆರಿಕನ್ ಸಾಮ್ರಾಜ್ಯಶಾಹಿ ಬೆಂಬಲಿತ ಬಾಲಬಡುಕರ ಅಧಿಕಾರವನ್ನು ಕಾಪಾಡುವ ಮತ್ತು ಜನರ ರಾಜಕೀಯ ಆಧಿಕಾರ ಮೊಟಕುಗೊಳಿಸುವ ಸಣ್ಣ ಸಂವಿಧಾನ. ಅದರಲ್ಲಿ ತೀವ್ರ ಮಾರ್ಪಾಡು ಅಗತ್ಯ ಇದೆ ಎಂದು ಅಧ್ಯಕ್ಷರ ಅಭಿಪ್ರಾಯ ಬೆಂಬಲಿಸಿ ಕಾರ್ಮಿಕ ಸಂಘಗಳು, ಸಾಮಾಜಿಕ- ರಾಜಕೀಯ ಚಳುವಳಿಗಳು ಭಾರೀ ಪ್ರದರ್ಶನ ಮಾಡಿದವು.

ಜನರಲ್ ಹಠಮಾರಿತನ

ಸುಪ್ರೀಂ ಕೋರ್ಟಿನ ತೀರ್ಪು ಮುಂದೆ ಮಾಡಿ ಮತದಾನದ ಪತ್ರಗಳನ್ನು ಹಂಚದಂತೆ ಮಿಲಿಟರಿ ಮುಖ್ಯಸ್ಥ ತನ್ನ ಪಡೆಗಳಿಗೆ ಆಜ್ಞೆ ಮಾಡಿದ್ದ. ಸಂವಿಧಾನದ ಪ್ರಕಾರ ಅಧ್ಯಕ್ಷರ ಆಜ್ಞೆ ಪಾಲಿಸಬೇಕಾದ ಮಿಲಿಟರಿ ಮುಖ್ಯಸ್ಥ ಜನರಲ್‌ನನ್ನು ಅಧ್ಯಕ್ಷರು ವಜಾ ಮಾಡಿದರು. ಸುಪ್ರೀಂಕೋರ್ಟಿನ ಮುಂದೆ ಈ ವಿವಾದ ಬಂದಾಗ ಜನರಲ್ ವಜಾ ಕಾನೂನು ಬಾಹಿರ ಎಂದು ಸಾರಿತು. ಜನರಲ್ ಮತ್ತು ಸುಪ್ರೀಂ ಕೋರ್ಟಿನ ಕ್ರಮ ಖಂಡಿಸಿ ಮತ್ತು ಅಧ್ಯಕ್ಷರ ಕ್ರಮ ಬೆಂಬಲಿಸಿ ಪುನಃ ಭಾರೀ ಪ್ರದರ್ಶನ ಗಳು ನಡೆದವು. ಮಿಲಿಟರಿಯಿಂದ ಕಿತ್ತುಕೊಂಡು ಮತಪತ್ರಗಳನ್ನು ಹಂಚಲು ಅಧ್ಯಕ್ಷರು ಕ್ರಮ ಕೈಗೊಂಡರು. ಇದು ಪದಚ್ಯುತಿಯ ಹಿನ್ನೆಲೆ.

ಪದಚ್ಯುತಿ ನಂತರ ಬಂದ ಕಾನೂನು ಬಾಹಿರ ಸರ್ಕಾರ ಸುದ್ದಿ ಜನರಿಗೆ ಗೊತ್ತಾಗದಂತೆ ಪ್ರಯತ್ನ ನಡೆಸಿತು. ಜನರ ತೀವ್ರ ಪ್ರತಿಕ್ರಿಯೆಗೆ ಬೆದರಿದ ಸರ್ಕಾರ ದೇಶದ ತುಂಬಾ ಟಿವಿ ಮತ್ತು ವಿದ್ಯುತ್ ಕಡಿತ ಮಾಡಿತು. ಲ್ಯಾಟಿನ್ ಅಮೆರಿಕದ ಸರ್ಕಾರಗಳು ಮತ್ತು ಜನತೆ ಎರಡರಿಂದಲೂ ಹೊಂಡುರಸ್ ಈ ಪದಚ್ಯುತಿ ಬಗ್ಗೆ ತೀವ್ರ ವಿರೋಧ ವ್ಯಕ್ತವಾಗಿದೆ. ಲ್ಯಾಟಿನ್ ಅಮೆರಿಕನ್ ದೇಶಗಳ ಸಂಘಟನೆ ಒ.ಎ.ಎಸ್. ಹೊಂಡುರಸ್ ಪದಚ್ಯುತಿಯನ್ನು ಖಂಡಿಸಿ ಹೊಂಡುರಸ್‌ನ್ನು ಸಂಘಟನೆಯಿಂದ ಅಮಾನತಿನಲ್ಲಿ ಇಟ್ಟಿದೆ. ಚುನಾಯಿತ ಅಧ್ಯಕ್ಷ ಜುಲಯರಿಗೆ ಪುನಃ ಅಧಿಕಾರ ಮರಳಿಸಬೇಕೆಂದು ಒತ್ತಾಯ ಮಾಡಿದೆ. ಯುರೋಪಿಯನ್ ಕೂಟ, ವಿಶ್ವಸಂಸ್ಥೆ ಸಹ ಪದಚ್ಯುತಿಯನ್ನು ಖಂಡಿಸಿ ಇದೇ ರೀತಿಯ ಒತ್ತಾಯ ಮಾಡಿದೆ. ಅಲ್ಲದೆ ತಮ್ಮ ರಾಯಬಾರಿಗಳನ್ನು ಹೊಂಡುರಸ್‌ನಿಂದ ವಾಪಸು ಕರೆಸಿಕೊಂಡಿವೆ.



ಅಮೆರಿಕದ ಕೈವಾಡ

ಅಮೆರಿಕದ ಸರ್ಕಾರದ ಕೈವಾಡ ಈ ಕ್ಷಿಪ್ರಕ್ರಾಂತಿಯಲ್ಲಿ ಸ್ಪಷ್ಟವಾಗಿ ಕಂಡು ಬಂದಿದೆ. ಹೊಂಡುರಸ್‌ನ ಸೈನ್ಯ ಅಮೆರಿಕದ ಸೈನ್ಯದಿಂದ ತರಬೇತಿ ಪಡೆದಿದೆ. ರಾಜಧಾನಿಯಲ್ಲಿ ಅಮೆರಿಕದ ಸೈನ್ಯದ ನೆಲೆ ಸಹ ಇದೆ. ಆ ದೇಶದ ವಿರೋಧ ಪಕ್ಷದ ಬುಡಮೇಲು ಚಟುವಟಿಕೆಗಳಿಗೆ ಅಮೆರಿಕದ ಸರ್ಕಾರ ಮತ್ತು ಅದರ ಸಂಘಟನೆಗಳು ಬೆಂಬಲಿಸುತ್ತಾ ಬಂದಿವೆ. ಭಾರೀ ಹಣ ಅದಕ್ಕೆ ಹರಿದು ಬಂದಿದೆ.

ಅಮೆರಿಕದ ಸರ್ಕಾರದ ಮಿಲಿಟರಿ 'ಆಶೀರ್ವಾದ' ಇಲ್ಲದೆ ಹೊಂಡುರಸ್ ಮಿಲಿಟರಿ ಅಧಿಕಾರಿಗಳಿಗೆ ಪದಚ್ಯುತಿ ನಡೆಸುವ ಧೈರ್ಯ ಬರುತ್ತಿರಲಿಲ್ಲ. ಕೊನೆಗೂ ಪದಚ್ಯುತಿಯನ್ನು ಅಮೆರಿಕ ಸರ್ಕಾರ ಖಂಡಿಸಬೇಕಾಗಿ ಬಂತು. ಆದರೂ ಅದು ಚುನಾಯಿತ ಅಧ್ಯಕ್ಷ ಜುಲಯರನ್ನು ಪುನಃ ಅಧಿಕಾರ ಮರಳಿಸಬೇಕೆಂದು ಕೇಳಿಲ್ಲ. ತನ್ನ ರಾಯಬಾರಿಯನ್ನು ಹೊಂಡುರಸ್‌ನಿಂದ ವಾಪಸು ಸಹ ಕರೆಸಿಕೊಂಡಿಲ್ಲ. ಬದಲಾಗಿ ಪ್ರಸಕ್ತ ಅಧ್ಯಕ್ಷ ಮತ್ತು ಪದಚ್ಯುತ ಅಧ್ಯಕ್ಷ ಜುಲಯ ಅವರು ಮಾತುಕತೆ ನಡೆದು ಒಂದು ಒಪ್ಪಂದಕ್ಕೆ ಬರಬೇಕೆಂದು ಕರೆ ನೀಡಿದೆ. ಹೊಂಡುರಸ್ ಸರ್ಕಾರ ಒ.ಎ.ಎಸ್. ನಡೆಸುತ್ತಿರುವ ಸಂಧಾನಕ್ಕೆ ಪ್ರತಿಕ್ರಿಯಿಸುತ್ತಿಲ್ಲ. ಆದರೆ ಅಮೆರಿಕದ ಬೆಂಬಲದಿಂದ ಕೊಸ್ಟಾರಿಕಾ ಅಧ್ಯಕ್ಷರ ಸಂಧಾನಕ್ಕೆ ಪ್ರತಿಕ್ರಿಯಿಸುತ್ತಿದೆ. ಜುಲಯರ ವಾಪಸಿಗೆ ಜನಮತ ಸಂಗ್ರಹ ಮತ್ತು ಅಲ್ಬಾ ಸೇರ್ಪಡೆ ಕ್ರಮ ವಾಪಸು ಪಡೆಯುವ ಶರತ್ತಿಗೆ ಒತ್ತಡ ಹಾಕಲಾಗುತ್ತಿದೆ. ಇದು ಒಬಾಮಾ ಅಧಿಕಾರಕ್ಕೆ ಬಂದ ಮೇಲೆ ಅಮೆರಿಕ ಬೆಂಬಲಿತ ಮೊದಲ ಪದಚ್ಯುತಿ ಆಗಿದ್ದು ಜಗತ್ತಿನ ತೀವ್ರ ಗಮನ ಸೆಳೆದಿದೆ.

ಈ ನಡುವೆ ಹೊಂಡುರಸ್‌ನಲ್ಲಿ ಭಾರೀ ಪ್ರತಿಭಟನೆಗಳು ನಡೆದಿವೆ. ಜುಲಯ ಒ.ಎ.ಎಸ್. ನಾಯಕರ ಜತೆ ದೇಶ ಪ್ರವೇಶವನ್ನು ಮಿಲಿಟರಿ ಬಲ ಪ್ರದರ್ಶನ ಮೂಲಕ ತಡೆಯಿತು. ಅವರ ವಿಮಾನ ನಿಲ್ದಾಣದಲ್ಲಿ ಇಳಿಯದಂತೆ ತಡೆಯಲಾಯಿತು. ಭಾರೀ ಸಂಖ್ಯೆಯಲ್ಲಿ ಜುಲಯ ಬೆಂಬಲಿಗರು ವಿಮಾನ ನಿಲ್ದಾಣದಲ್ಲಿ ಮಿಲಿಟರಿ ಜತೆ ಕಾದಾಡಿದರು. ಮಿಲಿಟರಿ ಗೋಳಿಬಾರು ಮಾಡಿ ಸಾವು ನೋವುಗಳಾಗಿವೆ. ಜುಲಯ ಅಮೆರಿಕದ ವಿದೇಶ ಕಾರ್ಯದರ್ಶಿ ಹಿಲೆರಿ ಕ್ಲಿಂಟನ್ ಮತ್ತು ಕೊಸ್ಟಾರಿಕಾ ಅಧ್ಯಕ್ಷರನ್ನು ಭೇಟಿ ಮಾಡಿದ್ದಾರೆ. ○



ಜುಲೈ 8, 2009 ರಂದು ಬೆಂಗಳೂರಿನ ಕಾರ್ಪೊರೇಷನ್ ಬಳಿ ಜೆಎಂಎಸ್, ಡಿವೈಎಫ್‌ಐ ನೇತೃತ್ವದಲ್ಲಿ ಬಸ್ ಪ್ರಯಾಣ ದರ ಏರಿಕೆ ವಿರುದ್ಧ ನಡೆದ ಪ್ರತಿಭಟನೆಯ ಚಿತ್ರ. (ದರ ಏರಿಕೆ ಕುರಿತು ಪುಟ ... ನೋಡಿ).

ಯುಪಿಎ ದರ್ಬಾರ್

ಪೆಟ್ರೋಲ್,ಡೀಸೆಲ್ ಬೆಲೆ ಏರಿಕೆ

ದೇಹಕ್ಕೆ ನರನಾಡಿಗಳಿದ್ದಂತೆ ದೇಶಕ್ಕೆ ಆರ್ಥಿಕತೆಗೆ ಸಾರಿಗೆ ವ್ಯವಸ್ಥೆ. ಇಂತಹ ಸಾರಿಗೆಗೆ ರಕ್ತ ಪೂರೈಕೆಯಂತೆ ಪೆಟ್ರೋಲ್ -ಡೀಸೆಲ್ ಕೇಂದ್ರ. 'ಆಮ್ ಆದ್ಮಿ'ಯ ಹೆಸರನ್ನು ಹೇಳುವ ಕೇಂದ್ರ ಯುಪಿಎ ಸರ್ಕಾರ ಈ ಪೆಟ್ರೋಲ್-ಡೀಸೆಲ್ ಬೆಲೆಯನ್ನು ಏರಿಸಿದೆ. ಪೆಟ್ರೋಲ್-ಡೀಸೆಲ್ ಬೆಲೆ ಏರಿಸುವುದು ಎಂದರೆ ಅದು ಕೇವಲ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಮಾತ್ರವಾಗಿ ಉಳಿಯುವುದಿಲ್ಲ. ಸರಕು ಸಾಗಣೆ ದುಬಾರಿಯಾಗುವುದರಿಂದ ಜನರ ಎಲ್ಲಾ ಬಗೆಯ ಜೀವನಾವಶ್ಯಕ ವಸ್ತುಗಳ ಬೆಲೆಗಳ ಮೇಲೆಯೂ ಅದು ಪರಿಣಾಮ ಬೀರುತ್ತದೆ. ಬೇಳೆಕಾಳು ಆಹಾರ ಧಾನ್ಯ, ಹಣ್ಣು ತರಕಾರಿ, ಹಾಲು, ಔಷಧಿ.. ಎಲ್ಲವನ್ನು ತುಟ್ಟಿಯಾಗುತ್ತವೆ. ಜನರ ಪ್ರಯಾಣದರವೂ ಏರಿಕೆ ಏರುವುದರಿಂದ ದುಡಿಯುವ ಜನರ ನೈಜ ಆದಾಯ ಮಟ್ಟವನ್ನು ಕುಸಿಯುತ್ತದೆ.

ಇವಾವುದರ ಬಗೆಗೆ 'ಕೆಬರಿಲ್ಲದ' ಕೇಂದ್ರ ಸರ್ಕಾರ ಯುಪಿಎ ಸರ್ಕಾರ ಮುಂದಿನ ದಿನಗಳಲ್ಲಿ ಸಂಪೂರ್ಣವಾಗಿ ತೈಲ ಬೆಲೆಯ ಮೇಲಿನ ನಿಯಂತ್ರಣವನ್ನೇ ತೆಗೆದು ಹಾಕಿ ಅಂತಹ ರಾಷ್ಟ್ರೀಯ ಮಾರುಕಟ್ಟೆಯ ಬೆಲೆ ಏರಿಕೆಯ ಬೀಸುಗಾಳಿ ಜನ ಸಾಮಾನ್ಯರ ಬದುಕಿನ ನೆಮ್ಮದಿಯನ್ನು ಒಡ್ಡಲು ಹೊರಟಿದೆ. 'ಆಮ್ ಆದ್ಮಿ'ಗೆ ಯುಪಿಎ ಸರ್ಕಾರದ ಒಂದು ಅಮೋಘ ಕೊಡುಗೆ ಇದು.

ಆಹಾ!! ಎಂತಹ ಆಹಾರ ಭದ್ರತೆ:

ಕೇಂದ್ರ ಸರ್ಕಾರ ಆದ್ಮಿ ಹೆಸರಿನಲ್ಲಿ ಏನೇನೋ ಕ್ರಮಗಳಿಗೆ ಕೈ ಹಾಕುತ್ತಿದೆ. ಅದೀಗ ಬಡಜನರ ಆಹಾರ ಭದ್ರತೆಯ ಬಗೆಗೆ ಮಾತನಾಡುತ್ತಿದೆ. ದೇಶದ ಬಡಜನರಿಗೆ 3 ರೂ.ಗೆ ಕೆ.ಜಿ.ಯಂತೆ 25.ಕೆ.ಜಿ ಅಕ್ಕಿ ಅಥವಾ ಗೋಧಿಯನ್ನು ಕೊಡುವ ಬಗ್ಗೆ ಅದು ಬಜೆಟ್‌ನಲ್ಲಿ ಘೋಷಿಸಿದೆ. ಮಾತ್ರವಲ್ಲ ಈ ನಿಟ್ಟಿನಲ್ಲಿ ಆಹಾರ ಭದ್ರತೆ ಕಾಯ್ದೆಯನ್ನು ತರಲು ಹೊರಟಿದೆ.

ಜನರಿಗೆ ಆಹಾರ ಭದ್ರತೆ, ಖಂಡಿತ ಬೇಕಾಗಿದೆ. ಆದರೆ ಬಡಜನರ ಆಹಾರ ಭದ್ರತೆಯ ಬಗೆಗೆ ಮಾತನಾಡುತ್ತಾ ಯುಪಿಎ ಸರ್ಕಾರ ಮಾಡಲು ಹೊರಟಿರುವುದೇ ಬೇರೆ. ಹೊಸ ಕಾಯ್ದೆ ಜಾರಿಗೆ ಬಂದರೆ ಈಗಾಗಲೇ ಅಂತ್ಯೋದಯ ಯೋಜನೆಯಡಿ ಬಡವರಿಗೆ ಈಗ ದೊರೆಯುತ್ತಿರುವ ಆಹಾರ ಧಾನ್ಯದಲ್ಲಿ ಕಡಿತವೇ ಆಗಲಿದೆ. ಅಷ್ಟು ಮಾತ್ರವಲ್ಲ ಆಹಾರ ಧಾನ್ಯಕ್ಕೆ ಬಡವರು ಕೊಡಬೇಕಾದ ಬೆಲೆಯೂ ಏರಲಿದೆ.(ವಿವರಗಳಿಗೆ ಇದೇ ಸಂಚಿಕೆಯ ಮತ್ತೊಂದು ಲೇಖನ ನೋಡಿ)

ಮಾತು, ಪೋಷಣೆ ಎಲ್ಲಾ ಆಹಾರ ಭದ್ರತೆ ಬಗ್ಗೆ ಮಾಡುವ ಕೆಲಸ ಮಾತ್ರ ಇರುವ ಅಲ್ಪಸ್ವಲ್ಪ ಭದ್ರತೆಯನ್ನೂ ಕಸಿದುಕೊಳ್ಳುವ ಕೆಲಸ.

'ಶಿಕ್ಷಣ ಕ್ರಾಂತಿ' !?

ಯುಪಿಎ ಸರ್ಕಾರ ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆ ತರುವ ಮಾತನಾಡುತ್ತಿದೆ. ಈ ದಿಢೀರ್ ಕ್ರಾಂತಿ ಮಾಡುವ ಭರದಲ್ಲಿ ಯುಪಿಎ ಸರ್ಕಾರ, 10ನೇ ತರಗತಿಯ ಪರೀಕ್ಷೆಯನ್ನು ಇದ್ದವರು ಮಾತ್ರ ತೆಗೆದುಕೊಳ್ಳುವಂತೆ ಮಾಡುವುದು, ದೇಶದಾದ್ಯಂತ ಎಲ್ಲೆಡೆಗೂ ಅನ್ವಯವಾಗುವ ಒಂದೇ ಪ್ರೌಢಶಾಲಾ ಮಂಡಳಿ ಸ್ಥಾಪನೆ... ದೇಶದಾದ್ಯಂತ ಏಕರೂಪದ ಪರೀಕ್ಷೆ... ಹೀಗೆ ಹಲವಾರು ಯೋಜನೆಗಳನ್ನು ಹರಿಯಬಿಟ್ಟಿದೆ. ಭಾರತ ದೇಶ ಒಕ್ಕೂಟ ಇಲ್ಲಿ ಭಾಷೆ, ಸಂಸ್ಕೃತಿ, ಹಾಗೂ ಸಾಮಾಜಿಕ, ಆರ್ಥಿಕ ಭೌಗೋಳಿಕ ಪರಿಸರ ಮುಂತಾದವುಗಳ ಕೃಷಿಯಿಂದ ಅತ್ಯಂತ ವೈವಿಧ್ಯಮಯವಾದ ದೇಶವಿದು. ಇಂತಹ ಸಂದರ್ಭದಲ್ಲಿ ಶಿಕ್ಷಣ ರಂಗದಲ್ಲಿ ಬದಲಾವಣೆಗಳನ್ನು ತರುವಾಗ ವ್ಯಾಪಕ ಚಿಂತನೆ, ಸಮಾಲೋಚನೆ, ಈ ಪ್ರಶ್ನೆಯಲ್ಲಿ ರಾಜ್ಯ ಸರ್ಕಾರಗಳು, ತಜ್ಞರು ಜನತೆಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಕ್ರಮಗಳು ಅಗತ್ಯ ಎಂದು ಯುಪಿಎ ಸರ್ಕಾರಕ್ಕೆ ಅನಿಸುತ್ತಲೇ ಇಲ್ಲ. ಇಂತಹ ನೀತಿಗಳ ಚರ್ಚೆಗಾಗಿಯೇ ಕೇಂದ್ರ ಶಿಕ್ಷಣ ಸಲಹಾ ಮಂಡಳಿಯ ನ್ನತಹ ಹಲವು ವೇದಿಕೆಗಳಿವೆ ಎಂಬುದನ್ನು ಕೇಂದ್ರ ಸರ್ಕಾರ ಲೆಕ್ಕಕ್ಕೆ ಇಟ್ಟುಕೊಂಡಿಲ್ಲ ಎಂದರೆ ಎಂತಹ ದುರಂತದ ಸಂಗತಿ.

ಇನ್ನು ಶಿಕ್ಷಣವನ್ನು ಮೂಲಭೂತ ಹಕ್ಕಾಗಿಸುವ ಮಸೂದೆ ಬಗೆಗೆ. ಇಂತಹ ಮಸೂದೆಯನ್ನು ಹಿಂದೆ ಎನ್‌ಡಿಎ ಸರ್ಕಾರವೂ ಮಂಡಿಸಿದೆ, ಯುಪಿಎ ಸರ್ಕಾರವೂ ಮಂಡಿಸಿದೆ. ಹೊಸತೇನಿದೆ ಇದರಲ್ಲಿ. ಎನ್‌ಡಿಎ ಸರ್ಕಾರದ ಮಸೂದೆಯಲ್ಲಿ ಪ್ರಾಥಮಿಕ ಶಿಕ್ಷಣ ವಿದ್ಯಾರ್ಥಿಯ ಮೂಲಭೂತ ಹಕ್ಕು. ಆದರೆ ಅದನ್ನು ಕೊಡಿಸಬೇಕಾದ ಹೊಣೆ ಪೋಷಕರದ್ದೂ ಎಂದು ಇತ್ತು. ಇಂತಹ ಧೋರಣೆಗಿಂತ ಇದು ಹೇಗೆ ಭಿನ್ನ.?

ಕಡು ಬಡತನ, ದುರ್ಬರ ಜೀವನದ ಪರಿಸ್ಥಿತಿಗಳಿಂದಾಗಿ ಪೋಷಕರು ಮಕ್ಕಳನ್ನು ಶಾಲೆಗೆ ಕಳಿಸಲಾಗದೆ ದುಡಿಮೆಗೆ ಕಳಿಸಿದರೆ ಅಂತಹ ಬಡವರ ಜೀವನದಲ್ಲಿ ಮೂಲಭೂತ ಬದಲಾವಣೆ ತರುವುದಲ್ಲವೇ ಪರಿಹಾರ. ಅಂತಹ ಕ್ರಮ ಹೋಗಲಿ, ಅಂತಹ ಚಿಂತನೆಯಾದರೂ ಇದೆಯೇ ಸರ್ಕಾರಕ್ಕೆ?

ಬಿಜೆಪಿ ದರ್ಬಾರ್

ಸರ್ಕಾರದ ಘನ ಸಾಧನೆಗಳು

ಅಳಿಯನ ಕುರುಡು ಬೆಳಗಾದ ಮೇಲೆ ತಿಳಿಯಿತು ಎಂಬಂತೆ ಚುನಾವಣೆಗಳು ಮುಗಿದ ಮೇಲೆ ಬಿಜೆಪಿಯ ನಿಜ ಬಣ್ಣ ವೇಗವಾಗಿ ಬಯಲಾಗತೊಡಗಿದೆ. ಇದರಲ್ಲಿ ರಾಜ್ಯ ಬಿಜೆಪಿ ಸರ್ಕಾರದ ಜನವಿರೋಧಿತನದ ನೀತಿ, ನಿರ್ಧಾರಗಳು ಒಂದು ಕಡೆಯಾದರೆ ಮತಾಂಧ ಆರೆಸ್ಸೆಸ್ ನಿಯಂತ್ರಣದ ಬಿಜೆಪಿಯ ಬಚ್ಚಿಟ್ಟ ಅಜೆಂಡಾಗಳು ಈಗೀಗ ಒಂದೊಂದು ಹೊರಬರತೊಡಗಿವೆ.

ವಿದ್ಯುತ್ ದರ ಏರಿಕೆ : ರಾಜ್ಯ ಹೆದ್ದಾರಿಗಳಲ್ಲಿ ವಾಹನಗಳು ಸಂಚರಿಸಲು ರಸ್ತೆ ಸುಂಕ ವಿಧಿಸಿದ್ದಾಯಿತು. ಇದೀಗ ವಿದ್ಯುತ್ ದರ ಏರಿಕೆಯ ಮೂಲಕ ಸಾರ್ವಜನಿಕರಿಗೆ ವಿದ್ಯುತ್ ಚಿಕಿತ್ಸೆ -ಶಾಕ್ ಟ್ರೀಟ್‌ಮೆಂಟ್ ಕೊಡಲು ರಾಜ್ಯ ಬಿಜೆಪಿ ಸರ್ಕಾರ ಹೊರಟಿದೆ. ಅದೂ ಅಷ್ಟಿಷ್ಟಲ್ಲ ಶೇಕಡಾ 20 ರಷ್ಟು ದರ ಏರಿಕೆ.

ದೂರದೃಷ್ಟಿಯಿಲ್ಲದ, ಚುನಾವಣೆಯನ್ನು ಗೆಲ್ಲುವ ಸ್ವಾರ್ಥ ಪ್ರೇರಿತವಾದ ಬಿಜೆಪಿಯ ಸಂಕುಚಿತ ಧೋರಣೆಯ ಫಲ ಈ ವಿದ್ಯುತ್ ದರ ಏರಿಕೆ ಎಂಬುದನ್ನು ಜನಶಕ್ತಿಯ ಲೇಖನಗಳು ಈಗಾಗಲೇ ಬಯಲು ಗೊಳಿಸಿದೆ.

ಸಾರಿಗೆ ದರದ ದಿಡೀರ್ ಏರಿಕೆ

ರಾಜ್ಯ ಬಿಜೆಪಿ ಸರ್ಕಾರವು ದಿಡೀರೆಂದು ಪ್ರಯಾಣದರ ಏರಿಕೆ ಮಾಡಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿನ ತೈಲಬೆಲೆ ಕುಸಿತ ಪರಿಣಾಮವಾಗಿ ಪೆಟ್ರೋಲ್, ಡೀಸೆಲ್ ಬೆಲೆಗಳು ಎಷ್ಟೆಲ್ಲಾ ಕುಸಿತ ಕಂಡರೂ ಸಾರಿಗೆ ದರಗಳು ಮಾತ್ರ ಬರಲಾಗದೇ ಅದೇ ಮಟ್ಟದಲ್ಲಿದ್ದನ್ನು ಕಂಡಿದ್ದ ಜನರಿಗೆ ನಿಜಕ್ಕೂ ಇದು ಆಘಾತಕಾರಿ ಸುದ್ದಿಯೇ.

ಬಿಜೆಪಿ ತಾನು ವಿರೋಧ ಪಕ್ಷದಲ್ಲಿದ್ದಾಗ ಮಂಡಿಸಿದ್ದ ವಾದಗಳನ್ನೆಲ್ಲಾ ಪಾಪ ಈಗ ಮರೆತೇಬಿಟ್ಟಿದೆ. ಸಾರಿಗೆ ಸಂಸ್ಥೆಯೊಳಗಿನ ಸೋರಿಕೆ ತಡೆದರೆ ಬೆಲೆ ಏರಿಕೆ ಅಗತ್ಯವಿಲ್ಲವೆಂದೂ ಎಷ್ಟೋ

ಹಿಂದೆ ವಿರೋಧ ಪಕ್ಷದಲ್ಲಿದ್ದಾಗ ಬೊಬ್ಬಿಡುತ್ತಿತ್ತು. ಈಗ ಆ ಮಾತನ್ನು ಅದು ನೆನಪಿಸಿಕೊಳ್ಳಲು ಸಹ ಬಯಸುವುದಿಲ್ಲ. ಪ್ರಯಾಣದರ ಏರಿಕೆಯು ಶೇ.3.5 ರಷ್ಟು ಮಾತ್ರ ಎಂದು ಸರ್ಕಾರ ಹೇಳಿದೆ. ಆದರೆ ಪ್ರಾಯೋಗಿಕವಾಗಿ ಇದರ ಏರಿಕೆ ಜಾರಿಯಾದಾಗ ಅದು ಇನ್ನೂ ಎಷ್ಟೋ ಹೆಚ್ಚಿರುವ ಸಾಧ್ಯತೆಯೇ ಜಾಸ್ತಿ. ಇದು ಜನರ ಜೀವನಾನುಭವ. ಒಟ್ಟಿನಲ್ಲಿ ತನ್ನದು ಜನವಿರೋಧಿ ದಾರಿಯೇ ಎಂಬುದನ್ನು ಬಿಜೆಪಿ ಸರ್ಕಾರ ಮತ್ತೆ ಮತ್ತೆ ಸಾಬೀತುಪಡಿಸುತ್ತಿದೆ.

ಆರೆಸ್ಸೆಸ್ ಅಜೆಂಡಾಗಳು ಮುಂಚೂಣಿಗೆ

ವೇದ ವಿ.ವಿ. ವೇದ ವಿಶ್ವವಿದ್ಯಾಲಯ ಸ್ಥಾಪನೆಯ ತೀರ್ಮಾನವಾಯಿತು. ಕರ್ನಾಟಕದ ವಿ.ವಿ.ಗಳಲ್ಲಿ ಜ್ಯೋತಿಷ್ಯ ಯೋಗಗಳನ್ನು ತುರುಕುವ ಪ್ರಯತ್ನಗಳಾಯಿತು. ರಾಜ್ಯ ಬಿಜೆಪಿ ಸರ್ಕಾರ ಇದೀಗ ಮತ್ತೊಂದು ಅತಿಸೂಕ್ಷ್ಮ ಪ್ರಶ್ನೆಯನ್ನು ತನ್ನ ರಾಜಕೀಯ ಲಾಭಕ್ಕೆ ಬಳಸಿಕೊಳ್ಳಲು ಹೊರಟಿದೆ.

ಆಹಾರದ ಹಕ್ಕಿನ ಮೇಲೆ ಧಾಳಿ : ಗೋಹತ್ಯೆ ನಿಷೇದ ಕಾಯ್ದೆಗೆ ತಿದ್ದುಪಡಿ ತಂದು ರಾಜ್ಯದಲ್ಲಿ ಗೋಹತ್ಯೆಯನ್ನು ನಿಷೇಧಿಸಬೇಕೆಂದು ತೀರ್ಮಾನಿಸಿರುವ ರಾಜ್ಯ ಬಿಜೆಪಿ ಸರ್ಕಾರದ ಕ್ರಮ ನಿಜಕ್ಕೂ ಆರೆಸ್ಸೆಸ್‌ನ ಅಜೆಂಡಾರ ಜಾರಿಯ ಯತ್ನ.

ಇದು ಅಲ್ಪಸಂಖ್ಯಾತರು, ದಲಿತರು, ಮುಂತಾದ ಜನಸಮುದಾಯಗಳ ಆಹಾರದ ಹಕ್ಕಿನ ಮೇಲೆ ನೇರ ದಾಳಿಯಾಗಿದೆ. ಅಷ್ಟು ಮಾತ್ರವಲ್ಲ, ದನಗಳ ಸಾಗಾಟ, ದನಗಳ ಮಾಂಸ ಮಾರಾಟ ಇತ್ಯಾದಿ ಹೆಸರಿನಲ್ಲಿ ರಾಜ್ಯದ ಕರಾವಳಿಯಲ್ಲಿ ಅಲ್ಪಸಂಖ್ಯಾತ ಸಮುದಾಯದ ಜನರ ಮೇಲೆ ದೌರ್ಜನ್ಯ ದಾಳಿಗಳನ್ನು ಭಜರಂಗದಳ ಮುಂತಾದ ಸಂಘ ಪರಿವಾರದ ಸಂಘಟನೆಗಳು ನಡೆಸುತ್ತಿದ್ದು ಇದು ಜನಗಳನ್ನು ಕೋಮು ಆಧಾರದಲ್ಲಿ ಧೃವೀಕರಣ ಮಾಡಿ ರಾಜಕೀಯ ಲಾಭ ಗಳಿಸಲು ಬಿಜೆಪಿಗೆ ಒಂದು ಅಸ್ತ್ರವಾಗಿದೆ. ಇದನ್ನು ರಾಜ್ಯವ್ಯಾಪಿಯಾಗಿ ವಿಸ್ತರಿಸುವ ವ್ಯವಸ್ಥಿತ ಹುನ್ನಾರ ಈ ಕ್ರಮದ ಹಿಂದೆ ಇದೆ.



'ಲಿಬರ್ಹಾನ್' ವರದಿ ಬಹಿರಂಗಗೊಳಿಸಿ.. ಈಗಲೇ....

'ಭಾರತದ ಜಾತ್ಯಾತೀತ ಸ್ವರೂಪದ ವಿರುದ್ಧ ಸಂಘ ಪರಿವಾರ ಎಸಗಿದ ಒಂದು ಅತಿ ಘೋರ ಅಪರಾಧ ಬಾಬರಿ ಮಸೀದಿಯ ಧ್ವಂಸ. ಡಿಸೆಂಬರ್ 6, 1992 ರಂದು ನಡೆದ ಈ ಪ್ರಕರಣದಲ್ಲಿ ಅಂದಿನ ಕೇಂದ್ರ ಸರ್ಕಾರದ ಪಾತ್ರ ಸಹ ಉಗ್ರವಾದ ಟೀಕೆ ಅರ್ಹವೇ ಸರಿ. ಈ ರಾಷ್ಟ್ರೀಯ ಅಪಮಾನದ ಪ್ರಕರಣಕ್ಕೆ ಹೊಣೆಗಾರರಾದ ಅಪರಾಧಿಗಳನ್ನು ನಿರ್ದಿಷ್ಟಪಡಿಸಲು ಲಿಬರಾನ್ ಆಯೋಗವನ್ನು ವ್ಯವಸ್ಥೆಗೊಳಿಸಲಾಯಿತು. ದುರದೃಷ್ಟವಶಾತ್ ಆಯೋಗವು ದಾಖಲೆ ಪ್ರಮಾಣದಲ್ಲಿ ಅಂದರೆ 48 ಬಾರಿ ಅವಧಿ ವಿಸ್ತರಣೆಯನ್ನು ಪಡೆದುಕೊಂಡು 16 ವರ್ಷಗಳ ನಂತರ ಇದೀಗ ವರದಿಯನ್ನು ಸಲ್ಲಿಸಿದೆ.

ಇದೀಗ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಪ್ರಸ್ತುತ ಪಾರ್ಲಿಮೆಂಟಿನ ಅಧಿವೇಶನದ ಅವಧಿಯಲ್ಲೇ ವರದಿಯನ್ನು ಮಂಡಿಸುವ ಮೂಲಕ ವರದಿಯನ್ನು ಬಹಿರಂಗಗೊಳಿಸಬೇಕಾದ ಕರ್ತವ್ಯ ಕೇಂದ್ರ ಸರ್ಕಾರದ ಮೇಲಿದೆ." ಇದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಲಿಬರಾನ್ ವರದಿ ಸಂಬಂಧ ಕೇಂದ್ರ ಸರ್ಕಾರಕ್ಕೆ ಮಾಡಿರುವ ಒತ್ತಾಯ.

ಕಬಡ್ಡಿ 'ಪ್ರೇಮ'ದ ಪರಿ



ನಕುಲ

ದೇಸೀ ಆಟವಾದ ಕಬಡ್ಡಿ ಕೇವಲ ಗ್ರಾಮೀಣ ಯುವಜನತೆಗೆ ಮಾತ್ರ ಮೀಸಲೇನೋ ಎಂಬಂತಾಗಿ, ಬಹುಜನರ ಆಕರ್ಷಣೆ ಗಳಿಸಿಕೊಳ್ಳುವಲ್ಲಿ ಹೆಣಗುತ್ತಿರುವ ಕ್ರೀಡೆ. ಗ್ರಾಮೀಣ ಪ್ರದೇಶಗಳಲ್ಲಿ ಈಗಲೂ ಕಬಡ್ಡಿ ಅತ್ಯಂತ ಜನಪ್ರಿಯ ಕ್ರೀಡೆ. ಇದಕ್ಕೆ, ನಮ್ಮನ್ನಾಳುವವರ ಕ್ರೀಡಾ ನೀತಿಗಳು, ಕ್ರೀಡೆಯಲ್ಲಿನ ರಾಜಕೀಯ ಮತ್ತು ದೃಶ್ಯ ಮಾಧ್ಯಮಗಳಲ್ಲಿ ಹಣ ಬಾಚಲು ಸಹಾಯಕವಾಗುವ ಕ್ರೀಡೆಗಳ ಮಧ್ಯೆ ಕಬಡ್ಡಿಗೆ ಸ್ಥಾನವೇ ಇಲ್ಲದಂತಾಗಿದೆ. ಇಂತಹ ಸಂದರ್ಭದಲ್ಲಿ, ಸ್ವತಃ ಕಬಡ್ಡಿ ಪಟುವಾಗಿರುವ, ನಿರ್ದೇಶಕ ನರೇಂದ್ರ ಬಾಬು ಆಟದ ಮೇಲಿನ ಪ್ರೀತಿಯಿಂದ 'ಕಬಡ್ಡಿ' ಚಿತ್ರ ಮಾಡಿ, ಮೆಚ್ಚುಗೆಗೆ ಪಾತ್ರರಾಗುತ್ತಾರೆ. ಆದರೆ ತಾಂತ್ರಿಕ ಪರಿಣಿತಿ ಮತ್ತು ಚಿತ್ರ ನಿರ್ದೇಶನದ ಅನುಭವದ ಕೊರತೆಯಿಂದಾಗಿ ಒಂದು ಅತ್ಯುತ್ತಮ ಚಿತ್ರವಾಗಿಸಬಹುದಾಗಿದ್ದ ಅವಕಾಶವನ್ನು ಕಳೆದುಕೊಂಡಿದ್ದಾರೆ.

ಮಂಡ್ಯ ಪರಿಸರದಲ್ಲಿ ಸಾಗುವ ಚಿತ್ರಕಥೆ, ಅಲ್ಲಿನ ಭಾಷೆಯ ಬಳಕೆಯಿಂದ ಗಮನ ಸೆಳೆಯುತ್ತದೆ. ಪ್ರವೀಣ ಎಂಬ ಯುವಕ ಪಿಯುಸಿಯಲ್ಲಿ ಫೇಲ್ ಆಗಿ, ಸ್ಥಳೀಯ ರೈಸ್ ಮಿಲ್ ಒಂದರಲ್ಲಿ ಕೂಲಿಯಾಗಿ ಕೆಲಸ ಮಾಡುತ್ತಿರುತ್ತಾನೆ. ಉತ್ತರ ಕರ್ನಾಟಕದ ಕಡೆಯವರಾದ ಕಬಡ್ಡಿ ಕೋಚ್ ಬೀರೇಶ್ (ಕಿಶೋರ್) ಆ ಊರಿನ ಕಾಲೇಜಿಗೆ ಕೋಚ್ ಆಗಿ ಬರುತ್ತಾರೆ. ಅವರು ಪ್ರವೀಣನ ಪ್ರತಿಭೆಯನ್ನು ಗುರುತಿಸಿ ಕಬಡ್ಡಿ ಪಟುವಾಗಿ ತಯಾರು ಮಾಡುತ್ತಾರೆ. ಆತ ಪಿಯುಸಿ ಪಾಸಾಗುವ ಸಲುವಾಗಿ ಸ್ಥಳೀಯ ಪ್ರಸಿದ್ಧ ಕಬಡ್ಡಿ ಪಟು...... (ಧರ್ಮ)ನ ತಂಗಿ ಪ್ರಿಯಾ (ಪ್ರಿಯಾಂಕ)ಬಳಿ ಇಂಗ್ಲೀಷ್ ಪಾಠಕ್ಕೆ ಕಳಿಸುತ್ತಾರೆ. ಅಲ್ಲಿ ಅವರಿಬ್ಬರಿಗೂ ಸ್ನೇಹವಾಗಿ, ಸ್ನೇಹ ಪ್ರೀತಿಗೆ ತಿರುಗುತ್ತದೆ. ಇದನ್ನು ಸಹಿಸದ ಸಹೋದರರು ಪ್ರವೀಣದ ಕ್ರೀಡಾ ಬದುಕಿಗೆ ಕಂಟಕರಾಗುತ್ತಾರೆ. ಆತನನ್ನು ಊರು ಬಿಟ್ಟು ಹೋಗುವಂತೆ ಮಾಡುತ್ತಾರೆ. ಆದರೆ ಕಬಡ್ಡಿಗೆ ತನ್ನನ್ನು ಅರ್ಪಿಸಿಕೊಂಡ ಕೋಚ್ ಬೀರೇಶ್ ಕ್ರೀಡೆಯಲ್ಲಿನ ರಾಜಕೀಯ ಕಂಡು ಹತಾಶರಾದರೂ, ತಮ್ಮ ಸಂಪರ್ಕಗಳ ನೆರವಿನಿಂದ ಪ್ರವೀಣನನ್ನು ಬೆಂಗಳೂರಿಗೆ ಕಳಿಸಿ ಅಲ್ಲಿ ಕಾಲೇಜಿಗೆ ಸೇರಿಕೊಂಡು, ಕಬಡ್ಡಿ ಮುಂದುವರಿಸಲು ಸಹಾಯ ಮಾಡುತ್ತಾರೆ. ಆದರೆ ಅಲ್ಲಿಯೂ ಪ್ರತಿಭೆಗೆ ಮನ್ನಣೆಗಿಂತ, ಪ್ರಭಾವಿಗಳ ಕೈ ಮೇಲಾಗುತ್ತದೆ. ಜೊತೆಗೆ ಆಟದ ಸಂದರ್ಭದಲ್ಲಿ ಪ್ರವೀಣ ಕಾಲು ಮುರಿದುಕೊಂಡು, ಕಬಡ್ಡಿ ಆಟದಿಂದ ಶಾಶ್ವತವಾಗಿ ದೂರವುಳಿಯುವಂತಾಗುತ್ತದೆ. ಇಲ್ಲಿ ಆಟದಲ್ಲಿನ ರಾಜಕೀಯ ಒಳಸುಳಿಗಳನ್ನು ತೆರೆದಿಡುವಲ್ಲಿ ನರೇಂದ್ರ ಬಾಬು ಯಶಸ್ವಿಯಾಗಿದ್ದಾರೆ.

ಕೊನೆಗೆ ತಾನು ಮೆಚ್ಚಿದ ಹುಡುಗಿ ಪ್ರಿಯಾಳಿಗಾಗಿ ಮತ್ತೆ ಊರಿಗೆ ವಾಪಸ್ಸಾಗುತ್ತಾನೆ ಪ್ರವೀಣ. ಪ್ರಿಯಾ ಅಣ್ಣಂದಿರು ಪ್ರಿಯಳನ್ನು ಮದುವೆಯಾಗಬೇಕೆಂದರೆ ತಮ್ಮ ಮೇಲೆ ಕಬಡ್ಡಿ ಆಡಿ ಗೆಲ್ಲೆಂದು ಸವಾಲೆಸೆಯುತ್ತಾರೆ. ತಾನು ಮೆಚ್ಚಿದ ಹುಡುಗಿಯನ್ನು ಪಡೆಯುವ ಸಲುವಾಗಿ ಆ ಸವಾಲನ್ನು ಒಪ್ಪಿಕೊಳ್ಳುತ್ತಾನೆ ಪ್ರವೀಣ. ಕೊಲೆ ಕೇಸೊಂದರಲ್ಲಿ ಜೈಲು ಪಾಲಾಗಿದ್ದ ಅದೇ ಊರಿನ ತನ್ನ ಸ್ನೇಹಿತರನ್ನು ಬಿಡಿಸಿಕೊಂಡು ಬರುತ್ತಾನೆ. ಅದಕ್ಕೆ ಜೂಜುಕೋರನಾದ ಅವಿನಾಶ್ ಐದು ಲಕ್ಷ



ರೂ.ಗಳ ಸಹಾಯ ಮಾಡುತ್ತಾನೆ. ಪಂದ್ಯ ನಡೆದು ಅಂತಿಮವಾಗಿ ಪ್ರವೀಣ ತಂಡ ಜಯಗಳಿಸುತ್ತದೆ. ಇದು 'ಕಬಡ್ಡಿ' ಚಿತ್ರದ ಒಟ್ಟು ಕಥೆ.

ಚಿತ್ರದ ಹೆಸರು 'ಕಬಡ್ಡಿ' ಅಂತಿದ್ದರೂ ವಾಸ್ತವವಾಗಿ ಇದೊಂದು ಪ್ರೇಮ ಕಥೆಯಾಗಿದ್ದು, ಕಬಡ್ಡಿ ಅದಕ್ಕೆ ಪೂರಕವಾದ ಅಂಶವಾಗಿರುವುದೇ ಚಿತ್ರದ ಬಹುದೊಡ್ಡ ಕೊರತೆ. ಕಬಡ್ಡಿಯನ್ನು ಉತ್ತೇಜಿಸುವಂತಹ ಸ್ಫೂರ್ತಿಯುತ ಚಿತ್ರಣದ ನಿರೀಕ್ಷೆಯಲ್ಲಿದ್ದವರಿಗೆ ತೀರಾ ನಿರಾಶೆಯಾಗುತ್ತದೆ. ಇತ್ತೀಚೆಗೆ ಹಿಂದಿಯಲ್ಲಿ ತೆರೆಕಂಡ 'ಲಗಾನ್' ಆದಲೀ, ಅಥವಾ 'ಚಕ್ ದೇ ಇಂಡಿಯಾ' ಆಗಲಿ ಇಡೀ ಕಥೆಯೇ ಕ್ರೀಡೆಯ ಮೇಲೆಯೇ ಕೇಂದ್ರೀಕೃತವಾಗಿದ್ದು, ಪ್ರತಿಯೊಂದು ಪಾತ್ರಗಳೂ ಪ್ರಾಮುಖ್ಯತೆ ವಹಿಸಿದ್ದನ್ನು ನಾವು ನೋಡಿದ್ದೇವೆ. ಆದರೆ ಇಲ್ಲಿನ ಕಥೆಯೇ ಬೇರೆ. ನಾಯಕ ಪ್ರವೀಣ್ ಮಾತ್ರ ವಿಜೃಂಭಿಸುತ್ತಾರೆ. ಉಳಿದ ಆಟಗಾರರು ಆಟದಲ್ಲಿ ಕಾಣಲು ಸಿಗುವುದಿಲ್ಲ! ನಾಯಕ ತನ್ನ ಪ್ರೀತಿಯನ್ನು ಉಳಿಸಿಕೊಳ್ಳುವ ಸಲುವಾಗಿ ಮಾತ್ರ ಕಬ್ಬಡಿಯಾಡುತ್ತಾನೆಯೇ ಹೊರತು, ಕಬಡ್ಡಿಗಾಗಿ ಕಬ್ಬಡಿಯಾಡುವುದಿಲ್ಲವೆಂಬುದನ್ನು ಅರಗಿಸಿಕೊಳ್ಳಲು ಕಷ್ಟ! ಯಾವುದೇ ಕ್ರೀಡೆಯಿರಲಿ, ಅದರಲ್ಲಿ ತೊಡಗಿಸಿಕೊಂಡ ಕ್ರೀಡಾಪಟು ಕ್ರೀಡೆಗಾಗಿ ತನ್ನ ಜೀವನವನ್ನು ಮುಡುಪಾಗಿಡುವುದು ಸಹಜವಾಗಿರುವಾಗ, ಇಲ್ಲಿ ಪ್ರೀತಿಯೇ ಮೇಲಾಗಿ ಕಬಡ್ಡಿ ನಗಣ್ಯವಾಗುತ್ತದೆ!

ರಾಷ್ಟ್ರಮಟ್ಟದ ಕಬಡ್ಡಿ ಆಟಗಾರ ಬಿ.ಸಿ. ರಮೇಶ್, ಕಬಡ್ಡಿ ಆಟಗಾರನಾಗಿಯೇ ಸಣ್ಣಪಾತ್ರವೊಂದರಲ್ಲಿ ಕಾಣಿಸಿಕೊಳ್ಳುತ್ತಾರೆ. ಅವರ ಇರುವಿಕೆಯೂ ಚಿತ್ರದ ಹೆಚ್ಚುಗಾರಿಕೆಯನ್ನು ಹೆಚ್ಚಿಸುವಲ್ಲಿ ಸಾಧ್ಯವಾಗಿಲ್ಲ. ಇನ್ನು ನಾಯಕ ಪ್ರವೀಣ್ ಕೂಡಾ ರಾಜ್ಯಮಟ್ಟದ ಕಬಡ್ಡಿ ಆಟಗಾರನಾಗಿದ್ದು, ಅಭಿನಯದಲ್ಲೂ ಗಮನಸೆಳೆಯುತ್ತಾರೆ. ನಾಯಕಿ ಪ್ರಿಯಾಂಕ ಭಾವನೆಗಳಿಲ್ಲದ ಮುಖದಿಂದ ಸಪ್ಪೆಯಾಗುತ್ತಾರೆ.. ಇನ್ನೂ ಹಂಸಲೇಖರ ಖಜಾನೆ ಖಾಲಿಯಾಗಿದೆ.. ಹಾಡುಗಳಾಗಲೀ ಅಥವಾ ಹಿನ್ನಲೆ ಸಂಗೀತವಾಗಲೀ ಹಿತವೆನಿಸುವುದಿಲ್ಲ.. ಕಮರ್ಶಿಯಲ್ ಚೌಕಟ್ಟಿಗೆ ಕಟ್ಟುಬಿದ್ದು, ಗೆಲುವಿಗೆ ಇರಲೆಂದು ಸೇರಿಸಿದ ಒಂದು 'ಐಟಂ ಸಾಂಗ್' ಫಾರ್ಮುಲಾ ತೀರ ಅಸಹನೀಯವಾಗಿದೆ.. ನಿರ್ದೇಶಕರು ಇಂತಹ ಚೌಕಟ್ಟುಗಳನ್ನು ಮೀರಿದ್ದರೆ ಖಂಡಿತ 'ಕಬಡ್ಡಿ'ಯಲ್ಲಿ

ಕಾರ್ಯನಿರತ ಪತ್ರಕರ್ತರ ಸಂಘಕ್ಕೆ 75

ಪತ್ರಕರ್ತರ ಹಕ್ಕುಗಳೂ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯವೂ

ಜುಲೈ 1, 2009ರಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಮೃತ ಮಹೋತ್ಸವ ಸಮಾರಂಭ ನಡೆದಿದೆ. ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲೇ ಸಮಾರಂಭ ನಡೆದು ಸಚಿವರು, ವಿಧಾನ ಸಭಾಧ್ಯಕ್ಷರು, ವಿಧಾನ ಪರಿಷತ್ ಸಭಾಪತಿಗಳು, ವಿರೋಧಪಕ್ಷಗಳ ಮುಖಂಡರು ಹಿರಿಯ ಪತ್ರಕರ್ತರುಗಳು ಪಾಲ್ಗೊಂಡಿದ್ದರು.

ಕಾರ್ಯನಿರತ ಪತ್ರಕರ್ತರ ಸಂಘದಂತಹ ಒಂದು ಸಂಸ್ಥೆಗೆ 75 ವರ್ಷ ತುಂಬಿ ಅದು ಅಮೃತ ಮಹೋತ್ಸವ ಆಚರಿಸುವಂತಹ ಸಂದರ್ಭ ತುಂಬಾ ಮಹತ್ವದ್ದೇ. ಇಂತಹ ಸಂದರ್ಭದಲ್ಲಿ ಮಾಧ್ಯಮದ ಕುರಿತು ವಿಚಾರ, ಚಿಂತನ, ಮಂಥನದ ಜೊತೆಗೆ ಮತ್ತು ಮಹತ್ವದ ಕೆಲ ವಿಚಾರಗಳು ಚರ್ಚೆಗೆ ಒಳಗಾಗಬೇಕಿತ್ತು. ಆದರೆ ಅಂತಹ ಚರ್ಚೆ ಬಹುತೇಕ ನಡೆದಂತೆ ಕಂಡು ಬರಲಿಲ್ಲ ಎಂಬುದು ನಿಜಕ್ಕೂ ವಿಷಾದನೀಯ ಅಂಶ.

ಪತ್ರಕರ್ತರ 'ಅಭಿವ್ಯಕ್ತಿ' ಸ್ವಾತಂತ್ರ್ಯ : 75 ವರ್ಷ ತುಂಬಿದ ಪತ್ರಕರ್ತರ ಸಂಘದ ಸಾಧನೆ ಏನು? ಮಾಧ್ಯಮಗಳನ್ನು ಪ್ರಜಾಪ್ರಭುತ್ವದ ನಾಲ್ಕನೇ ಅಂಗ ಎನ್ನಲಾಗುತ್ತದೆ. ಆದರೆ ಪತ್ರಕರ್ತರು ಸ್ವತಂತ್ರವಾಗಿ ಪತ್ರಿಕಾಧರ್ಮಕ್ಕೆ ಅನುಗುಣವಾಗಿ ಕೆಲಸ ಮಾಡುವ ಸ್ಥಿತಿ ಇಂದು ಇದೆಯೇ? ಇಲ್ಲವಾದರೆ ಪತ್ರಕರ್ತರ ಸಂಘ ಅಂತಹ ಪರಿಸ್ಥಿತಿ ಸೃಷ್ಟಿಗೆ ಯಾವ ಪ್ರಯತ್ನ ನಡೆಸಿದೆ. ಮಾಧ್ಯಮಗಳಲ್ಲಿ ದುಡಿಯುತ್ತಿರುವ ಪತ್ರಕರ್ತರು ಇಂದು ಬಹುತೇಕ ಪತ್ರಿಕಾ ಸಂಸ್ಥೆ ಮತ್ತು ಮಾಧ್ಯಮ ಸಂಸ್ಥೆಗಳ ಆಡಳಿತ ಮಂಡಳಿಗಳ ಮರ್ಜಿಯಲ್ಲಿ ಕೆಲಸ ಮಾಡಬೇಕಾಗಿದೆ. ಅಂದರೆ ಪತ್ರಿಕೆ/ಮಾಧ್ಯಮದ ಮಾಲೀಕ ವರ್ಗದ ಒಲವು ನಿಲುವುಗಳಿಗೆ ತಕ್ಕಂತೆ ತಮ್ಮ ಬರಹದ ವಿಚಾರ, ವಿಮರ್ಶೆ, ತನಿಖೆಯ ಗತಿಯನ್ನು ರೂಪಿಸಿಕೊಳ್ಳಬೇಕಿದೆ. ಮಾಲೀಕ ವರ್ಗವು ಬಂಡವಾಳಶಾಹಿ ಮುಕ್ತ ಆರ್ಥಿಕ ನೀತಿಗಳ ಪರ ಒಲವುಳ್ಳದ್ದಾಗಿದ್ದರೆ ಅದಕ್ಕೆ ತಕ್ಕಂತೆ ವರದಿ ಲೇಖನ ಹೊಸೆಯಬೇಕಾದ ಸ್ಥಿತಿ. ಒಂದು ಪಕ್ಷ ಆಡಳಿತ ವರ್ಗವು ಕೋಮುವಾದಿ ಯಾಗಿದ್ದರೆ ಅದಕ್ಕೆ ತಕ್ಕಂತೆ 'ಅಭಿವ್ಯಕ್ತಿ' ಹೊಮ್ಮಿಸಬೇಕಾದ ಒತ್ತಡ ಇಂದು ಪತ್ರಕರ್ತರ ಮೇಲಿದೆ.

ಆಡಳಿತ ಮಂಡಳಿಗಳ ಒತ್ತಡಗಳನ್ನು ಮೀರಿ ಪತ್ರಕರ್ತರು ಸ್ವತಂತ್ರವಾದ ಜನಪರವಾದ ನಿಲುವು ತಳೆಯಲು ಬರೆಯಲು ಬೇಕಾದ ಪ್ರೇರಣೆ, ಸ್ಫೂರ್ತಿ ಧೈರ್ಯವನ್ನು ತುಂಬುವುದರಲ್ಲಿ ಪತ್ರಕರ್ತರ ಸಂಘದ ಪಾತ್ರ ಮಹತ್ವದಾಗಿತ್ತು. ಅಂತಹ ನೈತಿಕ ಸ್ಥೈರ್ಯ ಪತ್ರತರ್ಕರ ಸಂಘಕ್ಕೆ ಯಾಕೆ ಇಲ್ಲ ಎಂಬ ಬಗ್ಗೆ 75ನೇ ವರ್ಷಾಚರಣೆಯ ಸಂದರ್ಭದಲ್ಲಾದರೂ ಗಂಭೀರವಾಗಿ ಚರ್ಚೆಯಾಗಬೇಕಿತ್ತು.

ಪತ್ರಕರ್ತರ ಹಕ್ಕುಗಳು: ಪತ್ರಕರ್ತರ ಉದ್ಯೋಗ ಭದ್ರತೆ ಜೀವನ ಭದ್ರತೆ, ಸೌಲಭ್ಯ ಸೌಕರ್ಯಗಳು ಮತ್ತು ಇವುಗಳನ್ನು ಉತ್ತಮಗೊಳಿಸಿಕೊಳ್ಳುವಿಕೆಯ ದೃಷ್ಟಿಯಿಂದ ನೋಡಿದರೆ ಕಾರ್ಯನಿರತ ಪತ್ರಕರ್ತರ ಸಂಘ ಪತ್ರಕರ್ತರ ಹಿತಗಳನ್ನು ಕಾಯುವ ಒಂದು ಟ್ರೇಡ್ ಯೂನಿಯನ್ ಆಗಿ ಅಂದರೆ ಕಾರ್ಮಿಕ ಸಂಘವಾಗಿ ಕೆಲಸ ಮಾಡುವುದೂ ಸಹ ತುಂಬಾ ಅಗತ್ಯವಿದೆ. ಕಾನೂನು ದೃಷ್ಟಿಯಿಂದ ನೋಡಿದರೂ ಕಾರ್ಯನಿರತ ಪತ್ರಕರ್ತರ ಸಂಘವು ಒಂದು ಟ್ರೇಡ್ ಯೂನಿಯನ್ ಆಗಿದೆ. ಆ ಕೆಲಸವನ್ನಾದರೂ ಪತ್ರಕರ್ತರ ಸಂಘ ಮಾಡುತ್ತಿದೆಯೇ? ಉಹೂಂ ಅದೂ ಇಲ್ಲ.

ಹಾಗಿದ್ದರೆ ಈ 'ಕಾರ್ಯನಿರತ' ಪತ್ರಕರ್ತರ ಸಂಘ ಏನು ಮಾಡುತ್ತಿದೆ? ತನ್ನನ್ನು ತಾನು ಈ ಪ್ರಶ್ನೆ ಕೇಳಿಕೊಳ್ಳಲು ಪತ್ರಕರ್ತರ ಸಂಘದ 100ನೇ ವರ್ಷದ ಆಚರಣೆ ಬರಬೇಕಾಗಿಲ್ಲ ಅಂತ ಆಶಿಸೋಣ.

ಆರ್. ರಾಮಕೃಷ್ಣ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12, 18th Cross, S.R.Nagar, BANGALORE - 560027 Editor: S.Y.GURUSHANTH